ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 17 ಭಾನುವಾರ 2024

ಸಂಪುಟ: 45 | ಸಂಚಿಕೆ: 210

ಪುಟಗಳು: 12 ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com






ಮೈಸೂರು ಮಿತ್ರ

ನಾಳೆ ಮೈಸೂರಲ್ಲಿ ಕನಕದಾಸರ ಜಯಂತಿ

ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಕುಮಾರಸ್ವಾಮಿ ಭಾಗಿ



ಮೈಸೂರು, ನ.16(ಜಿಎ)–ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಂತ ಶ್ರೀ ಕನಕದಾಸರ ಜಯಂತ್ಯುತ್ಸವ ಸಮಿತಿಯಿಂದ ನಗರದ ಕಲಾಮಂದಿರದಲ್ಲಿ ನ.18ರಂದು ಬೆಳಗ್ಗೆ 11.30ಕ್ಕೆ ಕನಕದಾಸರ 537ನೇ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್ ವಿಷಯ ತಿಳಿಸಿ, ಕನಕ ಪೀಠದ ಶಿವಾನಂದಪುರಿ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟನೆ ಮಾಡುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅಂದು ಬೆಳಗ್ಗೆ 9.30ಕ್ಕೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ವಿವಿಧ ಕಲಾತಂಡಗಳೊಂದಿಗೆ ಕನಕದಾಸರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಬಳಿಕ, 10.30ಕ್ಕೆ ಕಲಾಮಂದಿರದಲ್ಲಿ ರಶ್ಮಿ ಮತ್ತು ತಂಡದಿಂದ 'ಕನಕ ಸಂಗೀತ ಸುಧೆ' ಕಾರ್ಯಕ್ರಮ ನಡೆಯಲಿದೆ. ನಂತರ ನ.22ರಂದು ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಗಮಿಸಲಿದ್ದಾರೆ ಎಂದರು.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕನಕದಾಸರ 6 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಸ್ಥಾಪಿಸಬೇಕು. ಈಗಾಗಲೇ ನ.7ರಂದು ನಡೆದ ಜಯಂತಿ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಗಮನಕ್ಕೆ ತರಲಾಗಿದೆ. ಅಥವಾ ಯಾವುದಾದರೂ ಒಂದು ವೃತ್ತದಲ್ಲಿ ನಿರ್ಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ವೇಳೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಮಹಾದೇವೇಗೌಡ, ಖಜಾಂಚಿ ಎಂ.ನಾಗರಾಜ್, ಸಂಚಾಲಕ ಎಂ.ಶಿವಣ್ಣ, ಸಹಕಾರ್ಯದರ್ಶಿ ಸಿದ್ದನಾಗೇಂದ್ರ, ಸಂಘಟನಾ ಕಾರ್ಯದರ್ಶಿ ಎ.ವಿಶ್ವನಾಥ್, ಎಂ.ಪಿ.ದೀಪಕ್, ನಿರ್ದೇಶಕರಾದ ಜಿ.ಸೋಮಶೇಖರ್, ಧರ್ಮೇಂದ್ರ, ಸೋಮು, ರಾಮಪ್ಪ ರಮೇಶ್ ಉಪಸ್ಥಿತರಿದ್ದರು.

ಅಧಿಕಾರಿಗಳಿಂದ ಅದ್ಹೇಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿಷಯದಲ್ಲೇ ಲೋಪವಾಗುತ್ತೆ!

- ದೂರುದಾರ ಸ್ನೇಹಮಯಿ ಕೃಷ್ಣ ಪ್ರಶ್ನೆ
- ಸಿದ್ದರಾಮಯ್ಯ ಪ್ರಕರಣಕ್ಕೆ ಮತ್ತಷ್ಟು ಸಾಕ್ಷ್ಯ
- ಲೋಕಾಯುಕ್ತರಿಗೆ 36 ಪುಟಗಳ ವಿವರ ಸಲ್ಲಿಕೆ
- ಸಿದ್ದರಾಮಯ್ಯರೇ ಪರೋಕ್ಷ ಪ್ರಭಾವ ಒಪ್ಪಿಕೊಂಡಂತೆ

ಮೈಸೂರು, ನ.16(ಬಿಎಲ್‌ಯು)–ಜನಸಾಮಾನ್ಯರ ವಿಷಯದಲ್ಲಿ ಆಗದ ಅಧಿಕಾರಿಗಳ ಮಹಾ ಲೋಪ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿರುವ ಮುಡಾ ಪ್ರಕರಣದಲ್ಲಿ ಮಾತ್ರ ಹೇಗೆ ಆಗುತ್ತದೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದಾರೆ.

'ಮೈಸೂರು ಮಿತ್ರ'ನ ಇಂದಿನ ಸಂಚಿಕೆಯಲ್ಲಿ ವರದಿಯಾಗಿರುವ 'ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮುಡಾದಿಂದ 14 ನಿವೇಶನ ಹಂಚಿಕೆ; ಪ್ರಾಥಮಿಕ ತನಿಖೆಯಲ್ಲಿ ಎಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಕ್ಷೇಪದ ಪುರಾವೆ ಇಲ್ಲ; ಆದರೆ ಅಧಿಕಾರಿಗಳದ್ದೆ ಮಹಾ ಲೋಪ' ಎಂಬ ವರದಿ ಉಲ್ಲೇಖಿಸಿ ಈ ಆರೋಪ ಮಾಡಿದರು.

ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಸ್ನೇಹಮಯಿ ಕೃಷ್ಣ, ಮುಡಾದಲ್ಲಿ ಬಹಳಷ್ಟು ನಿವೇಶನ ಹಂಚಿಕೆ ಪ್ರಕ್ರಿಯೆ ನಡೆಯುತ್ತದೆ. ಆದರೆ ಆ ಎಲ್ಲಾ ಪ್ರಕರಣದಲ್ಲಿ ಆಗದ ಅಧಿಕಾರಿಗಳ ಲೋಪದೋಷ ಸಿದ್ದರಾಮಯ್ಯ ಪ್ರಕರಣದಲ್ಲಿ ಮಾತ್ರ ಹೇಗೆ ಆಗಿದೆ ಎಂದು ಪ್ರಶ್ನಿಸಿದರು.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಯಾವುದೇ ಸಾಕ್ಷಿ ಇಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಆದರೆ ಸಿದ್ದರಾಮಯ್ಯ ಪಾತ್ರದ ಬಗ್ಗೆ ನನಗೆ ಮತ್ತಷ್ಟು ದಾಖಲೆ ದೊರೆತ್ತಿದ್ದು, 36 ಪುಟಗಳ ಸಂಪೂರ್ಣ ವಿವರವನ್ನು ಈಗ ಲೋಕಾಯುಕ್ತ ಅಧಿಕಾರಿಗಳಿಗೆ ಸಲ್ಲಿಸಿದ್ದೇನೆ. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಪ್ರಭಾವ ಇರುವ ಬಗ್ಗೆ ದಾಖಲಾತಿ ನೀಡಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.



ಸ್ನೇಹಮಯಿ ಕೃಷ್ಣ

ಅಧಿಕಾರದಲ್ಲಿರುವ ವ್ಯಕ್ತಿ ಸಹಿ ಮಾಡಿ ಅಥವಾ ಇನ್ನಿತರ ದಾಖಲಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರೆ ಮಾತ್ರ ಅದು ಪ್ರಭಾವ ಎಂಬ ಅಂತಿಮ ತೀರ್ಮಾನಕ್ಕೆ ಬರಲಾಗುವುದಿಲ್ಲ. ತನ್ನ ಅಧಿಕಾರವನ್ನು ಚಲಾಯಿಸಿ ಹಲವು ರೀತಿಯಲ್ಲಿ ಪ್ರಭಾವ ಬೀರಿದರೂ ಅದು ಅಪರಾಧ ಕೃತ್ಯವಾಗುತ್ತದೆ. ಸಿದ್ದರಾಮಯ್ಯ ಬೀರಿರುವ ಇಂತಹ ಪ್ರಭಾವಗಳು ಯಾವ ರೀತಿಯಾಗಿದೆ ಎಂಬ ಬಗ್ಗೆ ದಾಖಲಾತಿ ಸಮೇತ ಇಂದು ಮತ್ತೆ ಲೋಕಾಯುಕ್ತರಿಗೆ ವಿವರ ನೀಡಿದ್ದೇನೆ ಎಂದು ಹೇಳಿದರು.

ಸಿದ್ದರಾಮಯ್ಯ ನೇರ ಪಾತ್ರ ಇಲ್ಲ ಎಂದು ಲೋಕಾಯುಕ್ತರು ಸದ್ಯದ ವರದಿ ಅಥವಾ ಸ್ಟೇಟಸ್ ರಿಪೋರ್ಟ್‌ನಲ್ಲಿ ಹೇಳಿದ್ದರೆ, ಪರೋಕ್ಷವಾಗಿ ಸಿದ್ದರಾಮಯ್ಯ ಪಾತ್ರ ಇದೆ ಎಂಬುದನ್ನು ಅವರೇ ಒಪ್ಪಿಕೊಂಡಂತಾಗುತ್ತದೆ ಎಂದು ಆರೋಪಿಸಿದರು.

ಒಂದು ವೇಳೆ ಲೋಕಾಯುಕ್ತರು ಸಿದ್ದರಾಮಯ್ಯ ಪ್ರಕರಣದ ಬಗ್ಗೆ ಬಿ ರಿಪೋರ್ಟ್ ಸಲ್ಲಿಸಿದರೆ, ನನ್ನ ಬಳಿ ಇರುವ ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ ಎಂದರು. ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವ ಬಗ್ಗೆ ನವೆಂಬರ್ 26ರಂದು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ಈ ತನಕ ಏನೆಲ್ಲಾ ಆಗಿದೆ ಎಂಬ ಬಗ್ಗೆ ಅಂದು ವಿಚಾರಣೆ ನಡೆಯಲಿದೆ. ಆ ಸಂದರ್ಭದಲ್ಲಿ ಈ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯತೆಯನ್ನು ನ್ಯಾಯಾಲಯಕ್ಕೆ ಮನವಿ ಮಾಡಿಕೊಡುತ್ತೇವೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಸಿದ್ದರಾಮಯ್ಯ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬಿಡುವುದಿಲ್ಲ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ನನ್ನ ವಿರುದ್ಧ ಇನ್ನು 20 ದೂರು ನೀಡಿದ್ದರೂ ನನ್ನ ನಿರಂತರ ಹೋರಾಟದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ನನ್ನ ವಿರುದ್ಧ 44 ಪ್ರಕರಣಗಳಿವೆ ಎಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ನನ್ನ ವಿರುದ್ಧ 23 ಪ್ರಕರಣವಿದ್ದು, ಕಳೆದ ವಾರ ಒಂದು ದೂರು, ಈಗ ಮತ್ತೊಂದು ದಾಖಲಿಸಿ 25 ಮಾಡಿದ್ದಾರೆ. ಇದರಂತೆ ಇನ್ನು ಹಲವು ದೂರು ದಾಖಲಿಸಿ 44 ಪ್ರಕರಣ ಮಾಡಿಸಲಿ, ನಾನು ಇದಕ್ಕೆ ಹೆದರುವುದಿಲ್ಲ ಎಂದರು.

ಈ ಪ್ರಕರಣವನ್ನು ಅಂತಿಮ ಹಂತಕ್ಕೆ ಕೊಂಡೊಯ್ಯುತ್ತೇನೆ. ಅಕ್ರಮ ಎಸಗಿರುವ ಸಿದ್ದರಾಮಯ್ಯ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಎಂದರು.

ನನ್ನ ಹೋರಾಟದಿಂದ ಸಿದ್ದರಾಮಯ್ಯ ಕುಟುಂಬದ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಇದರ ಪರಿಣಾಮ 14 ನಿವೇಶನವನ್ನು ಮುಡಾಗೆ ವಾಪಸು ಕೊಡಿಸಿದ ನನ್ನನ್ನು ಬಂಧಿಸಬೇಕಂತೆ, ಗಡಿಪಾರು ಮಾಡಬೇಕಂತೆ ಎಂದು ಒತ್ತಾಯಿಸಿದ್ದಾರೆ ಎಂದು ಕಿಡಿಕಾರಿದರು. ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದ ಪಕ್ಷದಲ್ಲಿ ಸಾಮಾಜಿಕ ಹೋರಾಟಗಾರರನ್ನು ಬಂಧಿಸುವಂತೆ ಒತ್ತಾಯಿಸುವ ಮಹಾ ನುಭಾವರು ಇರುವುದು ದುರಂತವಾಗಿದೆ. ಇಂತಹ ಮಹಾನುಭಾವರನ್ನು ಪ್ರಶ್ನಿಸುವ, ಪಕ್ಷದಿಂದ ಹೊರಹಾಕುವಂತೆ ಹೇಳುವ ಹಿರಿಯ ನಾಯಕರು ಕಾಂಗ್ರೆಸ್ ಪಕ್ಷದಲ್ಲಿ ಇಲ್ಲವೆ ಎಂದು ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದಾರೆ.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಮಕ್ಕಳ ದಿನ; ಕನ್ನಡ ರಾಜ್ಯೋತ್ಸವ ಆಚರಣೆ



ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಮಕ್ಕಳಿಗೆ ನಾನಾ ಕ್ರೀಡೆಗಳನ್ನು ಏರ್ಪಡಿಸಿ ಮಕ್ಕಳ ದಿನ ಮತ್ತು ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ನ. 16– ರಾಮಕೃಷ್ಣ ನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಮಕ್ಕಳಿಗೆ ನಾನಾ ಕ್ರೀಡೆಗಳನ್ನು ಏರ್ಪಡಿಸಿ ಮಕ್ಕಳ ದಿನ ಮತ್ತು ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರು ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ. ಹೆಗಡೆ ಉಪಸ್ಥಿತರಿದ್ದರು. ಕನ್ನಡ ಎಂಬುದು ನಮ್ಮ ಉಸಿರಿನಷ್ಟೇ ವಾಸ್ತವ. ಕನ್ನಡ ಭಾಷೆ ಸಂಪರ್ಕ ಸಮೂಹ ಮಾಧ್ಯಮ ಮಾತ್ರವಲ್ಲ, ಅದು ನಮ್ಮ ಉಸಿರು, ನಮ್ಮ ಜೀವನ, ನಮ್ಮ ಸರ್ವಸ್ವ ಎಲ್ಲವೂ ಕನ್ನಡವಾಗಿರಬೇಕು. ಇಂದಿನ ಮಕ್ಕಳೇ ನಾಳಿನ ನಾಯಕರು, ಈ ದಿನ ನಿಮ್ಮೆಲ್ಲರ ಹಬ್ಬ. ಮಕ್ಕಳು ದೊಡ್ಡವರ ರೀತಿ ಚಿಂತನೆಗಳು ಸಹಜವಾಗಿ ಕಲಿಯಬೇಕು ಎಂದು ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಲ್ಲಿ ಮಾತ್ರ ಆಗದೆ, ಕನ್ನಡ ನಿತ್ಯೋತ್ಸವವಾಗಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಂ.ಪಾಪೇಗೌಡ ಮಾತನಾಡಿ, ಭವಿಷ್ಯದ ರಾಷ್ಟ್ರ ನಿರ್ಮಾಣದ ಶಿಲ್ಪಿಗಳೇ ಮಕ್ಕಳು. ಆದ್ದರಿಂದ ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಒಳ್ಳೆಯ ವಾತಾವರಣದಲ್ಲಿ ಬೆಳೆಸಿ ಸಂಸ್ಕಾರವಂತರನ್ನಾಗಿ ಮಾಡಬೇಕೆಂದು ತಿಳಿಸಿದರು. ವಿನೋಬಾ ಬಾವೆಯವರು ಕನ್ನಡವನ್ನು ವಿಶ್ವಲಿಪಿಗಳ ರಾಣಿ ಎಂದು ಹೇಳಿದ್ದನ್ನು ಈ ಸಮಯದಲ್ಲಿ ಸ್ಮರಿಸಿದರು.

ಪುನೀತ್ ಕೆರೆಹಳ್ಳಿ ಅವಹೇಳನಕಾರಿ ಹೇಳಿಕೆ; ಕ್ರಮಕ್ಕೆ ಕಾಂಗ್ರೆಸ್ ಆಗ್ರಹ



ಪುನೀತ್ ಕೆರೆಹಳ್ಳಿ ಅವರ ಅವಹೇಳನಕಾರಿ ಹೇಳಿಕೆ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವಂತೆ ಮೈಸೂರು ನಗರ ಪೊಲೀಸ್ ಕಮಿಷನರ್ ಅವರಿಗೆ ನಗರ ಕಾಂಗ್ರೆಸ್ ವಕ್ತಾರ ರಾಜೇಶ್ ನೇತೃತ್ವದಲ್ಲಿ ದೂರು ನೀಡಲಾಯಿತು.

ಮೈಸೂರು, ನ. 16–ಪುನೀತ್ ಕೆರೆಹಳ್ಳಿ ಅವರ ಅವಹೇಳನಕಾರಿ ಹೇಳಿಕೆ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವಂತೆ ಮೈಸೂರು ನಗರ ಪೊಲೀಸ್ ಕಮಿಷನರ್ ಅವರಿಗೆ ನಗರ ಕಾಂಗ್ರೆಸ್ ವಕ್ತಾರ ರಾಜೇಶ್ ನೇತೃತ್ವದಲ್ಲಿ ದೂರು ನೀಡಲಾಯಿತು.

ಇತ್ತೀಚೆಗೆ ಸಾರ್ವಜನಿಕ ಸಭೆಯಲ್ಲಿ ಸಚಿವ ಜಮೀರ್ ಅಹಮದ್ ಖಾನ್ ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ನೀಡುವಾಗ ಪುನೀತ್ ಕೆರೆಹಳ್ಳಿ ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಇಂತಹ ಹೇಳಿಕೆಗಳು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದ್ದು, ನಾಗರಿಕ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಪ್ರಯತ್ನವಾಗಿದೆ. ಹಾಗಾಗಿ ಪುನೀತ್ ಕೆರೆಹಳ್ಳಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ರಾಜೇಶ್, ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡ ಹೊಯ್ಸಳ, ರಹೀಂ, ನೌಫತ್ ಅಹಮದ್, ಅಬ್ರಕ ಮಹಮದ್, ಕಲೀಂ ಶರೀಫ್, ವೀರ ಕುಸ್ತು, ಶೋಯಬ್ ಮೋಸೇಬ್, ನಯಾಜ್, ರೋಹಿತ್ ಸಿಂಗ್, ನಾಸಿಕ್, ಮೋಹನ್ ಕುಮಾರ್, ಕಮ್ರಾನ್ ಇನ್ನಿತರರಿದ್ದರು.

ನ.19ರವರೆಗೆ ಉಚಿತ ಆರೋಗ್ಯ ಶಿಬಿರ

ಮೈಸೂರು: ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧಕ ಆಸ್ಪತ್ರೆ ವತಿಯಿಂದ 'ಪ್ರಕೃತಿ ಚಿಕಿತ್ಸಾ ಸಪ್ತಾಹ'ದ ಅಂಗವಾಗಿ ನ.19ರವರೆಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಉಚಿತ ಆರೋಗ್ಯ ಶಿಬಿರ ಏರ್ಪಡಿಸಲಾಗಿದ್ದು, ಸ್ಥೂಲಕಾಯ, ಅಧಿಕ ರಕ್ತದೊತ್ತಡ, ಮಧುಮೇಹ, ಯೋಗ ಚಿಕಿತ್ಸಾ ಪದ್ಧತಿಗಳಿಂದ ಚಿಕಿತ್ಸೆ ನೀಡಲಾಗುವುದು. ಮಾಹಿತಿಗೆ ಮೊ: 9535415399, 0821–2512121, 0821–2410120 ಸಂಪರ್ಕಿಸಿ.

ಶೇಖರ್ ನಿಧನ



ಹುಣಸೂರು, ನ.16– ತಾಲೂಕಿನ ಅಕ್ರಮ ಸಕ್ರಮ ಸಮಿತಿ ನೂತನ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಧರ್ಮಾಪುರ ಶೇಖರ್(45) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.11.2024 ಭಾನುವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೋಹಿಣಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ :** ಚಾಮುಂಡಿಬೆಟ್ಟದ ಶ್ರೀ ನಂದಿಗೆ 19ನೇ ವರ್ಷದ ಮಹಾಭಿಷೇಕ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಸ್ಥಳ: ಚಾಮುಂಡಿಬೆಟ್ಟದ ಶ್ರೀ ನಂದಿ, ಬೆಳಗ್ಗೆ 8ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟ, ಮೈಸೂರು ಘಟಕ :** ಬೆಳಗ್ಗೆ 9 ರಿಂದ ಕ್ರೀಡಾ ಸಾಂಸ್ಕೃತಿಕ ಹಬ್ಬ, ಮಕ್ಕಳಿಗೆ, ದೊಡ್ಡವರಿಗೆ ವಿವಿಧ ಸ್ಪರ್ಧೆಗಳು, ಸಂಜೆ 4.30ಕ್ಕೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಬೆಳಗೋಡು ರಮೇಶ್ ಭಟ್, ವಿ. ರಂಗನಾಥ್, ಸ್ಥಳ: ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ಓಕಿನವಾ ಕರಾಟೆ ಡು ಶೋರಿನ್ ಕೈ ಇಂಡಿಯಾ:** 27ನೇ ಶೋರಿನ್ ಕೈ ಕಪ್ ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್, ಉದ್ಘಾಟನೆ: ಚಿತ್ರನಟ ಆದಿ ಲೋಕೇಶ್, ಅಧ್ಯಕ್ಷತೆ: ಕೆ.ರಘುರಾಮನ್, ಉಪಸ್ಥಿತರು: ವಕೀಲ ಮಹೇಶ್, ಸ್ಥಳ: ಟೆರೇಷಿಯನ್ ಕಾಲೇಜು ಇಂಡೋರ್ ಸ್ಟೇಡಿಯಂ, ಸಿದ್ಧಾರ್ಥನಗರ, ಬೆಳಗ್ಗೆ 9.15ಕ್ಕೆ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಮಕ್ಕಳ ದಿನಾಚರಣೆ ಪ್ರಯುಕ್ತ ಪರಿಸರ ಜಾಗೃತಿ ಮೂಡಿಸುವ ಚಿತ್ರಕಲಾ ಸ್ಪರ್ಧೆ (10 ರಿಂದ 14 ವರ್ಷದ ಮಕ್ಕಳು), ಸ್ಥಳ: ಸುಮ ಸೋಪಾನ ಉದ್ಯಾನವನ, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಬೆಳಗ್ಗೆ 9.30 ರಿಂದ.

■ **ಶ್ರೀರಾಮಕೃಷ್ಣ ವಿದ್ಯಾಶಾಲಾ :** ವಿದ್ಯಾರ್ಥಿಗಳಿಗೆ ಶಿಕ್ಷಣ ಕಾರ್ಯಕ್ರಮ, ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನ ಸ್ಪರ್ಧೆ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ, ಬೆಳಗ್ಗೆ 10 ರಿಂದ.

■ **ಶ್ರೀ ಯಾಜ್ಞವಲ್ಕ್ಯ ಶುಕ್ಲ ಯಜುರ್ವೇದ ಮಹಾಸಭಾ :** ಧಾತ್ರಿ ಹವನ ಹಾಗೂ ಶ್ರೀ ಸತ್ಯನಾರಾಯಣ ಪೂಜೆ, ಸ್ಥಳ: ಮಹಾಸಭಾ ಆವರಣ, ಬೋಗಾದಿ 2ನೇ ಹಂತ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಡ್ರೀಮ್ಸ್ ಇಂಕ್ ಇನ್ನೋವೇಷನ್ ಕ್ರ್ಯೂ ಇವೆಂಟ್ಸ್ ಅಂಡ್ ಆಡ್ಸ್ :** ಬೃಹತ್ ಎಜುಕೇಷನ್ ಫೇರ್, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ಮದ್ದೂರು ದೊರೆಸ್ವಾಮಿ ಅವರ 'ಹಂಬಲದ ಹಣತೆ' ಪುಸ್ತಕ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಚಿಂತಕ ನಾ. ದಿವಾಕರ್, ಪುಸ್ತಕ ಬಿಡುಗಡೆ : ಚಿಂತಕ ಪ್ರೊ. ಕಾಳೇಗೌಡ ನಾಗವಾರ, ಮುಖ್ಯ ಅತಿಥಿಗಳು : ಎಸ್. ನಾಗರಾಜು, ಸಂಸ್ಕೃತಿ ಸುಬ್ರಹ್ಮಣ್ಯ, ಕೃಷ್ಣಜನಮನ, ಉಪಸ್ಥಿತರು : ಕವಿ ಮದ್ದೂರು ದೊರೆಸ್ವಾಮಿ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ :** ಅಖಿಲ ಭಾರತ ಸಹಕಾರ ಸಪ್ತಾಹ, ಉದ್ಘಾಟನೆ : ರಾಜ್ಯ ಮೀನುಗಾರಿಕೆ ಸಹಕಾರ ಮಹಾಮಂಡಳ ಅಧ್ಯಕ್ಷ ಹೆಚ್.ಜಿ. ಮಂಜಪ್ಪ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ರಾಜ್ಯ ಲ್ಯಾಂಪ್ಸ್ ಸಹಕಾರ ಮಹಾಮಂಡಳ ಅಧ್ಯಕ್ಷ ಡಿ. ಕಾವೇರ, ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಆರ್. ಚಲುವರಾಜು, ಹಾಪ್‌ಕಾಮ್ಸ್ ಅಧ್ಯಕ್ಷ ಎಂ.ಟಿ. ಅಣ್ಣೇಗೌಡ, ಬಿ.ಎನ್.ಸದಾನಂದ, ಡಾ. ಎಂ.ಬಿ. ಮಂಜೇಗೌಡ, ಸ್ಥಳ:ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ :** ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ : ಹಿರಿಯ ಸಾಹಿತಿ ಲಕ್ಷ್ಮೀಶ ತೋಳ್ಪಾಡಿ, ಆಶಯ ನುಡಿ : ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ಅಧ್ಯಕ್ಷ ಶಿವಕುಮಾರ್, ಅಧ್ಯಕ್ಷತೆ : ಆಧ್ಯಾತ್ಮ ಚಿಂತಕ ಶಂಕರ ದೇವನೂರು, ಮುಖ್ಯ ಅತಿಥಿಗಳು : ಟ್ರಸ್ಟ್ ಸಂಸ್ಥಾಪಕ ಶಿವಕುಮಾರ್, ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಸ್ಥಳ: ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ಸಭಾಂಗಣ, ವಿದ್ಯಾರಣ್ಯಪುರಂ, ಬೆಳಗ್ಗೆ 10.30ಕ್ಕೆ.

■ **ಇಂಡಿಯನ್ ಕೌನ್ಸಿಲ್ ಫಾರ್ ಸ್ಪೋರ್ಟ್ಸ್ ಎಜುಕೇಷನ್ :** ರಾಜ್ಯ ಮಟ್ಟದ ಕರಾಟೆ ಸ್ಪರ್ಧೆ, ಅತಿಥಿಗಳು : ಸಂಸದ ಯದುವೀರ್, ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮಾಜಿ ಸಂಸದ ಪ್ರತಾಪ್ ಸಿಂಹ, ಜಯಕೀರ್ತಿ, ನಿತ್ಯವತಿ, ದಿವ್ಯ ಸುರೇಶ್, ಪೈ.ತ್ಯಾಗರಾಜ್, ಚೇತನ್‌ಕುಮಾರ್, ಸ್ಥಳ: ಜಿಮ್ನಾಸಿಯಂ ಸಭಾಂಗಣ, ಮೈಸೂರು ವಿವಿ, ಬೆಳಗ್ಗೆ 11.30ಕ್ಕೆ.

■ **ಮಹಾಜನ ಎಜುಕೇಷನ್ ಟ್ರಸ್ಟ್ :** ಬೆರಗು–2024, ರಾಜ್ಯ ಮಟ್ಟದ ವಿಜ್ಞಾನ ಪ್ರದರ್ಶನದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಎಂಇಟಿ ಅಧ್ಯಕ್ಷ ಡಾ. ಎಸ್. ಮುರಳಿ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಪ್ರೌಢಶಾಲೆ, ನಂಜು ಮಳಿಗೆ, ಮಧ್ಯಾಹ್ನ 3 ರಿಂದ.

■ **ವಿದ್ಯಾವಂತ ನಿರುದ್ಯೋಗಿಗಳ ಸಂಘ :** ಮುಡಾಕ್ಕೆ 1992 ರಿಂದಲೂ ಅರ್ಜಿ ಸಲ್ಲಿಸಿ ಇದುವರೆಗೂ ಮುಡಾದಿಂದ ಯಾವುದೇ ನಿವೇಶನ, ಮನೆಗಳು ಹಂಚಿಕೆಯಾಗದೆ ನೊಂದಿರುವ ಅರ್ಜಿದಾರರ ಸಭೆ, ಸ್ಥಳ: ಚಾಮುಂಡಿ ಅತಿಥಿ ಗೃಹ, ಮಧ್ಯಾಹ್ನ 3ಕ್ಕೆ.

■ **ಕನ್ನಡ ಜಾನಪದ ಪರಿಷತ್ :** ಕಲಾಪೋಷಕ ದಿ. ರವಿಗೌಡರ ಪುಣ್ಯಸ್ಮರಣೆ 'ಸ್ನೇಹಜೀವಿಗೆ ಭಾವ ನಮನ' ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಅಧ್ಯಕ್ಷತೆ : ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆ ಮಾಜಿ ಅಧ್ಯಕ್ಷ ಅಪ್ಪಣ್ಣ, ಪ್ರಾಸ್ತಾವಿಕ ನುಡಿ : ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3.30ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ, 40ನೇ ವರ್ಷದ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ಸಂಗೀತ–ನೃತ್ಯಗಳ ಹಬ್ಬ, ಡಾ.ವಸುಂಧರ ದೊರೆಸ್ವಾಮಿರವರ 75ನೇ ಜನ್ಮ ದಿನೋತ್ಸವ ಹಾಗೂ 50 ವರ್ಷಗಳ ಸಂಗೀತ–ನೃತ್ಯಕಲಾ ಸೇವೆಯ ಸಂಭ್ರಮ ಆಚರಣೆ, ನೃತ್ಯ ಕಾರ್ಯಕ್ರಮ, ಸಂಜೆ 6ರಿಂದ ವಿದುಷಿ ನಂದಿನಿ ಅಜ್ಜಂಪುರ ಅವರಿಂದ ನೃತ್ಯ ಕಾರ್ಯಕ್ರಮ, ಸಂಜೆ 6.45ರಿಂದ ಡಾ.ಚೇತನ ರಾಧಾಕೃಷ್ಣ ಮತ್ತು ಶಿಷ್ಯರಾದ ವಿ. ಲಕ್ಷ್ಮಿ ವಿಶ್ವನಾಥನ್, ನವ್ಯಶ್ರೀ ಬಿ.ಎಂ., ಕೆ. ಶಮಿತಾ, ಜಿ. ಪ್ರಜ್ಞಾ ಮತ್ತು ಸಹನಾಭಟ್ ಅವರಿಂದ, ಸಂಜೆ 7.30ರಿಂದ ವಿದುಷಿ ಪೂಜಾ ಸಂಗಮ್ ಮತ್ತು ವಿದುಷಿ ಸಮೀಕ್ಷ ಕೆ.ಎಂ. ಅವರಿಂದ, ಗೌರವ ಅತಿಥಿಗಳು: ರೋಟರಿ ಮೈಸೂರು ಅಧ್ಯಕ್ಷ ಪಿ. ಪ್ರಭಾಕರ್, ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಮಂಡಲ ಪೂಜಾ, ಉತ್ಸವ, ಅನ್ನದಾನಂ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ತಪ್ಪಲು.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಹಿಮಾಲಯ ಪ್ರತಿಷ್ಠಾನ :** ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಪಿ.ಎಸ್. ಬಾಲಕೃಷ್ಣನ್ ರಚಿಸಿರುವ ಸಿರಿಧಾನ್ಯಗಳ ಐಸಿರಿ ಕೃತಿ ಲೋಕಾರ್ಪಣೆ ಸಮಾರಂಭ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉದ್ಘಾಟನೆ : ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ, ಕೃತಿ ಬಿಡುಗಡೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕೃತಿ ಕುರಿತು : ಶ್ರೀಮತಿ ನಂದಿನಿ ಮೂರ್ತಿ, ಅಧ್ಯಕ್ಷತೆ : ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸ್ಥಳ: ಕನ್ನಡ ಸಾಹಿತ್ಯ ಭವನ, ಜಿಲ್ಲಾ ಕಸಾಪ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ದಿನೇಶ್ ಕೋಚಿಂಗ್ ಸೆಂಟರ್ :** 27ನೇ ವರ್ಷದ ಪ್ರತಿಭಾ ಪುರಸ್ಕಾರ, ಸ್ವಾಮೀಜಿಯವರ 'ವಿವೇಕಧಾರೆ' ಕೃತಿ ಲೋಕಾರ್ಪಣೆ, ಮುಖ್ಯ ಅತಿಥಿಗಳು: ರಾಮಕೃಷ್ಣ–ವಿವೇಕಾನಂದ ಆಶ್ರಮ, ತುಮಕೂರು ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ.ಕೆ.ಅನಂತರಾಮು, ಸ್ಥಳ: ಕಲಾಮಂದಿರ, ಸಂಜೆ 4.15ಕ್ಕೆ.

■ **ಹಿಮಾಲಯ ಪ್ರತಿಷ್ಠಾನ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ ; ಹಿರಿಯ ಸಾಹಿತಿ ಡಾ.ಸಿ.ಪಿ.ಕೆ., ಶ್ರೀ ವಿದ್ಯಾರಣ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್.ಸಂದೇಶ್‌ಕುಮಾರ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ದರ್ಶನಂ ಕಿರುಹೊತ್ತಿಗೆ ಬಿಡುಗಡೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಶಾಸಕ ಸಿ.ಎನ್.ಮಂಜೇಗೌಡ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ರಾಜಶೇಖರ ಮೆಡಿಕಲ್ ಫೌಂಡೇಷನ್ನಿನ ನಿರ್ದೇಶಕ ಡಾ.ಹೆಚ್.ಬಿ.ರಾಜಶೇಖರ್, ಹಿರಿಯ ಸಮಾಜ ಸೇವಕಿ ಡಾ.ಎ.ಪುಷ್ಪಾ ಐಯ್ಯಂಗಾರ್, ಸ್ಥಳ: ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಭವನ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘ :** 69ನೇ ಕನ್ನಡ ರಾಜ್ಯೋತ್ಸವ, ಬೆಳಗ್ಗೆ 8.30ಕ್ಕೆ ಸಂಘದ ಅಧ್ಯಕ್ಷ ಎಂ.ಸಂಜೀವ ಶೆಟ್ಟಿ ಅವರಿಂದ ಧ್ವಜಾರೋಹಣ, ಸಂಜೆ 6.30ಕ್ಕೆ ಸನ್ಮಾನ ಸಮಾರಂಭ, ಉಪಸ್ಥಿತರು : ಸಂಸದ ಯದುವೀರ್ ಒಡೆಯರ್, ಶಾಸಕ ಕೆ. ಹರೀಶ್‌ಗೌಡ, ಡಾ.ಎನ್.ರಮೇಶ್, ಮಾಜಿ ಶಾಸಕ ಎಲ್.ನಾಗೇಂದ್ರ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪತ್ರಕರ್ತ ಕೆ.ನರಸಿಂಹಮೂರ್ತಿ, ಮದನ್ ಮಾದೇಶ್, ಪ್ರೇಮಾ ರವಿ, ಸ್ಥಳ: ಚೆಲುವಾಂಬ ಪಾರ್ಕ್.

■ **ಎಸ್. ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗ :** ವಿವಿಧ ಕ್ಷೇತ್ರದ ಸಾಧಕರಿಗೆ ಕನಕ ರತ್ನ ಪ್ರಶಸ್ತಿ ಪ್ರದಾನ, ಹಿರಿಯ ನಾಗರಿಕರಿಗೆ ಹಣ್ಣು ಹಂಪಲು ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಕಸಾಪ ಮಾಜಿ ಅಧ್ಯಕ್ಷ ಡಾ. ಡಿ. ರಾಜಣ್ಣ, ಕೆ.ಬಿ. ಲಿಂಗರಾಜು, ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಸ್ಥಳ: ಶ್ರೀ ಭಾರತೀ ವೃದ್ಧಾಶ್ರಮ, ಕನಕಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ನಾಟಕ ಚೆಕ್‌ಮೇಟ್, ನಿರ್ದೇಶನ : ಅನೂಪ್ ಜೋಷಿ, ಸಂಗೀತ : ಶ್ರೀನಿವಾಸ ಭಟ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಜಿಪಿಐಇಆರ್ ರಂಗ ತಂಡ:** ಪ್ರಕಾಶ್ ನಾಯಕ್ ಅವರ ರಚನೆಯ ಹಾಸ್ಯ ನಾಟಕ 'ಬಾಡಿಗೆ ಮನೆ' ನಿರ್ದೇಶನ: ಹಿರಿಯ ರಂಗಕರ್ಮಿ ಮೈಮ್ ರಮೇಶ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ತಾಳ್ತಜೆ ವಸಂತ ಕುಮಾರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಡಾ.ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ವಿಷಯ: ಶ್ರವಣದೋಷ ಮತ್ತು ತಂತನತೆ ಅಥವಾ ಸ್ವಲೀನತೆ. ಭಾಗವಹಿಸುವ ತಜ್ಞರು: ಡಾ.ವಿಕಾಸ್. ಎಂ.ಡಿ ಮತ್ತು ಶೋಭಾ. ಬಿ.ಎನ್, ಫಲಾನುಭವಿಗಳು: ಚಂದ್ರಶೇಖರ್. ಎನ್.ವಿ, ಪವನ್ ಬೆಳ್ಳಿ ಮತ್ತು ದೀಪಿಕಾ. ಆರ್. ನಡೆಸಿಕೊಡುತ್ತಾರೆ: ದಿಗ್ವಿಜಯ್. ಬಿ, ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಿತ್ರಗೀತೆಗಳು, 10.00 ಕೇಳಿಗಿಳಿಗಳೇ : ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ : ಪ್ರತಿಭಾ ಪಲ್ಲವ–ಹಾಡುವ ಹಾಗೂ ಅಭಿನಯ ಕಲಾಪ್ರತಿಭೆ ಅವನಿ ಪರಿಚಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ:12.05 ವನಿತಾ ವಿಹಾರ–ಸರ್ಕಾರ ಮತ್ತು ಮಹಿಳಾ ಉದ್ಯಮಿಗಳೊಂದಿಗೆ 'ಲಘು ಉದ್ಯೋಗ ಭಾರತಿ' ನೆರವು, ಈ ಕುರಿತು ಕಾರ್ಯದರ್ಶಿ ಛಾಯಾ ಪ್ರಭು ಅವರೊಂದಿಗೆ ಸಂದರ್ಶನ. ಸಂದರ್ಶಕರು ಚಂದ್ರಮ್ಮ, 12.35 ದೇವರನಾಮ–ಡಿ. ಪುರುಷೋತ್ತಮ್, 12.45 ಜನಪದ ಸಂಗೀತ–ಹೆಗ್ಗಡಹಳ್ಳಿ ಕೃಷ್ಣೇಗೌಡ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.20 ಭಾವಗೀತೆಗಳು–ವೃಂದಗಾನ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಪವಿತ್ರ ಪ್ರೇಮ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಶ್ರೀ ಕೃಷ್ಣ ಲೀಲೆ, ಪ್ರಸ್ತುತಿ–ಪುತ್ತೂರು ಇರ್ದೆ ಕುಕ್ಕುವಳ್ಳಿಯ ತೆಂಕು ತಿಟ್ಟು ಯಕ್ಷಗಾನ ವೇದಿಕೆಯ ಕಲಾವಿದರು, 4.45 ಚಿತ್ರಗೀತೆಗಳು, 6.51 ಕೃಷಿರಂಗ:ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಆಕಾಶವಾಣಿ ಜಾತ್ರಾ ವಿಶೇಷ– ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕು ಬಿಳಿಗಿರಿರಂಗನ ಬೆಟ್ಟದ ಜಾತ್ರೆಯನ್ನು ಪರಿಚಯಿಸುತ್ತಾರೆ ಜಾನಪದ ವಿದ್ವಾಂಸ ಡಾ.ಕೃಷ್ಣಮೂರ್ತಿ ಹನೂರು, ನೀಲಗಾರ ಗಾಯಕ ಮೈಸೂರು ಗುರುರಾಜ್. ಪ್ರಸ್ತುತಿ: ಅಬ್ದುಲ್ ರಶೀದ್, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಸಂಪೂರ್ಣ ರಾಮಾಯಣ ನಾಟಕದ ಹಾಡುಗಳು, 9.30–ರಾಷ್ಟ್ರೀಯ ನಾಟಕ –ನಮ್ಮೊಳಗಿನ ಕುರುಕ್ಷೇತ್ರ, ಮೂಲ ಲೇಖಕರು–ಋತುಪರ್ಣೋದಾಸ್, ಹಿಂದಿ ಅನುವಾದ–ದಕ್ಷಿಣಾ ಶರ್ಮ, ಕನ್ನಡ ಅನುವಾದ–ಡಾ.ಕುಮಾರಸ್ವಾಮಿ, ನಿರ್ದೇಶನ ಹಾಗೂ ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ರತನ್ ಮೋಹನ್ ಶರ್ಮ–ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ನವೆಂಬರ್ 17 ಭಾನುವಾರ 2024

ಸಂಪುಟ: 45 | ಸಂಚಿಕೆ: 210 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ನಿವೇಶನ ಹಂಚಿಕೆ ಹಗರಣ

ಮಾಜಿ ಆಯುಕ್ತ ಡಾ.ನಟೇಶ್ ತನಿಖೆಗೆ ಸರ್ಕಾರ ಅನುಮತಿ

ಭಾರಿ ಭ್ರಷ್ಟಾಚಾರದ ಆರೋಪ ಹೊತ್ತಿರುವ ದಿನೇಶ್‌ಕುಮಾರ್ ಬಗ್ಗೆ ದಿವ್ಯಮೌನ!

ಬೆಂಗಳೂರು, ನ.16(ಕೆಎಂಶಿ)– ಮುಖ್ಯಮಂತ್ರಿಗಳ ಕುಟುಂಬಕ್ಕೆ 14 ನಿವೇಶನಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾದ ಮಾಜಿ ಆಯುಕ್ತ ಹಾಗೂ ಸರ್ಕಾರದ ಹಿರಿಯ ಅಧಿಕಾರಿ ಡಾ.ಡಿ.ಬಿ.ನಟೇಶ್ ಅವರ ಪ್ರಾಸಿಕ್ಯೂಷನ್‌ಗೆ ರಾಜ್ಯ ಸರ್ಕಾರ ಕೊನೆಗೂ ಅನುಮತಿ ನೀಡಿದೆ.

ಮಾಜಿ ಆಯುಕ್ತರುಗಳಾದ ಡಾ. ನಟೇಶ್ ಹಾಗೂ ದಿನೇಶ್ ಕುಮಾರ್ ಅವರುಗಳನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ನೀಡುವಂತೆ ಲೋಕಾಯುಕ್ತ ಪೊಲೀಸರು ಸರ್ಕಾರದ ಮುಖ್ಯಕಾರ್ಯದರ್ಶಿ ಅವರ ಅನುಮತಿ ಕೋರಿದ್ದರು. ಮೂರು ವಾರಗಳ ನಂತರ ಮುಖ್ಯ ಕಾರ್ಯದರ್ಶಿ ಅವರು ನಟೇಶ್ ವಿಚಾರಣೆಗೆ ನಿಯಮ 17(ಎ) ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ.

ಆದರೆ, ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿಂದಿನ ಆಯುಕ್ತ ದಿನೇಶ್ ಕುಮಾರ್



ಮುಡಾದ ಮಾಜಿ ಆಯುಕ್ತ ಹಾಗೂ ಸರ್ಕಾರದ ಹಿರಿಯ ಅಧಿಕಾರಿ ಡಾ.ಡಿ.ಬಿ.ನಟೇಶ್

ಅವರ ವಿಚಾರಣೆಗೆ ಸರ್ಕಾರ ಇನ್ನೂ ಅನುಮತಿ ನೀಡದಿರುವುದು ಚರ್ಚೆಗೆ ಗ್ರಾಸವಾಗಿದೆ. ಸರ್ಕಾರದ ಅನುಮತಿ ದೊರೆತಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು, ಡಾ.ನಟೇಶ್ ಅವರನ್ನು ವಿಚಾರಣೆಗೆ ಒಳಪಡಿಸಿ ಅಗತ್ಯ ಬಿದ್ದರೆ, ಕ್ರಿಮಿನಲ್ ದಾವೆ ಹೂಡಿ ಬಂಧಿಸಲು ಅವಕಾಶವಿದೆ.

ನಿವೇಶನಗಳ ಮರು ಹಂಚಿಕೆಯಲ್ಲಿ ಭಾರೀ ಭ್ರಷ್ಟಾಚಾರ ಎಸಗಿದ್ದಾರೆಂಬ ಆರೋಪ ಡಾ.ನಟೇಶ್ ಅವರ ಮೇಲಿದೆ.

ಸರ್ಕಾರ ಅನುಮತಿ ನೀಡುತ್ತಿದ್ದಂತೆ ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಟಿ.ಜೆ.ಉದೇಶ್ ಅವರು, ನಟೇಶ್ ಅವರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಡಾ.ನಟೇಶ್ ಅವರನ್ನು ಈಗಾಗಲೇ ಇ.ಡಿ. ಅಧಿಕಾರಿಗಳು ಮೂರು ಬಾರಿ ತಮ್ಮ ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿ ಕಳುಹಿಸಿಕೊಟ್ಟಿದ್ದಾರೆ. ಇದಕ್ಕೂ ಮುನ್ನ ಇ.ಡಿ. ಅಧಿಕಾರಿಗಳು ಡಾ.ನಟೇಶ್ ಅವರ ಮನೆ ಮತು ಕಚೇರಿ ಮೇಲೆ ದಾಳಿ ನಡೆಸಿ ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಕ್ರಮ ಆಸ್ತಿ ಗಳಿಕೆ ಪ್ರಕರಣ: ಸಚಿವ ಜಮೀರ್ ಅಹ್ಮದ್‌ಗೆ ಲೋಕಾಯುಕ್ತ ನೋಟಿಸ್

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣ ಸಂಬಂಧ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ವಿಚಾರಣೆಗೆ ಡಿ. 3ರಂದು ಖುದ್ದು ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ನೋಟಿಸ್ ನೀಡಿದ್ದಾರೆ. ಬೆಂಗಳೂರಿನ ಚಾಮರಾಜಪೇಟೆ ಬಳಿ ಇರುವ ಜಮೀರ್ ಮನೆಗೆ ಬಂದು ಲೋಕಾಯುಕ್ತ ಇನ್‌ಪೆಕ್ಟರ್ ನೋಟಿಸ್ ನೀಡಿದ್ದು, ಸೂಕ್ತ ದಾಖಲೆಗಳೊಂದಿಗೆ ಖುದ್ದು ಹಾಜರಾಗುವಂತೆ ಸೂಚಿಸಿದ್ದಾರೆ. ಮೂರು ವರ್ಷಗಳ ಹಿಂದೆ ಜಮೀರ್ ವಿರುದ್ಧ ಎಸಿಬಿಯಲ್ಲಿ ಜಾರಿ ನಿರ್ದೇಶನಾಲಯದ ವರದಿ ಆಧರಿಸಿ ಅಕ್ರಮ ಆಸ್ತಿ ಸಂಪಾದನೆ ಪ್ರಕರಣ ದಾಖಲಾಗಿತ್ತು.

ಎಸಿಬಿ ರದ್ದುಗೊಂಡ ನಂತರ ಆ ಪ್ರಕರಣದ ಮುಂದುವರೆದ ತನಿಖೆಯನ್ನು ಲೋಕಾಯುಕ್ತ ಪೊಲೀಸರು ಕೈಗೆತ್ತಿಕೊಂಡಿದ್ದರು. ಪ್ರಾಥಮಿಕ ಹಂತದ ತನಿಖೆ ಮುಗಿಸಿದ ಪೊಲೀಸರು, ಈಗ ಅಕ್ರಮ ಆಸ್ತಿ ಸಂಪಾದನೆ ಸಂಬಂಧ ವಿಚಾರಣೆಗೆ ಹಾಜರಾಗಲು ಸಚಿವರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.



ಇದರೊಂದಿಗೆ ಅಕ್ರಮ ಆಸ್ತಿ ಸಂಪಾದನೆ ವಿಚಾರದಲ್ಲಿ ಜಮೀರ್ ಅವರಿಗೆ ಮತ್ತೆ ಪೊಲೀಸರ ತನಿಖೆ ಸಂಕಷ್ಟ ಮುಂದುವರಿದಿದ್ದು, ತಮ್ಮ ಹಣಕಾಸು ವ್ಯವಹಾರದ ಕುರಿತು ಲೆಕ್ಕವನ್ನು ಲೋಕಾಯುಕ್ತಕ್ಕೆ ಸಚಿವರು ಸಲ್ಲಿಸಬೇಕಿದೆ. ತಮ್ಮ ಮೇಲಿನ ಆದಾಯಕ್ಕೂ ಮೀರಿ ಆಸ್ತಿ ಗಳಿಸಿದ ಆರೋಪದ ವಿಚಾರಣೆಗೆ ಪೂರಕ ದಾಖಲೆ ಸಮೇತ ಬರಲು ಸಚಿವರಿಗೆ ಕಾಲಾವಕಾಶ ನೀಡಲಾಗಿದೆ.

ಎಸಿಬಿ ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸಿದೆ, ಅದು ಈಗ ನನಗೆ ನೋಟಿಸ್ ನೀಡಿದೆ. ಇದು ಸಾಮಾನ್ಯ ನೋಟಿಸ್. ಇದರಲ್ಲಿ ಹೊಸದೇನೂ ಇಲ್ಲ ಎಂದು ಜಮೀರ್ ಪ್ರತಿಕ್ರಿಯಿಸಿದ್ದಾರೆ.

ನನ್ನ ಹೇಳಿಕೆಯಿಂದ ಯಾವುದೇ ಹಾನಿ ಆಗಿಲ್ಲ

ಯೋಗೇಶ್ವರ್ 20 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ: ಜಮೀರ್

ಮಂಗಳೂರು: ಕೇಂದ್ರ ಸಚಿವ ಮತ್ತು ಜೆಡಿಎಸ್ ನಾಯಕ ಎಚ್ ಡಿ ಕುಮಾರಸ್ವಾಮಿ ಅವರನ್ನು 'ಕರಿಯ' ಎಂದು ಕರೆದಿರುವುದರಿಂದ ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಯಾವುದೇ ಹಾನಿ ಆಗಿಲ್ಲ ಎಂದು ವಸತಿ ಮತ್ತು ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್, ಶನಿವಾರ ತಮ್ಮ ಹೇಳಿಕೆಯನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿದ್ದಾರೆ. ಜಮೀರ್ ಅಹ್ಮದ್ ಖಾನ್ ಅವರ ಹೇಳಿಕೆಯಿಂದ ಚುನಾವಣೆಯಲ್ಲಿ ಒಂದಿಷ್ಟು ಲಾಭವೂ ಆಗಿದೆ ಒಂದಷ್ಟು ನಷ್ಟವೂ ಆಗಿದೆ. ಮುಸ್ಲಿಂ ಮತಗಳನ್ನು ಸೇರಿದರೆ, ಇನ್ನೊಂದು ಸಮುದಾಯಕ್ಕೆ ನೋವಾಗಿ ಮತ ಬಂದಿಲ್ಲದಿರಬಹುದು ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಹೇಳಿದ್ದರು. ಇಂದು ಮಂಗಳೂರಿನಲ್ಲಿ ಸಿಪಿ ಯೋಗೇಶ್ವರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಜಮೀರ್ ಅಹ್ಮದ್ ಖಾನ್, ನನ್ನ ಹೇಳಿಕೆಯಿಂದ ಯಾವುದೇ ಹಾನಿ ಆಗಿಲ್ಲ. ಯೋಗೇಶ್ವರ್ 20 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ಹೇಳಿದರು.

ಕಾನೂನು ಸುವ್ಯವಸ್ಥೆ ಸುಧಾರಿಸಲು ರಾಜ್ಯ ಪೊಲೀಸರ ವಶಕ್ಕೆ 100 ಡ್ರೋನ್



ಬೆಂಗಳೂರು: ಸಾರ್ವಜನಿಕ ಸುರಕ್ಷತೆ ಮತ್ತು ಸೇವಾ ವ್ಯವಸ್ಥೆ ಸುಧಾರಿಸುವ ನಿಟ್ಟಿನಲ್ಲಿ ನೆರವು ನೀಡಲು ಕರ್ನಾಟಕ ಪೊಲೀಸರಿಗೆ ಮೊದಲ ಬಾರಿಗೆ ಡ್ರೋನ್‌ಗಳನ್ನು ನೀಡಲು ಇಲಾಖೆ ಮುಂದಾಗಿದೆ.

ಪೊಲೀಸ್ ಇಲಾಖೆಯು ತನ್ನ ಆಧುನೀಕರಣ ಯೋಜನೆಯ ಭಾಗವಾಗಿ 80–100 ದೇಶೀಯ ಡ್ರೋನ್‌ಗಳಿಗೆ ಅಂದಾಜು 4 ಕೋಟಿ ವೆಚ್ಚದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಯಲ್ಲಿದೆ ಎಂದು ಹೆಚ್ಚುವರಿ ಪೊಲೀಸ್ ಸಂವಹನ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ ವಿಭಾಗದ ಮಹಾನಿರ್ದೇಶಕ ಎಸ್.ಮುರುಗನ್ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಸಾರ್ವಜನಿಕ ಸುರಕ್ಷತೆ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು, ಭದ್ರತೆ, ಅಕ್ರಮ, ರಾಷ್ಟ್ರವಿರೋಧಿ ಚಟುವಟಿಕೆಗಳ ಮೇಲೆ

● 6ನೇ ಪುಟಕ್ಕೆ

ಒಂದೇ ಒಂದು ಎಪಿಎಲ್ ಕಾರ್ಡ್ ರದ್ದಾಗಿಲ್ಲ

ಮಂಗಳೂರು, ನ.16– ಪರಿಷ್ಕರಣೆ ಮಾಡಿದಾಗ ಬಿಪಿಎಲ್ ಅಲ್ಲದೇ ಇರೋರನ್ನು ಎಪಿಎಲ್ ಮಾಡಿದ್ದೇವೆ. ಎಪಿಎಲ್‌ಗೆ ಹಾಕಿದವರನ್ನು ರದ್ದು ಮಾಡುವುದಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆಹೆಚ್ ಮುನಿಯಪ್ಪ ಹೇಳಿದ್ದಾರೆ. ರಾಜ್ಯದಲ್ಲಿ 11 ಲಕ್ಷ ಪಡಿತರ ಚೀಟಿ ರದ್ದಾಗಿದೆ ಎಂಬ ಬಿಜೆಪಿ ಶಾಸಕ ಸುನೀಲ್‌ಕುಮಾರ್ ಹೇಳಿಕೆ ವಿಚಾರವಾಗಿ ನಗರದಲ್ಲಿ ಮಾತನಾಡಿದ ಅವರು, ಪಡಿತರ ನೀಡುವುದಕ್ಕೆ ಹಣದ ಕೊರತೆ ಇಲ್ಲ ಎಂದು ಹೇಳಿದ್ದಾರೆ.



ಎಪಿಎಲ್‌ಗೆ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ್ದೇವೆ: ಅರ್ಹರಿಗೆ ಬಿಪಿಎಲ್ ಕಾರ್ಡ್ ವಿತರಣೆಗೆ ಯಾವುದೇ ತೊಂದರೆ ಇಲ್ಲ. ಎಪಿಎಲ್‌ನವರಿಗೆ ಸಬ್ಸಿಡಿ ರೇಟ್‌ನಲ್ಲಿ ಕೊಡ್ತಿದ್ದೆವು, ಹೆಚ್ಚಿನವರು ತೆಗೆದುಕೊಳ್ಳುತ್ತಿರಲಿಲ್ಲ.

● 6ನೇ ಪುಟಕ್ಕೆ

ಬಿಪಿಎಲ್, ಎಪಿಎಲ್ ಕಾರ್ಡ್‌ದಾರರಿಗೆ ಶಾಕ್

ಹಾಸನ, ನ. 16: ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಗ್ಯಾರಂಟಿ ಘೋಷಣೆ ಮಾಡಿ ಅಧಿಕಾರಕ್ಕೆ ಬಂದ ಬಳಿಕ ಗೃಹ ಜ್ಯೋತಿ, ಗೃಹಲಕ್ಷ್ಮಿ ಹಾಗೂ ಬಸ್ ಫ್ರೀ ಯೋಜನೆಯಂತಹ ಮಹತ್ವದ ಯೋಜನೆ ಜಾರಿ ಮಾಡಿದೆ. ಆದರೆ ಮಹಿಳೆಯ ಖಾತೆಗೆ ನೇರವಾಗಿ ತಿಂಗಳಿಗೆ 2 ಸಾವಿರ ರೂ. ಹಣ ವರ್ಗಾವಣೆ ಮಾಡುವ ಗೃಹ ಲಕ್ಷ್ಮಿ ಯೋಜನೆಯಿಂದ ಆಗುತ್ತಿರುವ ಹೊರೆಯನ್ನ ತಪ್ಪಿಸಲು ಸರ್ಕಾರ ಬಿಪಿಎಲ್ ಕಾರ್ಡ್‌ಗಳನ್ನೇ ಕಡಿಮೆ ಮಾಡಲು ಮುಂದಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಹಾಗಾಗಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ 11 ಲಕ್ಷ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ ಎಂದು ಬಿಜೆಪಿ ನಾಯಕ ಮಾಜಿ ಸಚಿವ ಶಾಸಕ ಸುನಿಲ್ ಕುಮಾರ್ ಗಂಭಿರ ಆರೋಪ ಮಾಡಿದ್ದಾರೆ.

ಹಾಸನದಲ್ಲಿ 3925 ಬಿಪಿಎಲ್ ಎಪಿಎಲ್: ಜಿಲ್ಲೆಯಲ್ಲಿ ಒಟ್ಟು 83 ರೇಷನ್ ಕಾರ್ಡ್‌ಗಳು ರದ್ದು ಮಾಡಲಾಗಿದೆ. ಒಟ್ಟು 3925 ಬಿಪಿಎಲ್ ಕಾರ್ಡ್‌ಗಳು ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆ ಮಾಡಲಾಗಿದೆ. ಟ್ಯಾಕ್ಸ್ ಪಾವತಿಸುತ್ತಿದ್ದಾರೆ ಎಂಬ ಕಾರಣಕ್ಕೆ 3408 ಬಿಪಿಎಲ್ ಕಾರ್ಡ್‌ಗಳು ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆ ಮಾಡಲಾಗಿದೆ.



1,20,000ಕ್ಕಿಂತ ಹೆಚ್ಚಿನ ಆದಾಯ ಕಾರಣದಿಂದ 415 ಬಿಪಿಎಲ್ ಪಡಿತರ ಕಾರ್ಡ್‌ಗಳು ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆ ಮಾಡಲಾಗಿದೆ. ಸರ್ಕಾರಿ ನೌಕರರು ಎಂಬ ಕಾರಣಕ್ಕೆ 102 ಕಾರ್ಡ್‌ಗಳು ಬದಲಾವಣೆ. ಅದೇ ರೀತಿಯಾಗಿ ಸಾವಿರಾರು ಕಾರ್ಡ್‌ಗಳು ವಿವಿಧ ತಾಂತ್ರಿಕ ಕಾರಣದಿಂದ ಅಮಾನತು ಮಾಡಲಾಗಿದೆ.

ಕೋಲಾರದಲ್ಲಿ 6500 ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತನೆ: ಕೋಲಾರದಲ್ಲಿ 6500 ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತನೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ತೆರಿಗೆ ಪಾವತಿ ಮಾಡುತ್ತಿದ್ದಾರೆ ಎಂಬ ಕಾರಣ ನೀಡಿ 3500 ಕಾರ್ಡ್, ಸರ್ಕಾರಿ ನೌಕರರು ಅಂತ 80 ಕಾರ್ಡ್ ಬಿಪಿಎಲ್‌ನಿಂದ ಎಪಿಎಲ್‌ಗೆ ಬದಲಾವಣೆ ಮಾಡಲಾಗಿದೆ.

1, 20,000 ಕ್ಕಿಂತ ಹೆಚ್ಚಿನ ಆದಾಯ ಹೊಂದಿದ್ದಾರೆ ಅಂತ 2900 ಪಡಿತರ ಕಾರ್ಡ್ ಪರಿವರ್ತನೆ ಮಾಡಲಾಗಿದೆ. ಜಿಲ್ಲೆಯಲ್ಲಿ 6500 ಕಾರ್ಡುಗಳು ಎಪಿಎಲ್‌ಗೆ ಕನ್ವರ್ಟ್ ಮಾಡಲು ಗುರುತು ಮಾಡಿ ಅಮಾನತ್ತಿನಲ್ಲಿಡಲಾಗಿದೆ. ಪರಿವರ್ತನೆ ಕಾರ್ಯ ಚಾಲ್ತಿಯಲ್ಲಿದೆ ಎಂದು ಆಹಾರ ಇಲಾಖೆ ಉಪನಿರ್ದೇಶಕಿ ಲತಾ ಮಾಹಿತಿ ನೀಡಿದ್ದಾರೆ ಚಿಕ್ಕಬಳ್ಳಾಪುರದಲ್ಲೂ 2201 ಬಿಪಿಎಲ್ ಕಾರ್ಡ್‌ಗಳು ಎಪಿಎಲ್‌ಗೆ ಬದಲಾವಣೆ ಮಾಡಲಾಗಿದೆ. ಟ್ಯಾಕ್ಸ್ ಪಾವತಿ ಮಾಡುತ್ತಿದ್ದಾರೆ ಎಂಬ ಕಾರಣ ನೀಡಿ 1992 ಕಾರ್ಡ್‌ಗಳು ಎಪಿಎಲ್‌ಗೆ, ಸರ್ಕಾರಿ ನೌಕರರು ಅಂತ 31 ಕಾರ್ಡ್ ಮತ್ತು 1, 20000ಕ್ಕಿಂತ ಹೆಚ್ಚಿನ ಆದಾಯ ಹೊಂದಿದ್ದಾರೆ ಅಂತ 178 ಪಡಿತರ ಚೀಟಿ ಬದಲಾವಣೆ ಮಾಡಲಾಗಿದೆ. ಜಿಲ್ಲೆಯಾದ್ಯಂತ 2021 ಕಾರ್ಡ್‌ಗಳು ಎಪಿಎಲ್‌ಗೆ ಪರಿವರ್ತನೆ ಮಾಡಲಾಗಿದೆ.

ಇಂದು ತಡರಾತ್ರಿ ಮೈಸೂರಿಗೆ ಯೋಗಗುರು ಶರತ್ ಜೋಯಿಸ್ ಪಾರ್ಥಿವ ಶರೀರ

ನ.18ರ ಸೋಮವಾರ ಬೆಳಗ್ಗೆ ಗೋಕುಲಂನ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ

ಮೈಸೂರು,ನ.16(ಪಿಎಂ)– ಅಮೆರಿಕಾದ ವರ್ಜಿನಿಯಾದಲ್ಲಿ ಇತ್ತೀಚೆಗೆ ನಿಧನರಾದ ಅಂತಾ ರಾಷ್ಟ್ರೀಯ ಖ್ಯಾತಿಯ ಯೋಗ ಗುರು ಶರತ್ ಜೋಯಿಸ್ ಅವರ ಪಾರ್ಥಿವ ಶರೀರವನ್ನು ಭಾನುವಾರ ಮಧ್ಯರಾತ್ರಿ ಮೈಸೂರಿಗೆ ತರಲಾಗುತ್ತಿದೆ.



ನ.18ರ ಸೋಮವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ವಿವಿ ಮೊಹಲ್ಲಾದ 5ನೇ ಮುಖ್ಯ ರಸ್ತೆಯಲ್ಲಿರುವ ಅವರ ನಿವಾಸದ (ನಂ.2956, ಡಿ 16, 16/1ರ ಸ್ವಾಧ್ಯಾಯ) ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 1ರ ನಂತರ ಗೋಕುಲಂನಲ್ಲಿರುವ ಶ್ರೀ ರುದ್ರ ಅಂತ್ಯ ಸಂಸ್ಕಾರ ಚಾರಿಟೇಬಲ್ ಟ್ರಸ್ಟ್‌ನ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಶರತ್ ಜೋಯಿಸ್ ಕುಟುಂಬದ ಪ್ರಕಟಣೆ ತಿಳಿಸಿದೆ.

ಸಂತಾಪ: ಶರತ್ ಜೋಯಿಸ್ ಅವರ ಅಕಾಲಿಕ ಮರಣ ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಯೋಗ ವಲಯಕ್ಕೆ ತುಂಬಲಾರದ ನಷ್ಟ. ನಾನು ಕಳೆದ ಹಲವು ವರ್ಷಗಳಿಂದ ಶರತ್ ಜೋಯಿಸ್ ಅವರ ಒಡನಾಟದಲ್ಲಿದ್ದು, ಅದರಲ್ಲೂ ಕಳೆದ ವರ್ಷ 2023ರ ಯೋಗ ದಸರಾದಲ್ಲಿ ಅವರೊಂದಿಗೆ ಅರಮನೆ ಅಂಗಳದಲ್ಲಿ ವೇದಿಕೆ ಹಂಚಿಕೊಂಡಿದ್ದನ್ನು ಎಂದೆಂದಿಗೂ ಮರೆಯಲಾಗದು. ಅವರ ಆತ್ಮಕ್ಕೆ ಸದ್ಗತಿ ದೊರೆಯಲ್ಲಿ ಎಂದು ಪ್ರಾರ್ಥಿಸುವೆ ಎಂದು ಗೋಕುಲಂನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್‌ನ ಯೋಗಚಾರ್ಯ ಡಾ.ಬಿ.ಪಿ.ಮೂರ್ತಿ ಪ್ರಕಟಣೆಯಲ್ಲಿ ಸಂತಾಪ ಸೂಚಿಸಿದ್ದಾರೆ.

ಶ್ರೀರಂಗಪಟ್ಟಣ ಬಳಿ ಅಪಘಾತ: ಕಾಟೇರ ಚಿತ್ರದ ಬಾಲ ನಟ

ರೋಹಿತ್‌ಗೆ ತೀವ್ರ ಗಾಯ



ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

ಶ್ರೀರಂಗಪಟ್ಟಣ, ನ.16–ಖಾಸಗಿ ಬಸ್ ಮತ್ತು ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ರಾಷ್ಟ್ರ ಪ್ರಶಸ್ತಿ ವಿಜೇತ ಬಾಲ ನಟ ರೋಹಿತ್ ಸೇರಿ ನಾಲ್ವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಬಳಿ ನಡೆದಿದೆ.

ದರ್ಶನ್ ಹಾಗೂ ಮಾಲಾಶ್ರೀ ಪುತ್ರಿ ಆರಾಧನಾ ಅಭಿನಯದ 'ಕಾಟೇರಾ' ಚಿತ್ರದಲ್ಲಿ ನಟಿಸಿರುವ ರೋಹಿತ್‌ಗೆ 'ಒಂದಲ್ಲ–ಎರಡಲ್ಲ' ಚಿತ್ರದ ಮನೋಜ್ಞ ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ದೊರೆತಿತ್ತು. ಇಂದು ಖಾಸಗಿ ಕಾರ್ಯಕ್ರಮ ಮುಗಿಸಿ ಕುಟುಂಬಸ್ಥರೊಂದಿಗೆ ಕಾರಿನಲ್ಲಿ (ಕೆಎ 11 ಎನ್ 4173) ಮನೆಗೆ ಮರಳುತ್ತಿದ್ದಾಗ ಪಾಲಹಳ್ಳಿ ಬಳಿ ಖಾಸಗಿ ಟೂರಿಸ್ಟ್ ಬಸ್ ಇವರ ಕಾರಿಗೆ ಡಿಕ್ಕಿ ಹೊಡೆದಿದೆ.



ರೋಹಿತ್

● 6ನೇ ಪುಟಕ್ಕೆ

ಕರ್ನಾಟಕ ರಾಜಕೀಯವೇ ಮಹಾರಾಷ್ಟ್ರ ಚುನಾವಣಾ ಪ್ರಚಾರ ಅಸ್ತ್ರ!

- ಕಾಂಗ್ರೆಸ್ ಸರ್ಕಾರದ ಮುಡಾ, ವಾಲ್ಮೀಕಿ ನಿಗಮ ಹಗರಣ ಸೇರಿ ಇನ್ನಿತರೆ ಭ್ರಷ್ಟಾಚಾರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯಾದಿಯಾಗಿ ಬಿಜೆಪಿ ನಾಯಕರು ವಾಗ್ದಾಳಿ
- 50 ಶಾಸಕರಿಗೆ ತಲಾ 50 ಕೋಟಿ ಕೊಟ್ಟು ಖರೀದಿ ಯತ್ನವನ್ನು ಬ್ರಹ್ಮಾಸ್ತ್ರ ಮಾಡಿಕೊಂಡಿರುವ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇನ್ನಿತರೆ ಕಾಂಗ್ರೆಸ್ ನಾಯಕರು

ಬೆಂಗಳೂರು, ನ.16(ಕೆಎಂಶಿ)– ಕರ್ನಾಟಕ ರಾಜಕೀಯವನ್ನೇ ಅಸ್ತ್ರವಾಗಿಟ್ಟುಕೊಂಡು ಮಹಾರಾಷ್ಟ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಚುನಾವಣಾ ಹೋರಾಟ ನಡೆಸಿವೆ. ಕರ್ನಾಟಕದ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರ ಮತ್ತು ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ವಿಫಲವಾಗಿದೆ ಎಂದು ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ಮುಖಂಡರು ದೂರಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಳೆದ ಎರಡು ದಿನಗಳಿಂದ ಮಹಾರಾಷ್ಟ್ರದ ಚುನಾವಣಾ ಪ್ರಚಾರದಲ್ಲಿ ಆಪರೇಷನ್ ಕಮಲವನ್ನೇ ಅಸ್ತ್ರವಾಗಿ ಬಳಕೆ ಮಾಡಿಕೊಂಡಿದ್ದಾರೆ.

ಪ್ರಚಾರಕ್ಕೆ ತೆರಳುವುದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಲಾ 50 ಕೋಟಿ ರೂ.ಗೆ ಕಾಂಗ್ರೆಸ್‌ನ 50 ಶಾಸಕರನ್ನು ಖರೀದಿ ಮಾಡಲು ಎನ್‌ಡಿಎ ಮುಂದಾಗಿದೆ ಎಂದು ಬಾಂಬ್ ಸಿಡಿಸಿದ್ದರು. ಮಹಾರಾಷ್ಟ್ರದ ಚುನಾವಣಾ ಪ್ರಚಾರದಲ್ಲೂ ಇದನ್ನೇ ಅಸ್ತ್ರ ಮಾಡಿಕೊಂಡಿರುವ ಅವರುಗಳು, ಜನರಿಂದ ಆಯ್ಕೆಗೊಂಡ

● 6ನೇ ಪುಟಕ್ಕೆ

ಮುಡಾ, ಖಾಸಗಿ ಬಡಾವಣೆಗಳ ಆಯಾಯ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಪ್ರಕ್ರಿಯೆ ಆರಂಭ

- ಖಾತೆ, ಕಂದಾಯ, ನಿರ್ವಹಣೆ ಇನ್ನು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ
- ಇದರ ಜೊತೆಗೆ ಮೂಲಸೌಕರ್ಯ ಕಲ್ಪಿಸುವ ದೊಡ್ಡ ಹೊಣೆಗಾರಿಕೆ
- ತೆರಿಗೆ ಆದಾಯ, ಸರ್ಕಾರದ ಅನುದಾನದಲ್ಲಿ ಅಭಿವೃದ್ಧಿ ಉದ್ದೇಶ
- ಅಂತೂ ಕೈಗೂಡಿದ ಸಾವಿರಾರು ಜನರ ಬಹು ದಿನಗಳ ಬೇಡಿಕೆ

ಬಾಪುಲಿಂಗರಾಜ್ ಅರಸ್

ಮೈಸೂರು, ನ.16– ಕುಡಿಯುವ ನೀರು, ಬೀದಿ ದೀಪ, ರಸ್ತೆ ಸೇರಿದಂತೆ ಮೂಲ ಸೌಕರ್ಯವಿಲ್ಲದೆ ಕಂಗೆಟ್ಟಿದ್ದ ಮೈಸೂರು ನಗರದ ಹೊರವಲಯದ ಮುಡಾ ಹಾಗೂ ಖಾಸಗಿ ಬಡಾವಣೆಗಳಿಗೆ ಕಾಯಕಲ್ಪ ನೀಡುವ ಕಾಲ ಕೊನೆಗೂ ಕೂಡಿ ಬಂದಿದೆ. ಮುಡಾ ಹಾಗೂ ಖಾಸಗಿ ಬಡಾವಣೆಗಳನ್ನು ನಗರ ಪಾಲಿಕೆ ಹಾಗೂ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

ಮೈಸೂರು ನಗರದಲ್ಲಿ ಇಂತಹ ನೂರಾರು ಬಡಾವಣೆಗಳಿದ್ದು, ಮೂಲ ಸೌಕರ್ಯದಿಂದ ವಂಚಿತವಾಗಿವೆ. ಕೆಲವು ಬಡಾವಣೆಗಳು ನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದರೆ, ಮತ್ತೆ ಕೆಲವು ಬಡಾವಣೆಗಳು ನಗರ ಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ.

ಈ ಬಡಾವಣೆಗಳಲ್ಲಿ ವಾಸ ಮಾಡುವ ಸಾವಿರಾರು ಜನರು ಖಾತೆ, ಕಂದಾಯ ಪಾವತಿ, ಮೂಲ ಸೌಕರ್ಯ ಕಲ್ಪಿಸುವಂತೆ ಮುಡಾಗೆ ಮನವಿ ಮಾಡಿದರೆ, ಅದು, ನಮ್ಮ ವ್ಯಾಪ್ತಿಗೆ ನೀವ್ಯಾರೂ ಬರುವುದಿಲ್ಲ, ನಿಮ್ಮ ಸನಿಹದ ನಗರ ಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿ ಎಂದು ಹೇಳಿ ಕೈ ತೊಳೆದುಕೊಳ್ಳುತ್ತಿತ್ತು.

ಇನ್ನು ಆಯಾ ವ್ಯಾಪ್ತಿಯ ಸ್ಥಳಿಯ ಸಂಸ್ಥೆಗಳ ಅಧಿಕಾರಿಗಳನ್ನು ಕೇಳಿದರೆ, ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಮುಡಾ ಕೇಳಿ ಎಂದು ಸಬೂಬು ಹೇಳಿ ಜಾರಿಕೊಳ್ಳುತ್ತಿದ್ದರು. ಇದರಿಂದ ಮೈಸೂರು ನಗರದ ಸುತ್ತಮುತ್ತ ಇರುವ ನೂರಾರು ಮುಡಾ, ಖಾಸಗಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಡಾವಣೆಗಳ ಜನರು ಅತಂತ್ರ ಸ್ಥಿತಿಗೆ ಸಿಲುಕಿದ್ದರು. ಜೊತೆಗೆ ಎಲ್ಲಿ ಖಾತೆ ಮಾಡಿಸಿಕೊಳ್ಳಬೇಕು, ಎಲ್ಲಿಗೆ ಕಂದಾಯ ಪಾವತಿಸಬೇಕು ಎಂಬುದು ಸ್ಪಷ್ಟವಾಗದೆ ಗೊಂದಲಕ್ಕೀಡಾಗಿದ್ದರು.


ಬಡಾವಣೆ ನಿರ್ಮಾಣ ಮಾಡಿರುವ ಡೆವಲಪರ್‌ಗಳು ಮೂಲಭೂತ ಸೌಕರ್ಯ ಕಲ್ಪಿಸದೆ ನಿವೇಶನ ಮಾರಾಟ ಮಾಡಿ ಕೈ ತೊಳೆದುಕೊಂಡಿದ್ದರು.

ಕೆಲವೇ ದಿನಗಳಲ್ಲಿ ಪ್ರಕ್ರಿಯೆ ಪೂರ್ಣ

"ಇಂತಹ ಬಡಾವಣೆಗಳನ್ನು ಆಯಾ ವ್ಯಾಪ್ತಿಯಲ್ಲಿರುವ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆಗೆ ಕಳೆದ 15 ದಿನದ ಹಿಂದೆ ಚಾಲನೆ ನೀಡಲಾಗಿದೆ. ಈ ಮೂಲಕ ಇನ್ನು ಮುಂದೆ ಮೈಸೂರಿನ ಎಲ್ಲಾ ಬಡಾವಣೆಗಳು ಆಯಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುತ್ತವೆ. ಕೆಲವೇ ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು.



– ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾಧಿಕಾರಿ ಹಾಗೂ ಮುಡಾ ಅಧ್ಯಕ್ಷರು



ತಿಂಗಳಲ್ಲಿ ಬಡಾವಣೆಗಳ ಹಸ್ತಾಂತರ

"ಮುಡಾ ವ್ಯಾಪ್ತಿಯಲ್ಲಿರುವ ಮುಡಾ ಹಾಗೂ ಖಾಸಗಿ ಬಡಾವಣೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಮುಡಾ ನಿರ್ಮಾಣ ಮಾಡಿರುವ 17 ಬಡಾವಣೆ ಹಾಗೂ ಖಾಸಗಿಯವರು ಅಭಿವೃದ್ಧಿಪಡಿಸಿರುವ 200 ಬಡಾವಣೆಗಳನ್ನು ಹಂತ ಹಂತವಾಗಿ ಹಸ್ತಾಂತರ ಮಾಡಲಾಗುತ್ತಿದೆ. ಉಳಿದಂತೆ ಮೈಸೂರು ನಗರದಲ್ಲಿರುವ 600ಕ್ಕೂ ಹೆಚ್ಚು ಬಡಾವಣೆಗಳನ್ನು ಇನ್ನು ಒಂದು ತಿಂಗಳ ಕಾಲಾವಧಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುತ್ತೇವೆ. ಇನ್ನು ಮುಂದೆ ಆಯಾ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಬಡಾವಣೆಗಳ ಖಾತೆ, ಕಂದಾಯ ವಸೂಲಿ ಸೇರಿದಂತೆ ಇತರೆ ಕಾರ್ಯವನ್ನು ನಿರ್ವಹಿಸುತ್ತಾರೆ. ಜೊತೆಗೆ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ನಿರ್ವಹಣೆಯ ಹೊಣೆಯನ್ನು ಹೊತ್ತುಕೊಳ್ಳಲಿದ್ದಾರೆ. ಹೊಸ ಬಡಾವಣೆ ನಿರ್ಮಾಣ ಮಾಡುವುದು, ಖಾಸಗಿ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡುವುದು ಸೇರಿದಂತೆ ಇತರೆ ಕಾರ್ಯವನ್ನು ಇನ್ನು ಮುಂದೆ ಮುಡಾ ನಿರ್ವಹಿಸುತ್ತದೆ. ಈ ಮೂಲಕ ಮೈಸೂರು ನಗರ ವ್ಯವಸ್ಥಿತವಾಗಿ ರೂಪುಗೊಳ್ಳಲು ಎಚ್ಚರ ವಹಿಸಲಿದೆ.



– ಎ.ಎನ್.ರಘುನಂದನ್, ಆಯುಕ್ತರು, ಮುಡಾ

ಈ ಸಂದರ್ಭದಲ್ಲಿ ನಾವು ತೆರಿಗೆ ಪಾವತಿಸಲು ಸಿದ್ಧರಿದ್ದು, ಮೂಲ ಸೌಕರ್ಯ ಕಲ್ಪಿಸಿ ಎಂದು ಆಯಾಯ ಬಡಾವಣೆ ನಾಗರಿಕರು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಈಗ ಮುಡಾ, ಖಾಸಗಿ ಬಡಾವಣೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಡಾವಣೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಒಂದು ವೇಳೆ ನಿನ್ನ ಗೆಳತಿ ಹಾಗೂ ಸ್ನೇಹಿತ ಇಬ್ಬರೂ ಒಂದೇ ದೋಣಿಯಲ್ಲಿ ಮುಳುಗುತ್ತಿದ್ದರೆ ನೀನು ಯಾರನ್ನು ಕಾಪಾಡುತ್ತೀಯ?

ಸ್ಟೂಡೆಂಟ್ : ಯಾರನ್ನೂ ಕಾಪಾಡಲ್ಲ, ಇಬ್ಬರೂ ಸಾಯಲಿ.

ಟೀಚರ್ : ಯಾಕಪ್ಪ...?

ಸ್ಟೂಡೆಂಟ್ : ಒಂದೇ ದೋಣಿಲಿ ಇಬ್ಬರಿಗೂ ಏನು ಕೆಲಸ...?!!!

ಮೈಸೂರು ಮಿತ್ರ

ಭಾನುವಾರ, 17 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬೆಳ್ಳಗಾದ ಕೂದಲು ವಿವೇಕದ ಸಂಕೇತವಲ್ಲ. ನಿಮ್ಮ ನಾಲಿಗೆ ಮತ್ತು ಅದು ಆಡುವ ಮಾತೇ ನಿಮ್ಮ ಪ್ರೌಢತೆಯ ಸಂಕೇತ.

– ರವೀಂದ್ರನಾಥ ಠಾಗೋರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಕ್ಕಳ ಬಾಯಿಗೆ ಹಣ್ಣು ಕೊಟ್ಟು ಮಣ್ಣು ಬಿಡಿಸು.

ನಿಮ್ಮ ಪತ್ರಗಳು

ಕಾಶ್ಮೀರ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಲಿ

ಮಾನ್ಯರೆ,

1949ರಲ್ಲಿ ತಾತ್ಕಾಲಿಕವಾಗಿ ನೀಡಲಾಗಿದ್ದ 370ನೇ ವಿಧಿಯ ವಿಶೇಷ ಸ್ಥಾನಮಾನವನ್ನು 2019ರಲ್ಲಿ ಕೇಂದ್ರ ಸರ್ಕಾರ ರದ್ದುಪಡಿಸಿತ್ತು. ಇದನ್ನು ವಿರೋಧಿಸಿ ಕಾಶ್ಮೀರದಲ್ಲಿ ಪ್ರತಿಭಟನೆಗಳು ನಡೆದರೂ ಕೇಂದ್ರ ಸರ್ಕಾರ ಸೊಪ್ಪು ಹಾಕಲಿಲ್ಲ. ದುರದೃಷ್ಟವಶಾತ್ ಕಾಂಗ್ರೆಸ್ ಪಕ್ಷದ ರಾಹುಲ್ ಗಾಂಧಿ ಸೇರಿದಂತೆ ಅನೇಕರು ನಾವು ಅಧಿಕಾರಕ್ಕೆ ಬಂದರೆ ಕಾಶ್ಮೀರದ 370ನೇ ವಿಧಿಯನ್ನು ಮರು ಸ್ಥಾಪಿಸುವುದಾಗಿ ಹೇಳಿ ಜನರ ಆಕ್ರೋಶಕ್ಕೆ ಗುರಿಯಾದರು. ಕೇಂದ್ರಾಡಳಿತ ಪ್ರದೇಶವಾದ ಕಾಶ್ಮೀರದಲ್ಲಿ ಈಗ ಹೊಸದಾಗಿ ಚುನಾಯಿತವಾದ ಓಮರ್ ಅಬ್ದುಲ್ಲಾ ನೇತೃತ್ವದ ಸರ್ಕಾರ ವಿಧಾನಸಭಾ ಅಧಿವೇಶನದಲ್ಲಿ 370ನೇ ವಿಧಿಯನ್ನು ಪುನರ್ ಸ್ಥಾಪಿಸುವಂತೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಿರುವುದು ದುರದೃಷ್ಟಕರ. 3 ದಿನ ನಡೆದ ಅಧಿವೇಶನ ಈ ಗದ್ದಲದಲ್ಲೇ ಮುಗಿದಿದೆ. ಇನ್ನಾದರೂ ಕಾಶ್ಮೀರದ ಸರ್ಕಾರ ಅಲ್ಲಿನ ಜನರ ಅಭಿವೃದ್ಧಿಗೆ ಶ್ರಮಿಸಲು ಕಾರ್ಯೋನ್ಮುಖವಾಗಲಿ. ಇಲ್ಲದಿದ್ದರೆ ವಿಧಾನಸಭೆ ಅಮಾನತ್ತಿನಲ್ಲಿಟ್ಟು ಲೆಫ್ಟಿನೆಂಟ್ ಗವರ್ನರ್ ಆಡಳಿತ ನಡೆಸಲು ಹಾದಿ ಮಾಡಿಕೊಟ್ಟಂತೆ ಆಗುತ್ತದೆ.

ಇದೇ ವೇಳೆ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಪ್ರಚಾರದಲ್ಲಿ ಮಾತನಾಡಿದ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನಮಾನ ಎಂದಿಗೂ ಅಸಾಧ್ಯ ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಪಾಕಿಸ್ತಾನ ಕಾರ್ಯಸೂಚಿಯನ್ನು ಬೆಂಬಲಿಸಬಾರದು. ಜನರ ಆಶೀರ್ವಾದ ಇರುವವರೆಗೂ ಕಾಂಗ್ರೆಸ್‌ನ ಈ ಕಾರ್ಯಸೂಚಿ ಯಶಸ್ವಿಯಾಗದು ಎಂದು ಹೇಳಿದ್ದಾರೆ. ಸಾಂಗ್ಲಿಯಲ್ಲಿ ಮಾತನಾಡಿದ ಅಮಿತ್ ಶಾ, ಛತ್ರಪತಿ ಶಿವಾಜಿ ಮಹಾರಾಜರ ನಾಡಿನಿಂದ ನಾನು ರಾಹುಲ್ ಗಾಂಧಿಯವರಿಗೆ ಈ ಮಾತು ಹೇಳುತ್ತಿದ್ದೇನೆ. ವಿಶೇಷ ಸ್ಥಾನಮಾನವನ್ನು ಮರು ಸ್ಥಾಪಿಸಲು ನಿಮಗೆ ಸಾಧ್ಯವಿಲ್ಲ. ದೇಶದ ಪ್ರತಿಯೊಂದು ಮಗುವೂ ಕಾಶ್ಮೀರಕ್ಕಾಗಿ ಹೋರಾಡಲು ಸಿದ್ಧವಿದೆ ಎಂದು ಹೇಳಿದ್ದಾರೆ. ಅಲ್ಪಸಂಖ್ಯಾತರನ್ನು ಓಲೈಸಲು ಹಾಗೂ ಅವರ ಮತ ಪಡೆಯಲು ಕಾಂಗ್ರೆಸ್ ದೇಶದ ಹಿತವನ್ನು ಕೂಡ ಮರೆಯುತ್ತದೆ ಎನ್ನುವುದು ನಿಜಕ್ಕೂ ಕಳವಳಕಾರಿ ಸಂಗತಿ. ರಾಹುಲ್ ಗಾಂಧಿ, ಹಾಗೂ ಪ್ರಿಯಾಂಕಾ ಗಾಂಧಿಯವರು ಸಂಸತ್‌ಗೆ ಹೋಗಲು ಉತ್ತರ ಭಾರತದಿಂದ ವಲಸೆ ಬಂದು ಕೇರಳದ ವಯನಾಡ್‌ನಲ್ಲಿ ಗೆದ್ದು ಹೋಗುತ್ತಾರೆ ಎನ್ನುವುದು ಅವರ ಕಾರ್ಯಸೂಚಿಯ ದಿಕ್ಸೂಚಿಯಂತೆ ಎಲ್ಲಿಯೂ ಸಲ್ಲದವರು ಇಲ್ಲಿ(ವಯನಾಡ್) ಸಲ್ಲುವರಯ್ಯ!!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಈ ಬಾರಿ ದಸರಾ ವಸ್ತುಪ್ರದರ್ಶನ ವಿಭಿನ್ನ, ವಿನೂತನ!

ಮಾನ್ಯರೇ,

ಪ್ರತಿ ವರ್ಷದಂತೆ ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಆಯೋಜಿಸಿರುವ ದಸರಾ ವಸ್ತುಪ್ರದರ್ಶನ ಈ ಬಾರಿ ಹಲವು ವೈಶಿಷ್ಟ್ಯತೆಗಳಿಂದ ಕೂಡಿದ್ದು, ಕಳೆದ ವರ್ಷದ ಕೆಲವು ಸಣ್ಣಪುಟ್ಟ ಲೋಪಗಳು ಈ ಬಾರಿ ಮರುಕಳಿಸದಂತೆ ಬಹಳ ಅಚ್ಚುಕಟ್ಟಾಗಿ ಅಧ್ಯಕ್ಷ ಅಯೂಬ್ ಖಾನ್ ಅವರ ನೇತೃತ್ವದಲ್ಲಿ ಸಿಬ್ಬಂದಿ ಹಾಗೂ ಸ್ವಯಂ ಸೇವಕರು ಶ್ರಮಿಸುತ್ತಿದ್ದಾರೆ. ವಸ್ತುಪ್ರದರ್ಶನಕ್ಕೆ ಕಾಲಿಡುತ್ತಿದ್ದಂತೆ ಮೊದಲು ನೆನಪಾಗುವುದು ಮೈಸೂರು ಧ್ವನಿ ಮೈಕ್ ಚಂದ್ರು. ಅವರು ಕಳೆದ ಕೆಲವು ವರ್ಷಗಳ ಹಿಂದೆ ದೈವಾಧೀನರಾದರು. ಅವರು ಇರುವಾಗಲೇ ಯುವ ಪ್ರತಿಭೆ ಅಜಯ್ ಶಾಸ್ತ್ರಿ ಅವರಿಗೆ ಸೂಕ್ತ ತರಬೇತಿ, ಮಾರ್ಗದರ್ಶನ ರೇಡಿಯೋ ರೂಂನಲ್ಲಿ ಕೊಟ್ಟು ತಮ್ಮಂತೆಯೇ ನಿರೂಪಣೆಯಲ್ಲಿ ತಯಾರು ಮಾಡಿದ್ದಾರೆ. ಮೈಸೂರು ದಸರಾ ವಸ್ತುಪ್ರದರ್ಶನದ ಸಮಗ್ರ ಮಾಹಿತಿ, ಪ್ರಾಧಿಕಾರದ ಸ್ವಚ್ಛತೆ, ಸಂರಕ್ಷಣೆ, ಪ್ಲಾಸ್ಟಿಕ್ ನಿಷೇಧ, ಅಪಾಯದ ಸ್ಥಳಗಳಲ್ಲಿ ಸೆಲ್ಫಿ ಫೋಟೋ ತೆಗೆದುಕೊಳ್ಳದ ಹಾಗೆ ವಿನಂತಿ ಮತ್ತು ಮದ್ಯಪಾನ ಮಾಡದೇ ಹೆಲ್ಮೆಟ್ ಧರಿಸಿ ಸಂಚರಿಸಿ ಮನೆ ಸೇರಿಕೊಳ್ಳಿ ಎನ್ನುವ ವಿನೂತನ ಶೈಲಿಯ ಸಾರ್ವಜನಿಕ ಪ್ರಕಟಣೆಗಳು, ಸರ್ಕಾರಿ ಮಳಿಗೆಗಳ ಮಾಹಿತಿ, ವಿಶೇಷವಾಗಿ ಮಕ್ಕಳು ಹಾಗೂ ಹಿರಿಯ ನಾಗರಿಕರು ತಪ್ಪಿಸಿಕೊಳ್ಳದ ಹಾಗೆ ಎಚ್ಚರದಿಂದಿರಲು ಪ್ರಕಟಣೆ, ಸರಗಳ್ಳತನ, ಮೊಬೈಲ್, ಪರ್ಸ್ ಕಳ್ಳರಿಂದ ಎಚ್ಚರವಿರುವಂತೆ ಆಗಿಂದಾಗ್ಗೆ ಜನರಿಗೆ ಜಾಗೃತಿ ಮೂಡಿಸುವ ರೂಪಣೆ ಶೈಲಿ ಮೈಕ್ ಚಂದ್ರು ಅವರನ್ನು ನೆನಪಿಸುತ್ತದೆ.

– ಹರೀಶ್ ಕುಮಾರ್, ವಿನಾಯಕನಗರ, ಮೈಸೂರು

ಗ್ಯಾರಂಟಿಗಳು ಜನತೆಯ ಬಾಯಿ, ಕೈಕಟ್ಟಿ ಹಾಕಿದೆಯೇ?

ಮಾನ್ಯರೆ,

ಕಳೆದ ತಿಂಗಳು ಸೆಪ್ಟೆಂಬರ್ ಹಾಗೂ ಈ ಅಕ್ಟೋಬರ್‌ನಲ್ಲಿ ಕರ್ನಾಟಕದಲ್ಲಿ ಮುಂಗಾರು ಹಾಗೂ ಹಿಂಗಾರು ಮಳೆ ಮತ್ತು ವಾಯುಭಾರ ಕುಸಿತದ ಮಳೆಯಿಂದ ಸಾವಿರಾರು ಕೋಟಿ ರೂ. ನಷ್ಟವಾಗಿದೆ. ಲಕ್ಷಾಂತರ ರೈತರು, ಗ್ರಾಮೀಣರು, ನಗರದ ನಿವಾಸಿಗಳು, ಮಳೆಹಾನಿ ಸಮಸ್ಯೆ ಸಂಕಟಗಳಿಂದ ನರಳುತ್ತಿದ್ದಾರೆ. ಕಳೆದ ಎರಡು ತಿಂಗಳಿನಿಂದ ಮಳೆಹಾನಿ ರಾಜ್ಯದಲ್ಲಿ ಉಂಟುಮಾಡುತ್ತಿರುವ ಬಗ್ಗೆ ಮಾಧ್ಯಮಗಳ (ಪತ್ರಿಕೆಗಳ) ಸಚಿತ್ರ ವರದಿ, ಕನ್ನಡನ್ಯೂಸ್ ಚಾನೆಲ್‌ಗಳ ನೇರ ಪ್ರಸಾರದ ಮಳೆಹಾನಿ ದೃಶ್ಯಗಳು ಸಹ ರಾಜ್ಯದ ಜನಪ್ರತಿನಿಧಿಗಳ, ಅಧಿಕಾರಿಗಳ ಮನಕರಗಿಸಲಿಲ್ಲವೆ !?

ಮಳೆಹಾನಿ ಪರಿಹಾರದ ಸಕಾಲ ಕ್ರಮಗಳಿಗಿಂತ ಹೊಸ ಹಾಗೂ ಹಳೆಯ ಹಗರಣಗಳ ಆರೋಪ-ಪ್ರತ್ಯಾರೋಪವಾದ ವಿವಾದದಲ್ಲಿ, ರಾಜೀನಾಮೆ ರಾಜಕೀಯದಲ್ಲಿ ! ಎಫ್.ಐ.ಆರ್ ರಾಜಕೀಯದಲ್ಲಿ ! ತನಿಖಾ ರಾಜಕೀಯದಲ್ಲಿ ! ಉಪಚುನಾವಣೆ ರಾಜಕೀಯದಲ್ಲಿ, ಪ್ರಚೋದನಕಾರಿ ಬಿಸಿ ಹೇಳಿಕೆಗಳಲ್ಲಿ ಸಮಯವನ್ನು ವ್ಯರ್ಥ ಮಾಡುತ್ತಿರುವ ಜನಪ್ರತಿನಿಧಿಗಳಿಗೆ ರಾಜ್ಯದ ಗಣ್ಯ ಹಿರಿಯರು, ಹೈಕೋರ್ಟ್, ಅರಿವು, ಎಚ್ಚರ, ಮೂಡಿಸಬಾರದೆ !

ಕಳೆದ ಎರಡು ತಿಂಗಳ ಮಳೆ ಹಾನಿ ಸಂಕಟ ಸಮಸ್ಯೆಗಳಿಗೆ ಜನಪ್ರತಿನಿಧಿಗಳು ತಮ್ಮ ಕ್ಷೇತ್ರಗಳಲ್ಲಿ, ಎಷ್ಟು ಪ್ರಮಾಣದಲ್ಲಿ ಎಷ್ಟು ಜನರಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನೆರವಿನ ಹಸ್ತ ಚಾಚಿದ್ದಾರೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಳೆ ಹಾನಿ ಸಂತ್ರಸ್ತರಿಗೆ ಯಾವ ರೀತಿ ಯಾವ ಪ್ರಮಾಣದ ನೆರವು ನೀಡಿದ್ದಾರೆ ಎನ್ನುವ ಅಂಕಿ ಅಂಶಗಳು ಬಹಿರಂಗವಾಗುವುದೆ !?

ರಾಜ್ಯದ ಜನಪ್ರತಿನಿಧಿಗಳಿಗೆ, ತಮ್ಮ ಜವಾಬ್ದಾರಿ ಹೊಣೆಗಾರಿಕೆ, ನೆನಪಿಸುವ, ಪ್ರಶ್ನಿಸಬೇಕಾಗಿದ್ದ ಮತದಾರರು 5 ಉಚಿತ ಗ್ಯಾರಂಟಿಗಳು ಜನತೆಯ ಬಾಯಿ, ಕೈ ಕಟ್ಟಿ ಹಾಕಿದೆಯೇ? 5 ಉಚಿತ ಗ್ಯಾರಂಟಿಗಳು ರಾಜ್ಯದಲ್ಲಿ ಹಲವು ಸಮಸ್ಯೆ ಸೃಷ್ಟಿಸಿದ್ದರೂ ಮತದಾರರ ಮೌನಕ್ಕೆ ಕಾರಣವೇ? ಇದೆಂತಹ ಗ್ಯಾರಂಟಿ ವಿಪರ್ಯಾಸ ! ಪಂಚ ಉಚಿತ ಗ್ಯಾರಂಟಿಗಳಿದ್ದರೂ ಬದುಕು ಪಂಕ್ಚರ್ ಆಗಿರುವುದು ಎಂತಹ ವಿಪರ್ಯಾಸ !

–ಮಂಜುಳಾ ರಾಮಶೇಷ, ರಾಘವೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಪೈ ಸಹೋದರರ ಪರಿವರ್ತನಾ ಪರ್ವ...

ಉಡುಪಿ ಜಿಲ್ಲೆಯ ಸ್ವರ್ಣಾ ನದಿಯ ತೀರದಲ್ಲಿ ತೋನ್ಸೆ ಎಂಬ ಚಿಕ್ಕ ಗ್ರಾಮವಿದೆ. ಇಲ್ಲಿ ಗೌಡ ಸಾರಸ್ವತ ಬ್ರಾಹ್ಮಣರ ಕುಟುಂಬವೊಂದು ವಾಸಿಸುತ್ತಿತ್ತು. ರಂಗ ಪೈ ಅವರ ಹತ್ತು ಜನ ಮಕ್ಕಳಲ್ಲಿ ಒಬ್ಬರು ಅನಂತ ಪೈ, ಬ್ರಹ್ಮಾವರದಲ್ಲಿ ಒಂದು ಸಣ್ಣ ಅಂಗಡಿಯನ್ನು ನಡೆಸುತ್ತಿದ್ದರು. ಅವರಿಗೆ ನಾಲ್ಕು ಮಂದಿ ಗಂಡು ಮಕ್ಕಳು. ಪುರುಷೋತ್ತಮ, ಉಪೇಂದ್ರ, ಮಾಧವ ಮತ್ತು ರಘುನಾಥ. ಈ ಮೂರನೆಯವರೇ ತೋನ್ಸೆ ಮಾಧವ ಅನಂತ ಪೈ ಅಥವಾ ಟಿ.ಎಂ.ಎ.ಪೈ. 1898 ಏಪ್ರಿಲ್ 30ರಂದು ಜನಿಸಿದ ಮಾಧವ ಪೈಯವರು ಮುಂದೊಂದು ದಿನ ಇತಿಹಾಸದಲ್ಲಿ ತಮ್ಮ ಮತ್ತು ಕುಟುಂಬದ ಹೆಸರನ್ನು ಸುವರ್ಣಾಕ್ಷರದಲ್ಲಿ ಬರೆಯುತ್ತಾರೆಂದು ಯಾರಿಗೆ ತಿಳಿದಿತ್ತು? ತೋನ್ಸೆ ಗ್ರಾಮದ ಕಲ್ಯಾಣಪುರದ ಶ್ರೀಮತಿ ಯಶೋಧ ಅವರ ತಾಯಿ. 1908ರಲ್ಲಿ ಶ್ರೀ ಅನಂತಪೈ ಅವರ ಅಕಾಲಿಕ ಮರಣದಿಂದಾಗಿ ತಾಯಿ ಯಶೋಧ ಅವರು ತಮ್ಮ ಮಕ್ಕಳೊಡನೆ ತವರೂರಾದ ಕಲ್ಯಾಣಪುರಕ್ಕೆ ಬಂದು ತಂದೆಯ ಮನೆಯಲ್ಲಿ ವಾಸಿಸಬೇಕಾಯಿತು. ಮಕ್ಕಳ ವಿದ್ಯಾಭ್ಯಾಸ ಮತ್ತು ಸಚ್ಚಾರಿತ್ರ್ಯಕ್ಕೆ ಈಕೆ ಅದೆಷ್ಟು ಮಹತ್ವ ಕೊಟ್ಟಿದ್ದರೆಂಬುದಕ್ಕೆ ಆ ಮಕ್ಕಳ ಏಳಿಗೆಯೇ ದೃಷ್ಟಾಂತ. ಅವರು ಮಕ್ಕಳಲ್ಲಿ ಹಾಕಿದ ಬುನಾದಿಯೇ ಅವರ ಯಶಸ್ಸಿಗೆ ಕಾರಣ ಎಂಬುದರಲ್ಲಿ ಸಂಶಯವೇ ಇಲ್ಲ. ಎಲ್ಲ ಮಕ್ಕಳಲ್ಲಿ ಮಡುಗಟ್ಟಿದ್ದ ಪ್ರಾಮಾಣಿಕತೆ, ಸರಳತೆ, ದೈವಭಕ್ತಿ ಮತ್ತು ಧಾರ್ಮಿಕತೆಗೆ ಅದೇ ಕಾರಣ ಎಂದು ಧಾರಾಳವಾಗಿ ಹೇಳಬಹುದು.

ಕಲ್ಯಾಣಪುರದಲ್ಲಿ ಆರಂಭಿಕ ಶಿಕ್ಷಣವನ್ನು ಪಡೆದ ಅಣ್ಣ-ತಮ್ಮಂದಿರು ಉಡುಪಿಯಲ್ಲಿದ್ದ ಪ್ರೌಢಶಾಲೆಗೆ ಹೋಗಲು, ಅಲ್ಲಿಯೇ ಇದ್ದ ಅವರ ಚಿಕ್ಕಪ್ಪ ಮುಕುಂದ ಪೈ ಅವರು ನೆರವಾದರು. ಮುಂದೆ ಮಾಧವ ಪೈಯವರ ಅಣ್ಣ ಪುರುಷೋತ್ತಮ ಅವರು ಉಡುಪಿಯಲ್ಲಿ ಒಂದು ಚಿಕ್ಕ ಅಂಗಡಿಯನ್ನು ತೆರೆದಾಗ ಮಾಧವ ಪೈಯವರು ಶಾಲೆಯ ಊಟದ ಬಿಡುವಿನಲ್ಲಿ ತಾವೂ ಅಂಗಡಿಯ ವಹಿವಾಟನ್ನು ನೋಡಿಕೊಂಡು, ಅಣ್ಣನನ್ನು ಊಟಕ್ಕಾಗಿ ಮನೆಗೆ ಕಳುಹಿಸುತ್ತಿದ್ದರು. ದಯೆ, ಕರುಣೆ ಎಂಬುದು ಮನೆಯಿಂದಲೇ ಆರಂಭವಾಗಬೇಕು ಎನ್ನಲು ಇದು ಉದಾಹರಣೆ. ಅಣ್ಣನ ಅಂಗಡಿಯಲ್ಲಿ ಇರುತ್ತಿದ್ದ ರಾಷ್ಟ್ರೀಯ ಪುಸ್ತಕಗಳು, ಖಾದಿ ಬಟ್ಟೆ ಮುಂತಾದವು ಹದಿವಯಸಿನ ಮಾಧವಪೈಯವರ ಮನಸಿನ ಮೇಲೆ ಪರಿಣಾಮ ಬೀರಿರಲು ಸಾಕು. ಸ್ವಾವಲಂಬನೆಯ ಬೀಜ ಇಲ್ಲಿಯೇ ಮೊಳೆಯಲು ಪ್ರಾರಂಭಿಸಿರಬಹುದು.

ನಾಲ್ಕೂ ಮಕ್ಕಳ ಉನ್ನತ ಶಿಕ್ಷಣದ ಭಾರವನ್ನು ವಹಿಸುವ ಸ್ಥಿತಿಯಲ್ಲಿ ಕುಟುಂಬ ಇರಲಿಲ್ಲ. ಆದರೆ ಓದಿನಲ್ಲಿ ಮುಂದಿದ್ದ, ಶಿಕ್ಷಕರ ಕಣ್ಮಣಿಯಾಗಿದ್ದ ಮಾಧವಪೈಯವರು ಶಿಕ್ಷಣವನ್ನು ಮುಂದುವರೆಸುವ ನಿರ್ಧಾರ ಮಾಡಿ ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿಗೆ ಸೇರಿದರು. ಇಲ್ಲಿಯ ಗಾಢವಾದ ಅನುಭವಗಳು ಅವರಿಗೆ ಕರುಣೆಯ, ತಪ್ಪು ಮಾಡಿದವರಿಗೆ ಮತ್ತೆ ಅವಕಾಶವನ್ನು ನೀಡುವ ಮತ್ತು ಮಕ್ಕಳನ್ನು ಪ್ರೀತಿಸಿದರೆ ಖಂಡಿತಾ ಅವರೂ ನಿಮ್ಮನ್ನು ಪ್ರೀತಿಸುತ್ತಾರೆ ಎಂಬ ಅಮೂಲ್ಯ ಪಾಠಗಳನ್ನು ಕಲಿಸಿತು. ಜೊತೆಗೆ ಶಿಕ್ಷಣ ಎಂಬುದು ಮಾಹಿತಿಗಳನ್ನು ನೀಡುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯವನ್ನು ಕಟ್ಟುವ ಕೆಲಸ ಎಂಬುದನ್ನೂ ಕಲಿಸಿತು. ಇದು ಮುಂದೆ ಶಿಕ್ಷಣ ಕ್ಷೇತ್ರದಲ್ಲಿ ಅವರು ಅಗಾಧವಾದುದನ್ನು ಸಾಧಿಸಲು ಪ್ರೇರೇಪಣೆ ನೀಡಿರಬೇಕು. ಕಾಲೇಜು ಶಿಕ್ಷಣ ಮುಗಿಸುವಷ್ಟರಲ್ಲಿ ಬದುಕಿನಲ್ಲಿ ಅವರು ಕಲಿತ ಪಾಠಗಳೆಂದರೆ ತಾಳ್ಮೆ, ಪರಿಶ್ರಮ, ನಿರಾಶೆಯನ್ನು ನುಂಗಿ ಮುನ್ನಡೆವ ಛಲ, ಆತ್ಮವಿಶ್ವಾಸ, ಜನರನ್ನು ಸಂಪರ್ಕಿಸುವ ಕಲೆ, ಗ್ರಾಮೀಣ ಬದುಕಿನ ಏಳು-ಬೀಳುಗಳಿಗೆ ಮುಖಾಮುಖಿಯಾಗುವ ಧೈರ್ಯ ಇತ್ಯಾದಿ ಗುಣಗಳನ್ನು ಅರಗಿಸಿಕೊಂಡಿದ್ದರು.



ಮಾಧವ ಅನಂತ ಪೈ

> "ಶಿಕ್ಷಣ ಎಂಬುದು ಮಾಹಿತಿಗಳನ್ನು ನೀಡುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯವನ್ನು ಕಟ್ಟುವ ಕೆಲಸ ಎಂಬುದನ್ನೂ ಕಲಿಸಿತು. ಇದು ಮುಂದೆ ಶಿಕ್ಷಣ ಕ್ಷೇತ್ರದಲ್ಲಿ ಅವರು ಅಗಾಧವಾದುದನ್ನು ಸಾಧಿಸಲು ಪ್ರೇರೇಪಣೆ ನೀಡಿರಬೇಕು. ಕಾಲೇಜು ಶಿಕ್ಷಣ ಮುಗಿಸುವಷ್ಟರಲ್ಲಿ ಬದುಕಿನಲ್ಲಿ ಅವರು ಕಲಿತ ಪಾಠಗಳೆಂದರೆ ತಾಳ್ಮೆ, ಪರಿಶ್ರಮ, ನಿರಾಶೆಯನ್ನು ನುಂಗಿ ಮುನ್ನಡೆವ ಛಲ, ಆತ್ಮವಿಶ್ವಾಸ, ಜನರನ್ನು ಸಂಪರ್ಕಿಸುವ ಕಲೆ, ಗ್ರಾಮೀಣ ಬದುಕಿನ ಏಳು-ಬೀಳುಗಳಿಗೆ ಮುಖಾಮುಖಿಯಾಗುವ ಧೈರ್ಯ ಇತ್ಯಾದಿ ಗುಣಗಳನ್ನು ಮಾಧವ ಅನಂತ ಪೈಯವರು ಅರಗಿಸಿಕೊಂಡಿದ್ದರು.

ಇಂಟರ್‌ಮೀಡಿಯೇಟ್ ಮುಗಿಸಿ ಇನ್ನೇನು ಬಿಎಗೆ ಸೇರಬೇಕೆಂದಿದ್ದಾಗ ಅವರು ಕಲ್ಯಾಣಪುರದಲ್ಲಿ ಓದಿದ ಹಿಂದೂ ಶಾಲೆಯು ಮುಚ್ಚುವ ಸ್ಥಿತಿಗೆ ಬಂದಿದೆ ಎಂಬುದನ್ನು ತಿಳಿದು, ಅದರ ಉಳಿವಿಗಾಗಿ ಟೊಂಕ ಕಟ್ಟಿದರು. ಗ್ರಾಮದವರಿಂದ ದೇಣಿಗೆ ಕೇಳಿದಾಗ ದೊರೆತದ್ದು 25 ರೂಗಳು. ಮುಂಬಯಿಗೆ ಹೋಗಿ 4000 ರೂಗಳನ್ನು ಚಂದಾ ಎತ್ತಿತಂದು, ತಾವು ಓದಿದ ಶಾಲೆಯ ಪುನರುತ್ಥಾನಕ್ಕೆ ಕಾರಣೀಭೂತರಾದರು. ಯಾವುದೇ ರೂಪದ ಸಹಾಯಹಸ್ತವನ್ನು ಸ್ವೀಕರಿಸುತ್ತಿದ್ದ ಅವರು, ಮರ-ಮುಂಗಟ್ಟು, ಅದನ್ನು ಬಾಡಿಗೆ ಇಲ್ಲದೆ ಸಾಗಿಸಲು ಗಾಡಿಯವರ ಸಹಾಯ, ಹಳೇ ವಿದ್ಯಾರ್ಥಿಗಳು ಸಂಬಳ ಪಡೆಯದೇ ಕಲಿಸುವಂತೆ ಮಾಡಲು ತಾವೇ ಹಾಗೆ ನಡೆದು, ಮಾದರಿಯಾದರು. ಒಬ್ಬ ವಿದ್ಯಾರ್ಥಿ ತಾನು ಓದಿದ ಶಾಲೆಯ ಋಣವನ್ನು ತೀರಿಸಲು ಇದಕ್ಕಿಂತ ಒಳ್ಳೆಯ ಮಾರ್ಗ ಉಂಟೆ? ನಂತರ ಅವರು ವೈದ್ಯಕೀಯ ಶಿಕ್ಷಣ ಪಡೆಯಲು ಮದ್ರಾಸಿಗೆ ತೆರಳಿದರು. ಐದು ವರ್ಷಗಳ ನಂತರ ಊರಿಗೆ ಬಂದು, ವಿದೇಶದಲ್ಲಿ ಹಣ ಗಳಿಸಲು ವಿಪುಲಾವಕಾಶವಿದೆ ಎಂದರಿತು, ಅಲ್ಲಿಗೆ ಹೋಗಲು ಸಿದ್ಧತೆ ಮಾಡಿಕೊಂಡು ತಾಯಿಯವರ ಆಶೀರ್ವಾದ ಕೇಳಲು ಬಂದಾಗ, ಅವರು ಇದನ್ನು ಒಪ್ಪದೆ, ನಿನ್ನ ಜ್ಞಾನದ ಪ್ರಯೋಜನ ನಮ್ಮ ಜನರಿಗೆ ಆಗಬೇಕು. ಅಷ್ಟು ದೂರ ಹೋಗಿ ನೀನು ನಮಗಾಗಿ ಗಳಿಸುವುದು ಬೇಡ ಎಂದರು. ತಾಯಿಯ ಮಾತಿಗೆ ಬೆಲೆಕೊಟ್ಟು ಇಲ್ಲೇ ಉಳಿದ ಅವರು, ಮುಂದೆ ನಿರ್ಮಿಸಿದುದು ಇತಿಹಾಸ.

ಶಸ್ತ್ರಚಿಕಿತ್ಸೆಯು ಅಪರೂಪವಾಗಿದ್ದ ಕಾಲದಲ್ಲಿ ಒಳ್ಳೆಯ ಶಸ್ತ್ರಚಿಕಿತ್ಸಕ ಎಂದು ಅವರು ಹೆಸರು ಗಳಿಸಿದರು. ಶಸ್ತ್ರಚಿಕಿತ್ಸೆ ನಂತರ ಸಾಮಾನ್ಯವಾಗಿ ರೋಗಿಗಳು ಮನೆಯಲ್ಲಿಯೇ ಆರೈಕೆ ಪಡೆಯುತ್ತಿದ್ದ ಕಾಲ ಅದು. ಅದರ ಪ್ರಾಮುಖ್ಯತೆ ಮತ್ತು ಅವಶ್ಯಕತೆಯನ್ನು ಮನಗಂಡ ಅವರು ತಮ್ಮ ಕ್ಲಿನಿಕ್ಕಿಗೆ ಒಂದು ನರ್ಸಿಂಗ್ ಹೋಂ ಅನ್ನು ಸೇರಿಸಿದರು. ಜನರಿಗೆ ಲಸಿಕೆಯ ಮಹತ್ವವನ್ನು ಮನವರಿಕೆ ಮಾಡಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಶ್ರೀಸಾಮಾನ್ಯರ ಅವಶ್ಯಕತೆಗಳಿಗೆ ಕಿವಿಗೊಡದ ಬ್ಯಾಂಕಿನ ನಡವಳಿಕೆಯನ್ನು ನೋಡಿ ಪೈಗಳು ತಾವೇ ಒಂದು ನೂತನ ಬ್ಯಾಂಕನ್ನು ಆರಂಭಿಸುವ ಯೋಚನೆ ಮಾಡಿದುದರ ಫಲವಾಗಿ ಸಿಂಡಿಕೇಟ್ ಬ್ಯಾಂಕ್ ಕಣ್ತೆರೆಯಿತು.

ಉಳಿತಾಯದ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಅವರು ಯಶಸ್ವಿಯಾದರು. ಜನರಿಗೆ ಆರ್ಥಿಕ ಸುಭದ್ರತೆಯನ್ನು ಒದಗಿಸಲು ತಮ್ಮ ವೈದ್ಯಕೀಯ ವೃತ್ತಿಗೆ ವಿದಾಯ ಹೇಳಲು ಹಿಂಜರಿಯಲಿಲ್ಲ. ಜೊತೆಗೆ ವಿಮಾ ಯೋಜನೆಗೂ ಚಾಲನೆ ಇತ್ತರು. ಅವರು ಆರಂಭಿಸಿದ 'ದಿ ಅಕಾಡಮಿ ಆಫ್ ಜನರಲ್ ಎಜುಕೇಷನ್' ಸಮಾಜದ ಅವಶ್ಯಕತೆಗೆ ತಕ್ಕ ಶಿಕ್ಷಣ ನೀಡುವುದರತ್ತ ಕಾರ್ಯಪ್ರವೃತ್ತವಾಯಿತು. ಹೊಲಿಗೆ, ಕುಂಬಾರಿಕೆ, ಸಂಗೀತ, ಕಸೂತಿ, ಫೋಟೋಗ್ರಫಿ, ರೇಡಿಯೋ ರಿಪೇರಿ, ಜೇನು, ಕೋಳಿಸಾಕಣೆ ಮುಂತಾದ ಕಸುಬುಗಳನ್ನು ಕಲಿಸಿದ ಹೆಗ್ಗಳಿಕೆ ಅದರದು. ತಾನೇ ಡಿಪ್ಲೋಮಾ ಪದವಿಯನ್ನೂ ನೀಡಿ, ಸಾಮಾನ್ಯರೂ ಗೌರವದ ಬದುಕನ್ನು ನಿರ್ವಹಿಸಲು ಕಾರಣರಾದರು. ಕಲ್ಲುಗುಡ್ಡದಂತಿದ್ದ ಮಣ್ಣಪಳ್ಳದ 107 ಎಕರೆ ಜಾಗವನ್ನು ಖರೀದಿಸಿ ಅಲ್ಲಿ ಹಲವು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪೈ ಸಹೋದರರು ಆರಂಭಿಸಿದರು. ಹಲವು ಏಳುಬೀಳುಗಳನ್ನು ಕಂಡ ಇವುಗಳಲ್ಲಿ ಇಂದಿನ ಮಣಿಪಾಲ್ ಜೂನಿಯರ್ ಕಾಲೇಜು ಅಂದು ಸ್ಥಾಪಿಸಿದ ಹೈಯರ್ ಪ್ರೈಮರಿ ಶಾಲೆಯ ರೂಪಾಂತರವಾಗಿ ಉಳಿದಿದೆ.

ತಮ್ಮ ವಾಸ್ತವ್ಯವನ್ನು ಉಡುಪಿಯಿಂದ ಮಣಿಪಾಲಕ್ಕೆ ಬದಲಿಸಿದ ಉಪೇಂದ್ರಪೈ ಮತ್ತು ಮಾಧವ ಪೈಗಳು ಕ್ರಮೇಣ ಅಲ್ಲಿ ಪೋಸ್ಟಾಫೀಸ್, ಪ್ರೌಢಶಾಲೆ, ಕಾಲೇಜುಗಳನ್ನು ಆರಂಭಿಸಿದರು. ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಕಸ್ತೂರಬಾ ಮೆಡಿಕಲ್ ಕಾಲೇಜು, ಕಸ್ತೂರಬಾ ಮೆಟರ್ನಿಟಿ ಸೆಂಟರ್, ನೆಹರು ಮೆಮೋರಿಯಲ್ ಗ್ರಂಥಾಲಯ, ಉಡುಪಿ ಲಾ ಕಾಲೇಜು, ಸ್ಕೂಲ್ ಆಫ್ ನರ್ಸಿಂಗ್, ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜು, ಕಸ್ತೂರಬಾ ಜನರಲ್ ಆಸ್ಪತ್ರೆ, ಪೆರ್ಡೂರಿನ ಪ್ರೌಢಶಾಲೆ, ಕುಂದಾಪುರದ ಭಂಡಾರ್ಕರ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಪರ್ಕಳದ ಹೈಸ್ಕೂಲ್, ನಗರದಲ್ಲಿ ಹೈಸ್ಕೂಲ್, ಮುಲ್ಕಿಯ ವಿಜಯ ಕಾಲೇಜು, ಮಣಿಪಾಲ್ ಪವರ್ ಪ್ರೆಸ್, ಉಡುಪಿಯ ಕಾಲೇಜ್ ಆಫ್ ಎಜುಕೇಷನ್, ಮೂಡಬಿದಿರೆಯ ಶ್ರೀ ಮಹಾವೀರ ಕಾಲೇಜು, ಶೃಂಗೇರಿಯ ಜೆಸಿಬಿಎಂ ಕಾಲೇಜು, ಆಗುಂಬೆಯ ಎಸ್‌ವಿಎಸ್ ಹೈಸ್ಕೂಲ್, ವ್ಯಾಲಿವ್ಯೂ ಹೆಲ್ತ್ ಕ್ಲಬ್ ಇತ್ಯಾದಿ ಅಸಂಖ್ಯಾತ ಸಂಸ್ಥೆಗೆ ಕಾರಣರಾದ ಟಿ.ಎಂ.ಎ. ಪೈಗಳು 1979ರಲ್ಲಿ ಕಾಲನ ಕರೆಗೆ ಓಗೊಟ್ಟು ನಡೆದರು. ಆದರೆ ಅವರ ಸೇವಾ ಕಾರ್ಯಗಳು ಅವರನ್ನು ಎಂದೆಂದಿಗೂ ಚಿರಸ್ಮರಣೀಯರನ್ನಾಗಿಸಿವೆ.

ಮೈಸೂರಿನಲ್ಲಿ ಶ್ರೀ ವೈಷ್ಣವ ಸಮಾವೇಶದ ಪೂರ್ವಭಾವಿ ಸಭೆ



ಬೆಂಗಳೂರಿನ ಅರಮನೆ ಮೈದಾನದಲ್ಲಿ ನ.24ರಂದು ನಡೆಯಲಿರುವ ಬೃಹತ್ ಶ್ರೀ ವೈಷ್ಣವ ಸಮಾವೇಶದ ಪೂರ್ವಭಾವಿ ಸಭೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ರಾಮಾನುಜ ಸಹಕಾರ ಸಂಘದ ಆವರಣದಲ್ಲಿನ ಅಭ್ಯುದಯ ಸಂಘದಲ್ಲಿ ನಡೆಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಎಸ್‌ವಿಎಲ್‌ಎನ್ ಆಚಾರ್, ಯೋಗ ನರಸಿಂಹ (ಮುರುಳಿ), ಪುಟ್ಟಸ್ವಾಮಿ, ಮಾಜಿ ನಗರಪಾಲಿಕೆ ಸದಸ್ಯರಾದ ಎಂ.ಡಿ.ಪಾರ್ಥಸಾರಥಿ, ಸೌಭಾಗ್ಯ ಮೂರ್ತಿ, ಡಾ.ಲಕ್ಷ್ಮಿ, ಸಿ.ಪಿ.ಪಾರ್ಥಸಾರಥಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಟಿ.ಎಸ್.ಅರುಣ್, ಚಕ್ರಪಾಣಿ, ರಾಜಗೋಪಾಲ್, ವೀಣಾ ಅಯ್ಯಂಗಾರ್, ಆಂಡಾಲ್ ಇತರರು ಉಪಸ್ಥಿತರಿದ್ದರು.

ಅಕಾಲಿದಳದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ರಾಜೀನಾಮೆ



ಚಂಡೀಗಢ: ಎರಡೂವರೆ ತಿಂಗಳ ಹಿಂದೆ ಅಕಾಲ್ ತಖ್ತ್‌ನಿಂದ 'ತಂಖಯಾ' (ಧಾರ್ಮಿಕ ದುಷ್ಕೃತ್ಯದ ಅಪರಾಧಿ) ಎಂದು ಘೋಷಿಸಲ್ಪಟ್ಟ ಶಿರೋಮಣಿ ಅಕಾಲಿ ದಳ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಸುಖ್ಬೀರ್ ಸಿಂಗ್ ಬಾದಲ್ ಹೊಸ ಅಧ್ಯಕ್ಷರ ಆಯ್ಕೆಗೆ ದಾರಿ ಮಾಡಿಕೊಡಲು ಇಂದು ಪಕ್ಷದ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ ಎಂದು ಪಕ್ಷದ ವಕ್ತಾರ ಡಾ.ದಲ್ಜೀತ್ ಸಿಂಗ್ ಚೀಮಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ತಮ್ಮ ನಾಯಕತ್ವದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಕ್ಕಾಗಿ ಮತ್ತು ಅಧಿಕಾರವಧಿಯುದ್ದಕ್ಕೂ ಬೆಂಬಲ, ಸಹಕಾರ ನೀಡಿದ ಪಕ್ಷದ ನಾಯಕರು ಕಾರ್ಯಕರ್ತರಿಗೆ ಬಾದಲ್ ಧನ್ಯವಾದ ಹೇಳಿದ್ದಾರೆ ಎಂದು ಚೀಮಾ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಅ.24ರಂದು, ಅಕಾಲ್ ತಖ್ತ್ ಸುಖ್ಬೀರ್ ಸಿಂಗ್ ಬಾದಲ್ ಅವರನ್ನು ಉಪಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರ ಸೇರಿದಂತೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿರ್ಬಂಧಿಸಿತು. ರಾಜ್ಯದ 4 ವಿಧಾನಸಭಾ ಕ್ಷೇತ್ರಗಳಿಗೆ ನ.20ರಂದು ಉಪಚುನಾವಣೆ ನಿಗದಿಯಾಗಿದೆ.

ಉಭಯ ಅಭ್ಯರ್ಥಿಗಳಿಗಿಂತ ಕಾಂಗ್ರೆಸ್, ಎನ್‌ಡಿಎ ನಾಯಕರ ವರ್ಚಸ್ಸು ಒರೆಗೆ ಹಚ್ಚಲಿರುವ ಚನ್ನಪಟ್ಟಣ ಫಲಿತಾಂಶ!

ಬೆಂಗಳೂರು, ನ.16(ಕೆಎಂಶಿ)–ಚನ್ನಪಟ್ಟಣ ವಿಧಾನ ಸಭಾ ಉಪಚುನಾವಣೆ ಫಲಿತಾಂಶ ಕಾಂಗ್ರೆಸ್ ಹಾಗೂ ಎನ್‌ಡಿಎ ದಿಗ್ಗಜ ನಾಯಕರ ವರ್ಚಸ್ಸಿನ ಮೇಲೆ ಪರಿಣಾಮ ಬೀರಲಿದೆ.

ರಾಜ್ಯದ ಇತಿಹಾಸದಲ್ಲೇ ಉಪ ಚುನಾವಣೆಯೊಂದನ್ನು ಯಾವುದೇ ರಾಜಕೀಯ ಪಕ್ಷ ಹಾಗೂ ನಾಯಕರು ಈ ಮಟ್ಟಕ್ಕೆ ತಮ್ಮ ವರ್ಚಸ್ಸನ್ನು ಪಣಕ್ಕಿಟ್ಟು ಹೋರಾಟ ನಡೆಸಿರಲಿಲ್ಲ. ಚುನಾವಣೆ ಫಲಿತಾಂಶದಿಂದ ವಿರೋಧಿಗಳಿಗೆ ಪಾಠ ಕಲಿಸಬೇಕೆಂಬ ಛಲದಿಂದ ಈ ನಾಯಕರು ಪರಸ್ಪರ ಹೋರಾಟ ನಡೆಸಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್, ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರುಗಳಿಗಿಂತಲೂ ಇವರ ಪರವಾಗಿ ಪ್ರಚಾರ ಮಾಡಿದ ನಾಯಕರುಗಳ ಪ್ರತಿಷ್ಠೆ ಪ್ರಶ್ನೆಯಾಗಿತ್ತು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಎನ್‌ಡಿಎ ಕೂಟದಲ್ಲಿ ತಮ್ಮ ವರ್ಚಸ್ಸು ಉಳಿಸಿಕೊಳ್ಳುವ ಪ್ರಶ್ನೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ವಿರೋಧಿಗಳೆಲ್ಲರೂ ಒಂದಾಗಿ ಚನ್ನಪಟ್ಟಣ ಕ್ಷೇತ್ರದಲ್ಲೇ ಕುಮಾರಸ್ವಾಮಿ ಅವರನ್ನು ರಾಜಕೀಯವಾಗಿ ಹಣಿಯಲು ಪ್ರಯತ್ನ ನಡೆದಿತ್ತು. ಇದೇ ಕಾರಣಕ್ಕೆ ತಮ್ಮ ಪಕ್ಷಕ್ಕೆ ಅಸ್ತಿತ್ವ ಇಲ್ಲದಿದ್ದರೂ ಬಿಜೆಪಿಯಿಂದ ಯೋಗೇಶ್ವರ್ ಅವರನ್ನೇ ಹೈಜಾಕ್ ಮಾಡಿ, ಹಸ್ತದ ಚಿಹ್ನೆಯಡಿ ಕಣಕ್ಕಿಳಿಸಿದ್ದರು. ಇನ್ನು ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ತಾವೂ ಅಧಿಕಾರದಿಂದ ಕೆಳಗಿಳಿಯುವಲ್ಲಿ ಯೋಗೇಶ್ವರ್ ಅವರ ಹಿಂಬಾಗಿಲಿನ ರಾಜಕೀಯ ತಂತ್ರಕ್ಕೆ ತಕ್ಕಪಾಠ ಕಲಿಸುವ ಪಣತೊಟ್ಟಿದ್ದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ತಮ್ಮ ಕುಟುಂಬದ ಮೂರನೇ ತಲೆಮಾರಿನ ಕುಡಿಯನ್ನು ರಾಜಕೀಯವಾಗಿ ಮೇಲೆತ್ತಿ, ತಮ್ಮ ಪುತ್ರ ಕುಮಾರಸ್ವಾಮಿಯನ್ನು ದೆಹಲಿ ರಾಜಕೀಯದಲ್ಲಿ ಮತ್ತಷ್ಟು ಮೇಲೇರಿಸಲು, ಇಳಿವಯಸ್ಸಿನಲ್ಲೂ ಸತತ ಎಂಟು ದಿನಗಳ ಕಾಲ ಪ್ರಚಾರ ನಡೆಸಿದರು.

ಕ್ಷೇತ್ರದಲ್ಲಿ ಮತದಾನ ಮುಗಿದಿದೆ. ನವೆಂಬರ್ 23ಕ್ಕೆ ಫಲಿತಾಂಶ ಹೊರಬೀಳಲಿದೆ. ಮುಖಂಡರು ತಮ್ಮ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿ ಕ್ಷೇತ್ರ ಬಿಟ್ಟು ಹೋದ ನಂತರ ಸಾರ್ವಜನಿಕ ವಲಯದಲ್ಲಿ ಗೆಲ್ಲುವ ಕುದುರೆ ಯಾರೆಂಬ ಭಾರಿ ಬೆಟ್ಟಿಂಗ್‌ನಲ್ಲಿ ನಿರತರಾಗಿದ್ದಾರೆ. ಚನ್ನಪಟ್ಟಣ ಮತದಾರರು ಯಾವ ಮುಖಂಡರ ವರ್ಚಸ್ಸನ್ನು ಉಳಿಸುತ್ತಾರೆಂಬುದನ್ನು ತಿಳಿಯಲು ಫಲಿತಾಂಶಕ್ಕೆ ಕಾಯಬೇಕು.

ಕನ್ನಡ ಭಾವಗೀತೆಗಳ ಗಾಯನ ಮೋಡಿ



ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಏರ್ಪಡಿಸಿದ್ದ ಕನ್ನಡವೆಮ್ಮಯ ಪ್ರಾಣ ರಾಜ್ಯೋತ್ಸವ ಸಂಭ್ರಮದಲ್ಲಿ ಗಾಯಕಿಯರಿಂದ ಗಾಯನ ಮೋಡಿ.

ಮೈಸೂರು, ನ. 16– ಖ್ಯಾತ ಸುಗಮ ಸಂಗೀತ ಗಾಯಕಿ ಎಚ್.ಆರ್. ಲೀಲಾವತಿ ಅವರ ನೇತೃತ್ವದಲ್ಲಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವತಿಯಿಂದ ನಾದಬ್ರಹ್ಮ ಸಂಗೀತ ಸಭಾದ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನದಲ್ಲಿ ಕನ್ನಡವೆಮ್ಮಯ ಪ್ರಾಣ-ರಾಜ್ಯೋತ್ಸವದ ಸಂಭ್ರಮದಲ್ಲಿ ಕನ್ನಡ ಭಾವಗೀತೆಗಳ ಗಾಯನ ಸಂಗೀತಪ್ರಿಯರ ಮನತಣಿಸಿತು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಕನ್ನಡ ಕವಿಗಳ ಕವನಗಳನ್ನು ತಮ್ಮ ಗಾಯನದ ಮೂಲಕ ಕನ್ನಡಿಗರ ಮನೆ- ಮನಗಳಿಗೆ ತಲುಪಿಸಿದ ಕೀರ್ತಿ ಸುಗಮ ಸಂಗೀತ ಗಾಯಕ-ಗಾಯಕಿಯರಿಗೆ ಸಲ್ಲುತ್ತದೆ ಎಂದರು.

ಐವತ್ತರ ದಶಕದಲ್ಲಿಯೇ ಮೈಸೂರು ಆಕಾಶವಾಣಿ ಮೂಲಕ ಎಚ್.ಆರ್. ಲೀಲಾವತಿ ಅವರು ಸುಗಮ ಸಂಗೀತ ಆರಂಭಿಸಿ ಸುಮಾರು ಐವತ್ತು ವರ್ಷಗಳ ಕಾಲ ಹಾಡಿ, ಕರ್ನಾಟಕದ ಲತಾ ಮಂಗೇಶ್ಕರ್ ಎಂದೇ ಖ್ಯಾತರಾಗಿದ್ದರು. ಅವರು ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಮೂಲಕ ಸಹಸ್ರಾರು ಶಿಷ್ಯರನ್ನು ತಯಾರು ಮಾಡಿದ್ದು, ದೇಶ-ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಪ್ರಾಥಮಿಕ ಹಂತದಿಂದಲೇ ಸಂಗೀತ ಮತ್ತು ನೃತ್ಯ ಕಲಿಸಬೇಕು. ಅಕಾಡೆಮಿಗಳು ಕೂಡ ಸಂಗೀತ ಮತ್ತು ನೃತ್ಯಕ್ಕೆ ಸಮಾನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಮುಖ್ಯಅತಿಥಿ ಶ್ರೀನಿಧಿ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಕೆ.ಆರ್.ಪ್ರಭಾಕರರಾವ್ ಮಾತನಾಡಿ, ಕೆಲಸದ ಸ್ಥಳ ಇರಲಿ, ಮನೆ ಇರಲಿ ಪ್ರತಿಯೊಬ್ಬರಿಗೂ ಸಮಯ ಪ್ರಜ್ಞೆ ಮುಖ್ಯ. ಇಲ್ಲದಿದ್ದಲ್ಲಿ ಸಮಸ್ಯೆಗಳು ಎದುರಾಗುತ್ತವೆ ಎಂದರು.

ಎಚ್.ಆರ್.ಲೀಲಾವತಿ, ಡಾ.ಮಾಲಿನಿ ರಾವ್ ಉಪಸ್ಥಿತರಿದ್ದರು. ಶ್ರೀನಿವಾಸ ಪದಕಿ ಸ್ವಾಗತಿಸಿದರು. ಸುಕುಮಾರ್ ರಘುರಾಂ ನಿರೂಪಿಸಿದರು.

ಲೀಲಾ ರವಿಶಂಕರ್, ಕೆ.ಪಿ.ರೇವತಿ, ರೇಖಾ ಅರುಣ್, ಡಾ.ಸುಷ್ಮಾ ಕೃಷ್ಣಮೂರ್ತಿ, ಶ್ರೀನಿವಾಸ ಪದಕಿ, ದೀಪಶ್ರೀ ಪ್ರಣವ್, ಶೈಲಜಾ ಚಂದ್ರಶೇಖರ್, ಭುವನೇಶ್ವರಿ ವೆಂಕಟೇಶ್, ನಯನಾ ಗಣೇಶ್, ಡಾ.ಶ್ರೀದೇವಿ ಕುಳೇನೂರ್, ವಿಜಯಾಪ್ರಸಾದ್, ಮಮತಾ ರವೀಂದ್ರ, ಅಶ್ವಿನ್ ಪ್ರಭು, ವೀಣಾ, ದಿಶಾ ಗಿರಿಯನ್, ಅನುರಾಧಾ, ರಶ್ಮಿ ಬಾಲಗೋಪಾಲನ್, ಸ್ಮಿತಾ ಸೋಮೇಶ್ವರ, ಎಲ್.ಕೆ.ಸುಷ್ಮಾ, ಮೈಥಿಲಿ ಮಂಡ್ಯಂ ಅವರ ಗಾಯನ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಪಕ್ಕವಾದ್ಯದಲ್ಲಿ ವಿಶ್ವನಾಥ್, ಸಮೀರ್ ರಾವ್, ಆತ್ಮಾರಾಂ, ಷಣ್ಮುಖ ಸಜ್ಜ, ವಿನಯ್ ರಂಗದೋಳ್ ಸಾಥ್ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ವಂಚಕರ ಬಗ್ಗೆ ಎಚ್ಚರ: ಜೋಯಾಲುಕ್ಕಾಸ್

ಬೆಂಗಳೂರು: ಟೆಲಿ ಮಾರ್ಕೆಟಿಂಗ್ ಹೆಸರಿನಡಿ ಗ್ರಾಹಕರಿಗೆ ಕರೆ ಮಾಡಿ ರಿಯಾಯಿತಿ ದರದಲ್ಲಿ ಚಿನ್ನ ಖರೀದಿಸುವಂತೆ ಹಾಗೂ ಹಣ ಪಾವತಿ ಮಾಡುವಂತೆ ಕಂಪನಿಯಿಂದ ಗ್ರಾಹಕರಿಗೆ ದೂರವಾಣಿ ಕರೆ ಮಾಡುತ್ತಿಲ್ಲ ಎಂದು ಜೋಯಾಲುಕ್ಕಾಸ್ ಸ್ಪಷ್ಟನೆ ನೀಡಿದೆ.

ಜೋಯಾಲುಕ್ಕಾಸ್‌ನ ಸಿಬ್ಬಂದಿ ಎಂದು ಹೇಳಿಕೊಂಡು ವಂಚಕರು, ರಿಯಾಯಿತಿ ದರದಲ್ಲಿ ಚಿನ್ನ ನೀಡಲಾಗುತ್ತಿದೆ ಎಂದು ಕರೆ ಮಾಡುತ್ತಿದ್ದಾರೆ. ಈ ಬಗ್ಗೆ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು ಎಂದು ಕೋರಿದೆ. ಮಳಿಗೆಗಳು ಮತ್ತು ಅಧಿಕೃತ ಆನ್‌ಲೈನ್ ವೇದಿಕೆಯಲ್ಲಿ ಮಾತ್ರ ನಮ್ಮ ಉತ್ಪನ್ನಗಳ ಮಾರಾಟ ಮತ್ತು ವಹಿವಾಟು ನಡೆಸಲಾಗುತ್ತಿದೆ. ವಂಚನೆ ಕೃತ್ಯ ಎಸಗುವವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಲಿದ್ದೇವೆ. ಸಾರ್ವಜನಿಕರು ಇಂತಹ ದೂರವಾಣಿ ಕರೆ ಬಂದರೆ ಹತ್ತಿರದ ಜೋಯಾಲುಕ್ಕಾಸ್‌ನ ಮಳಿಗೆಗಳು ಅಥವಾ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕು ಎಂದು ಕೋರಿದೆ.

ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನ

ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್ ಲೋಕಾರ್ಪಣೆ



ಮೈಸೂರಿನ ಭಾರತ್ ಆಸ್ಪತ್ರೆ ಮತ್ತು ಆಂಕೊಲಾಜಿ ಸಂಸ್ಥೆಯಲ್ಲಿ ನೂತನವಾಗಿ ಆರಂಭಿಸಿರುವ ರೋಬೋಟಿಕ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನವನ್ನು ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಸ್. ಅಜಯ್ ಕುಮಾರ್ ಶನಿವಾರ ಲೋಕಾರ್ಪಣೆಗೊಳಿಸಿದರು.

ಮೈಸೂರು, ನ.16(ಜಿಎ)–ಮೈಸೂರಿನ ಭಾರತ್ ಆಸ್ಪತ್ರೆ ಮತ್ತು ಆಂಕೊಲಾಜಿ ಸಂಸ್ಥೆಯಲ್ಲಿ ನೂತನವಾಗಿ ಆರಂಭಿಸಿರುವ ರೋಬೋಟಿಕ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನವನ್ನು ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್ ಶನಿವಾರ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು ವಿಶ್ವ ದರ್ಜೆಯ ಗುಣಮಟ್ಟದ ಚಿಕಿತ್ಸೆಯನ್ನು ಮೈಸೂರಿನ ಜನತೆಗೆ ನೀಡಬೇಕು ಎಂಬುದು ಸಂಸ್ಥೆಯ ಉದ್ದೇಶವಾಗಿದ್ದು, ಇದೇ ಕಾರಣದಿಂದ ಜಿಲ್ಲೆಗೆ ರೋಬೋಟಿಕ್ ತಂತ್ರಜ್ಞಾನ ಪರಿಚಯಿಸುತ್ತಿದ್ದೇವೆ. ರೋಬೋಟ್‌ನ್ನು ಅಮೆರಿಕಾದಿಂದ ತರಿಸಲಾಗಿದ್ದು, ಅದಕ್ಕಾಗಿ ನಮ್ಮ ವೈದ್ಯರು ವಿಶೇಷ ತರಬೇತಿ ಪಡೆದಿದ್ದಾರೆ. ಈ ತಂತ್ರಜ್ಞಾನದಿಂದ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವ ಆಗುವುದು ಕಡಿಮೆಯಾಗುತ್ತದೆ. ರೋಗಿಗೆ ಹೆಚ್ಚು ನೋವು ನೀಡದೆ, ಶೀಘ್ರ ಗುಣಮುಖವಾಗಲು ಸಹಾಯಕವಾಗುತ್ತದೆ' ಎಂದು ತಿಳಿಸಿದರು.

ಈ ತಂತ್ರಜ್ಞಾನ ಅಳವಡಿಸಿರುವುದರಿಂದ ನಮ್ಮ ಆಸ್ಪತ್ರೆ ತಾಂತ್ರಿಕವಾಗಿ ಮತ್ತಷ್ಟು ಗಟ್ಟಿಯಾಗಿದೆ. ಇದರಿಂದ ರೋಗಿಗಳಿಗೆ ಉತ್ಕೃಷ್ಟ ಮಟ್ಟದ ಸೇವೆ ಒದಗಿಸಲು ಸಾಧ್ಯ. ರೋಬೋಟ್ 4 ಕೈಗಳನ್ನು ಹೊಂದಿವೆ. ಹೀಗಾಗಿ ಮಾನವನಿಗಿಂತ ಹೆಚ್ಚು ಕ್ಷಮತೆ ಹಾಗೂ ನಾಜೂಕಿನಿಂದ ಕೆಲಸ ನಿರ್ವಹಿಸುತ್ತದೆ. ನಾವು ಇನ್ನೊಂದು ಯಂತ್ರದ ಮೂಲಕ ನೀಡುವ ಸೂಚನೆಗಳನ್ನು ಅದು ಪಾಲಿಸಲಿದೆ ಎಂದು ಹೇಳಿದರು.

ಆರೋಗ್ಯದ ಮೇಲೆ ಸರ್ಕಾರದ ಹೂಡಿಕೆ ಅಗತ್ಯ. ಕೇಂದ್ರ ಆರೋಗ್ಯ ಸಚಿವಾಲಯವು ಜನರ ಆರೋಗ್ಯಕ್ಕೆ ಸಂಬಂಧಿಸಿದ ವಿಚಾರಕ್ಕೆ ಹೆಚ್ಚಿನ ಹೂಡಿಕೆ ಮಾಡಬೇಕಿದೆ. ರೋಬೋಟಿಕ್ ಯಂತ್ರವನ್ನು ಅಮೆರಿಕಾದಿಂದ ತರಲು ಶೇ.35 ತೆರಿಗೆಯನ್ನು ಕಸ್ಟಮ್ಸ್‌ಗೆ ಪಾವತಿಸಬೇಕಾಯಿತು. ಹಲವು ಬಾರಿ ಸರ್ಕಾರವನ್ನು ಮನವಿ ಮಾಡಿದರೂ ವಿನಾಯಿತಿ ದೊರೆಯಲಿಲ್ಲ. ಹೀಗಾದಾಗ ಜನರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ಎಐ ಸೇರಿದಂತೆ ನೂತನ ತಂತ್ರಜ್ಞಾನಗಳು ಕಾಲಿಟ್ಟಿದ್ದು, ಇದ್ದರಿಂದ ವೈದ್ಯ ತಾಂತ್ರಿಕ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೀವನ ಶೈಲಿ, ಧೂಮಪಾನ ಮುಂತಾದ ಕಾರಣದಿಂದ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚುತ್ತಿದೆ. ಸರ್ಕಾರದಿಂದ ವಿವಿಧ ಆರೋಗ್ಯ ಯೋಜನೆಗಳನ್ನು ರೂಪಿಸುವ ಬದಲು ಯುನಿವರ್ಸಲ್ ಹೆಲ್ತ್ ಕೇರ್‌ಗಾಗಿ ಹಣ ಮೀಸಲಿಟ್ಟರೆ ಆರೋಗ್ಯ ಕ್ಷೇತ್ರದಲ್ಲಿ ದೇಶ ಮುಂದೆ ಬರುತ್ತದೆ. ಭಾರತದಲ್ಲಿ 2.5 ಮಿಲಿಯನ್ ಮಂದಿ ಕ್ಯಾನ್ಸರ್ ಇದೆ. ಚೀನಾ ದೇಶವು ಕ್ಯಾನ್ಸರ್‌ನಲ್ಲಿ ಮೊದಲನೇ ಸ್ಥಾನದಲ್ಲಿದ್ದು, ಭಾರತವು ಈ ದಾಖಲೆಯನ್ನು ಹಿಂದಿಕ್ಕುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು. ಈ ವೇಳೆ ರೋಬೋಟಿಕ್ ಸರ್ಜನ್ ಡಾ.ರಕ್ಷಿತ್ ಶೃಂಗೇರಿ, ಸಂಸ್ಥೆಯ ನಿರ್ದೇಶಕಿ ಅಂಜಲಿ, ವೈದ್ಯಕೀಯ ಅಧೀಕ್ಷಕಿ ಡಾ.ವೈ.ಎಸ್ ಮಾಧವಿ, ಸಿಒಒ ಗೌತಮ್ ಧರ್ಮೇಲಾ ಉಪಸ್ಥಿತರಿದ್ದರು.

ಪ್ರತಾಪ್ ಸಿಂಹ ಬರಹಗಾರನ ಹಕ್ಕಿಗೆ ಚ್ಯುತಿ ತಂದಿದ್ದಾರೆ

ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್ ಆರೋಪ

ಮೈಸೂರು, ನ.16(ಬಿಎಲ್‌ಯು)–ಪ್ರವೀಣ್‌ಕುಮಾರ್ ಮಾವಿನಕಾಡು ಬರೆದಿರುವ 'ಕತ್ತಲೆ ಜಗತ್ತು' ಪುಸ್ತಕಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ತರುವುದರ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹ ಬರಹಗಾರನ ಹಕ್ಕಿಗೆ ಚ್ಯುತಿ ತಂದಿದ್ದಾರೆ ಎಂದು ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್ ಆರೋಪಿಸಿದರು.

ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಕತ್ತಲೆ ಜಗತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿತ್ತು ಆದರೆ ಪ್ರತಾಪ್ ಸಿಂಹ ಪುಸ್ತಕ ಬಿಡುಗಡೆ, ಮಾರಾಟಕ್ಕೆ ತಡೆಯಾಜ್ಞೆ ತಂದಿರುವ ಕಾರಣ ಕಾರ್ಯಕ್ರಮ ರದ್ದಾಯಿತು. ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಪ್ರೇಮ್‌ಕುಮಾರ್, ಪುಸ್ತಕ ಬಿಡುಗಡೆಗೆ ಪ್ರತಾಪ್ ಸಿಂಹ ತಡೆಯಾಜ್ಞೆ ತಂದಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು. ಮಾಜಿ ಸಂಸದ ಪ್ರತಾಪ್ ಸಿಂಹ ತಮ್ಮ ಅಂಕಣಗಳ ಮೂಲಕ ಎಲ್ಲರನ್ನು ಬೆತ್ತಲೆಗೊಳಿಸುವಾಗ ಯಾರೂ ತಡೆ ತಂದಿರಲಿಲ್ಲ, ಆದರೆ ಈಗ ತನ್ನ ನಿಜ ಬಣ್ಣ ಬಯಲಾಗುತ್ತದೆ ಎಂದು ಪ್ರವೀಣ್ ಕುಮಾರ್ ಮಾವಿನಕಾಡು ಬರೆದಿರುವ ಕತ್ತಲೆ ಜಗತ್ತು ಪುಸ್ತಕಕ್ಕೆ ತಡೆಯಾಜ್ಞೆ ತಂದಿದ್ದಾರೆ. ಹಲವು ಪ್ರಮಾದ ಎಸಗಿರುವ ಪ್ರತಾಪ್ ಸಿಂಹ ಬಿಜೆಪಿಯ ಯಾವುದೇ ಕಾರ್ಯಕ್ರಮದಲ್ಲಿ ಭಾಗಿಯಾಗಬಾರದು. ಜೊತೆಗೆ ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರನ್ನು ಆಗ್ರಹಿಸಿದರು.

ಎಂಎಲ್‌ಸಿ ಸ್ಥಾನದಿಂದ ಯತೀಂದ್ರ ಸಿದ್ದರಾಮಯ್ಯರನ್ನು ವಜಾಗೊಳಿಸಿ

ಬಿಜೆಪಿ ಕಾನೂನು ಪ್ರಕೋಷ್ಠದಿಂದ ಆಗ್ರಹ


ಮೈಸೂರು,ನ.16(ಜಿಎ)–ದೇಶದ ನ್ಯಾಯಾಂಗ ಮತ್ತು ತನಿಖಾ ಸಂಸ್ಥೆಗಳ ವಿಶ್ವಾಸಾರ್ಹತೆಗೆ ಧಕ್ಕೆ ತರುವ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಪರಿಷತ್ ಸದಸ್ಯತ್ವದಿಂದ ವಜಾಗೊಳಿಸಬೇಕು ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ನಗರ ಸಂಚಾಲಕ ಶಿವಕುಮಾರ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಯತೀಂದ್ರ ಅವರು ಹೆಚ್.ಡಿ.ಕೋಟೆ ಮತ್ತು ತಿ.ನರಸೀಪುರದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಐಟಿ, ಇಡಿ, ಸಿಬಿಐ ಸಂಸ್ಥೆಗಳು ಕೇಂದ್ರ ಸರ್ಕಾರದ ಕೈಗೊಂಬೆಯಾಗಿವೆ. ಸುಳ್ಳನ್ನು ಸಾಬೀತು ಮಾಡಲು ಮುಂದಾಗಿವೆ ಎಷ್ಟೋ ಸಂದರ್ಭದಲ್ಲಿ ಕೋರ್ಟ್‌ಗಳು ಕೂಡ ಅವರ ಮಾತಿನಂತೆಯೇ ಕೆಲಸ ಮಾಡುತ್ತವೆ ಎಂದು ಹೇಳಿದ್ದು, ಇದು ಸಂವಿಧಾನ ವಿರೋಧಿ ಹಾಗೂ ನ್ಯಾಯಾಂಗ ನಿಂದನೆ ಹೇಳಿಕೆ. ಕೂಡಲೇ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅವರ ಮಾತು ನಿಜವಾಗಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಆರಾಮಾಗಿ ಓಡಾಡಿಕೊಂಡಿರಲು ಸಾಧ್ಯವಾಗುತ್ತಿತ್ತೇ? ಉನ್ನತ ಇತಿಹಾಸ ಹೊಂದಿರುವ ವಿಧಾನಪರಿಷತ್ತಿನ ಸದಸ್ಯರಾಗಿ ಈ ರೀತಿ ಸುಳ್ಳು ಹೇಳಿಕೆ ನೀಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಕಾನೂನು ಪ್ರಕೋಷ್ಠದ ಗ್ರಾಮಾಂತರ ಘಟಕದ ಸಂಚಾಲಕ ಜಿ.ನಂಜುಂಡಸ್ವಾಮಿ, ಸಹ ಸಂಚಾಲಕಿ ಎಚ್.ಕೆ.ಭಾಗ್ಯ, ವಕೀಲರಾದ ಶರತ್, ಬಿ.ಎನ್.ಗಂಗಾಧರಪ್ಪ ಇದ್ದರು.

ನಿರ್ಗತಿಕ ವೃದ್ಧ ದಂಪತಿಗೆ ಆಹಾರ ಸಾಮಗ್ರಿ ವಿತರಣೆ



ಮೈಸೂರು ಜಿಲ್ಲಾ ದಸಂಸ ವತಿಯಿಂದ ಏಕಲವ್ಯನಗರದ ನಿರ್ಗತಿಕ ವೃದ್ಧ ದಂಪತಿಗೆ ಆಹಾರ ಸಾಮಗ್ರಿಗಳನ್ನು ಶನಿವಾರ ವಿತರಣೆ ಮಾಡಲಾಯಿತು. ಈ ವೇಳೆ ದಸಂಸ ಜಿಲ್ಲಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ, ಜಿಲ್ಲಾ ಸಂಘಟನಾ ಸಂಚಾಲಕರಾದ ಕೆ.ನಂಜಪ್ಪ ಬಸವನಗುಡಿ, ದಸಂಸ ಹೆಚ್.ಬಿ ದಿವಾಕರ್, ಏಕಲವ್ಯ ನಗರದ ಗೋವಿಂದಪ್ಪ, ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಧರ್, ಮಹಿಳೆಯರಾದ ಕೋಮಲ, ಭಾರತಿ, ಮಹದೇವಮ್ಮ ಇತರರು ಹಾಜರಿದ್ದರು.

ಸರ್ಕಾರ ಬೀಳಿಸುವ ಯತ್ನ ಆರೋಪ ಹುಚ್ಚುತನದ ಪರಮಾವಧಿ



ಶಿವಮೊಗ್ಗ, ನ.16– ಸರ್ಕಾರ ಬೀಳಿಸುವ ಯತ್ನ ನಡೆಯುತ್ತಿದೆ ಎಂಬ ಕಾಂಗ್ರೆಸ್‌ನ ಆರೋಪ ಹುಚ್ಚುತನದ ಪರಮಾವಧಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವ್ಯಂಗ್ಯವಾಡಿದ್ದಾರೆ.

ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಸರ್ಕಾರ ಬೀಳಿಸುವ ಕೆಲಸ ಯಾರೂ ಮಾಡುತ್ತಿಲ್ಲ. ಬಿಜೆಪಿ ಶಾಸಕರನ್ನೂ, ಯಾರೂ ಕರೆಯುತ್ತಿಲ್ಲ. ಕಾಂಗ್ರೆಸ್ ಶಾಸಕರನ್ನೂ ಯಾರು ಕರೆಯುತ್ತಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ. ಮೂರು ಕ್ಷೇತ್ರಗಳ ಉಪಚುನಾವಣೆ ಮುಗಿದಿದೆ. ಈ ಕ್ಷೇತ್ರಗಳ ವಾತಾವರಣ ಚೆನ್ನಾಗಿತ್ತು. ಜನರು ಒಳ್ಳೆಯ ಬೆಂಬಲ ಕೊಡುತ್ತಿದ್ದರು. ಈ ಮೂರು ಕ್ಷೇತ್ರಗಳಲ್ಲಿ ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳು ಗೆಲ್ಲಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ.

ವಕ್ಫ್ ಬೋರ್ಡ್ ಆಸ್ತಿ ಕಬಳಿಕೆ ವಿರುದ್ಧ ಬಿಜೆಪಿ ಕಮಿಟಿ ರಚನೆ ಮಾಡಿದ್ದೇವೆ. ಈ ಕಮಿಟಿ ರಾಜ್ಯದಲ್ಲಿ ಪ್ರವಾಸ ಮಾಡಿ ಬಳಿಕ ವರದಿ ಕೊಡಲಿದೆ. ವರದಿ ಪಡೆದ ನಂತರ ಮುಂದಿನ ಹೋರಾಟ ನಿರ್ಧಾರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಕೋವಿಡ್ ಕಾಲದಲ್ಲಿ ನಾವು ಜೀವ ಉಳಿಸುವ ಕೆಲಸ ಮಾಡಿದ್ದೇವೆ. ಇದನ್ನು ತನಿಖೆ ಮಾಡಲು ದುರುದ್ದೇಶದಿಂದ ಎಸ್‌ಐಟಿ ರಚನೆ ಮಾಡಲಾಗಿದೆ. ಜನರ ಗಮನ ಬೇರೆಡೆ ತಿರುಗಿಸಲು ಹಗರಣ ನಡೆದಿದೆ ಎಂಬ ಮಾತು ಹೇಳುತ್ತಿದ್ದಾರೆ. ನಾವು ಎಲ್ಲಾ ರೀತಿ ತನಿಖೆ ಎದುರಿಸಿ ಅದರಿಂದ ಹೊರಗೆ ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರ ಬಿಜೆಪಿ ವಿರುದ್ಧ ಕೇಸ್ ದಾಖಲಿಸಲು ರಾಜ್ಯ ಸರ್ಕಾರ ನಿರ್ಧಾರ



ಬೆಂಗಳೂರು,ನ.16–ಪಂಚ ಗ್ಯಾರಂಟಿಗಳ ಕುರಿತು ಸುಳ್ಳು ಜಾಹೀರಾತು ನೀಡಿದ್ದ ಆರೋಪದ ಮೇಲೆ ಮಹಾರಾಷ್ಟ್ರ ಬಿಜೆಪಿ ಘಟಕದ ವಿರುದ್ಧ ಕರ್ನಾಟಕ ಸರ್ಕಾರ ಪ್ರಕರಣ ದಾಖಲಿಸಲು ನಿರ್ಧರಿಸಿದೆ. ಈ ಕುರಿತು ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಚ್ಚರಿಕೆ ನೀಡಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಸಿಎಂ, ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಗ್ಯಾರಂಟಿಗಳನ್ನು ಜಾರಿ ಮಾಡದೆ ವಂಚಿಸಿದೆ ಎನ್ನುವ ಸುಳ್ಳು ಜಾಹೀರಾತನ್ನು ಪುಟಗಟ್ಟಲೆ ನೀಡಿದ್ದ ಮಹಾರಾಷ್ಟ್ರದ ಬಿಜೆಪಿ ವಿರುದ್ಧ ಕರ್ನಾಟಕ ಸರ್ಕಾರ ಕೇಸು ದಾಖಲಿಸಿ, ಸರಿಯಾದ ಪಾಠ ಕಲಿಸಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿ ಆಗದೆ ಕಾಂಗ್ರೆಸ್ ಸರ್ಕಾರ ಕರ್ನಾಟಕ ಜನತೆಗೆ ವಂಚಿಸಿದ್ದಾಗಿ ಮಹಾರಾಷ್ಟ್ರ ಬಿಜೆಪಿ ಘಟಕ ಸುಳ್ಳು ಜಾಹೀರಾತು ನೀಡಿದೆ. ಇವರಿಗೆ ನಾಚಿಕೆ ಇಲ್ಲ. ಪ್ರಧಾನಿ ಮೋದಿ ಮತ್ತು ಬಿಜೆಪಿ ಸುಳ್ಳಿನ ಸರದಾರರೇ ಕರ್ನಾಟಕಕ್ಕೆ ಬಂದು ನೋಡಿ. ನಿಮಗೆ ವಿಶೇಷ ವಿಮಾನದ ವ್ಯವಸ್ಥೆ ನಾನೇ ಮಾಡುತ್ತೇನೆ. ಕರ್ನಾಟಕದಲ್ಲಿ ಗ್ಯಾರಂಟಿಗಳು ಜಾರಿ ಆಗಿಲ್ಲ ಎಂದರೆ ನಾನು ರಾಜೀನಾಮೆ ಕೊಡುತ್ತೇನೆ. ನಮ್ಮ ನೆಲದಲ್ಲಿ ಗ್ಯಾರಂಟಿಗಳು ಜಾರಿ ಆಗಿರುವುದು ಸತ್ಯ. ಆದರೆ ನಿಮ್ಮ ಸುಳ್ಳು ಜಾಹಿರಾತನ್ನು ವಾಪಸ್ ಪಡೆದು ಮಹಾರಾಷ್ಟ್ರ ಜನತೆಯ ಕ್ಷಮೆ ಕೇಳಬೇಕು. ಈ ಸವಾಲು ಸ್ವೀಕರಿಸುತ್ತೀರಾ ಎಂದು ಪ್ರಶ್ನೆ ಮಾಡಿದ್ದಾರೆ. ವರ್ಷಕ್ಕೆ 56 ಸಾವಿರ ಕೋಟಿ ರೂ.ಯನ್ನು ಗ್ಯಾರಂಟಿಗಳ ಮೂಲಕ ನಮ್ಮ ರಾಜ್ಯದ ಕೋಟಿ ಕೋಟಿ ಜನರ ಖಾತೆಗೆ ನೇರವಾಗಿ ಹಣ ಹಾಕುತ್ತಿದ್ದೇವೆ. ಮಹಾರಾಷ್ಟ್ರದಲ್ಲೂ ಕಾಂಗ್ರೆಸ್ ಮತ್ತು ಮಹಾ ವಿಕಾಸ್ ಅಘಾಡಿ ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ. ಇಲ್ಲೂ ಮಹಾ ಆಘಾಡಿ ಅಧಿಕಾರಕ್ಕೆ ಬಂದು ಎಲ್ಲಾ ಭರವಸೆಗಳನ್ನು ಈಡೇರಿಸುವುದು ಶತಸಿದ್ಧ. ಏಕೆಂದರೆ ನುಡಿದಂತೆ ನಡೆದ ಚರಿತ್ರೆ ಕಾಂಗ್ರೆಸ್ ಪಕ್ಷಕ್ಕೆ ಇದೆ. ಆದ್ದರಿಂದ ಬಿಜೆಪಿ ಸೋಲಿಸಿ ಆರ್ಥಿಕ ಶಕ್ತಿ ಪಡೆಯಿರಿ ಎಂದು ಹೇಳಿದ್ದಾರೆ.

'ಲೋಚನದ ಸಿರಿ' ಕವನ ಸಂಕಲನ ಬಿಡುಗಡೆ



ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಲೋಚನದ ಸಿರಿ' ಕವನ ಸಂಕಲನ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ನ.16(ಜಿಎ)–ಜೀವನಕ್ಕೆ ಉತ್ತಮ ಸಂಗಾತಿಯೆಂದರೆ ಪುಸ್ತಕ ಮಾತ್ರ ಎಂದು ನಿವೃತ್ತ ಪ್ರಾಂಶುಪಾಲ ವಿ.ಜವರಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ, ಉಪನ್ಯಾಸಕ ಡಿ.ಪಿ.ಚಿಕ್ಕಣ್ಣ ಅವರು ದಾಪುಚಿ ಕಾವ್ಯನಾಮದಲ್ಲಿ ರಚಿಸಿದ 'ಲೋಚನದ ಸಿರಿ' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾವ್ಯ ಓದುವ ಮೂಲಕ ಮನುಷ್ಯ ಉತ್ತಮ ಗುಣವನ್ನು ಹೊಂದುತ್ತಾನೆ. ಕಾವ್ಯದ ಉದ್ದೇಶವೇ ಸಮಾಜದಲ್ಲಿ ಉದಾತ್ತ ಮೌಲ್ಯವನ್ನು ಜಾಗೃತಗೊಳಿಸುವುದು ಎಂದರು.

ಇಂದು ಜನರಲ್ಲಿ ಸಾಹಿತ್ಯ ಕೃತಿಗಳ ಓದುವ ಹವ್ಯಾಸ ಕ್ಷೀಣಿಸುತ್ತಿದೆ. ಪುಸ್ತಕಗಳ ಮಾರಾಟವು ಕುಸಿದಾಗಿದೆ. ಆದರೆ, ಜೀವನಕ್ಕೆ ಉತ್ತಮ ಸಂಗಾತಿಯೆಂದರೆ ಪುಸ್ತಕ ಮಾತ್ರ ಎಂಬುದನ್ನು ಮರೆಯಬಾರದು. ಈ ಕವನಸಂಕಲನವೂ ಮೌಲ್ಯಯುತ ಕವನಗಳನ್ನು ಒಳಗೊಂಡಿದೆ ಎಂದರು.


ಕೃತಿ ಬಿಡುಗಡೆಗೊಳಿಸಿದ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಕೃತಿಯಲ್ಲಿನ ಕವನಗಳು ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಆಶಯವನ್ನು, ಸಂವಿಧಾನದ ಮಹತ್ವವನ್ನು ಸಾರಿದೆ. ಆಸೆ, ಸಾಧನೆ ಮತ್ತು ಫಲಿತಾಂಶದ ನಡುವಿನ ಸಂಬಂಧವನ್ನು ಸಮರ್ಥವಾಗಿ ವ್ಯಕ್ತಪಡಿಸಿದೆ. ಶಿಕ್ಷಣ ಕ್ಕಿರುವ ಸಾಮರ್ಥ್ಯವನ್ನು ಹೇಳುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ಪ್ರಕಾಶಕ ಡಿ.ಎನ್.ಲೋಕಪ್ಪ, ಸೌಭಾಗ್ಯ ಅಸೋಸಿಯೇಟ್ಸ್ ವ್ಯವಸ್ಥಾಪಕ ನಿರ್ದೇಶಕಿ ಸೌಭಾಗ್ಯ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಸಾಲುಂಡಿ ಎಸ್.ದೊರೆಸ್ವಾಮಿ, ಜಿ.ಕೆ.ರೂಪಶ್ರೀ ಚಿಕ್ಕಣ್ಣ ಇನ್ನಿತರರು ಉಪಸ್ಥಿತರಿದ್ದರು.

ಕಟಾವು ಯಂತ್ರಗಳ ಬಾಡಿಗೆ ದರ ನಿಗದಿ

ಮೈಸೂರು,ನ.16(ಪಿಎಂ)– ಭತ್ತ ಮತ್ತು ರಾಗಿ ಬೆಳೆ ಕಟಾವು ಯಂತ್ರಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದರ ನಿಗದಿಪಡಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 91.735 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಆವರಿಸಿದ್ದು, ಸದ್ಯದಲ್ಲೇ ಕಟಾವು ಕಾರ್ಯ ಪ್ರಾರಂಭ ಆಗಬೇಕಿದೆ. ಜಿಲ್ಲೆಯಲ್ಲಿ ಭತ್ತ ಹಾಗೂ ರಾಗಿ ಕಟಾವಿಗೆ ರೈತರು ಕಂಬೈನ್ಡ್ ಹಾರ್ವೆಸ್ಟರ್ ಯಂತ್ರಗಳನ್ನು ಬಾಡಿಗೆಗೆ ಪಡೆದು ಒಕ್ಕಣೆ ಮಾಡುವುದು ವಾಡಿಕೆಯಾಗಿದೆ. ನ.15ರಂದು ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಿ, ಕಟಾವು ಮಾಡಲು ಪ್ರತಿ ಗಂಟೆಗೆ ಯಂತ್ರಗಳ ದರ ನಿಗದಿಗೊಳಿಸಲಾಗಿದೆ. ಚೈನ್ ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 2,500 ರೂ. ಬಾಡಿಗೆ ದರ ನಿಗದಿ ಮಾಡಲಾಗಿದೆ. ಅಂತೆಯೇ ಟೈರ್ (ಗ್ರೀಪ್) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 2 ಸಾವಿರ ರೂ., ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟಗೆ 1,800 ರೂ. ಹಾಗೂ ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 2,900 ರೂ. ದರ ನಿಗದಿ ಮಾಡಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಮಾರಸ್ವಾಮಿ 'ಕರಿಯ' ಹೇಳಿಕೆಗೆ ಡಿಕೆಶಿ ವಿರೋಧ



ಬೆಂಗಳೂರು,ನ.16–ಹೆಚ್.ಡಿ.ಕುಮಾರಸ್ವಾಮಿ ಅವರನ್ನು 'ಕರಿಯ' ಎಂದ ಸಚಿವ ಜಮೀರ್ ಅಹಮದ್ ಹೇಳಿಕೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ವಿರೋಧ ವ್ಯಕ್ತಪಡಿಸಿದ್ದಾರೆ. ಜಮೀರ್ ಹೇಳಿದ್ದು ಸರಿಯಲ್ಲ. ನಾನು ಅದನ್ನು ಖಂಡಿಸುತ್ತೇನೆ ಎಂದು ಹೇಳಿದ್ದಾರೆ.

ಸದಾಶಿವನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಆ ಹೇಳಿಕೆಯನ್ನು ಒಪ್ಪುವುದಿಲ್ಲ. ಅದನ್ನು ಖಂಡಿಸುತ್ತೇನೆ. ಜಮೀರ್ ಅವರು ಏನು ಬೇಕಾದರೂ ಕರೆದುಕೊಳ್ಳಲಿ. ಕರಿಯ ಅಂತಾದರೂ ಅನ್ನಲಿ, ಕೊಚ್ಚೆ ಅಂತಾದರೂ ಕರೆಯಲಿ. ನಾನು ಪಕ್ಷದ ಅಧ್ಯಕ್ಷನಾಗಿ ಆನ್ ರೆಕಾರ್ಡ್ ಹೇಳುತ್ತೇನೆ ಜಮೀರ್ ಹೇಳಿದ್ದು ಸರಿಯಲ್ಲ. ಕಪ್ಪು, ಬಿಳುಪು ಅಂತ ಕರೆಯುವುದು ಸರಿಯಲ್ಲ ಎಂದರು.

ಜಮೀರ್ ವಿರುದ್ಧ ಶಿಸ್ತು ಕ್ರಮ ವಿಚಾರವಾಗಿ ಮಾತನಾಡಿ, ಜಮೀರ್ ಅವರದ್ದು ಪರ್ಸನಲ್ ವಿಚಾರ. ಅವರು ಮಾತನಾಡಬಾರದಿತ್ತು ಕಪ್ಪು ಬಿಳುಪು ಅದೆಲ್ಲಾ ಬೇಡ. ಪಕ್ಷದ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ. ಪ್ರೀತಿಯಿಂದ ಮಾತಾಡಿದರೂ, ಸಲುಗೆಯಿಂದ ಮಾತನಾಡಿದರೂ ತಪ್ಪು ತಪ್ಪೇ. ಜಮೀರ್ ಅವರಿಗೆ ಆಂತರಿಕವಾಗಿ ಹೇಳಿದ್ದೇವೆ. ಅವರು ಕ್ಷಮೆ ಕೂಡ ಕೇಳಿದ್ದಾರೆ. ನಾವು ಆ ಹಂತಕ್ಕೆ ಹೋಗಬಾರದು ಅಷ್ಟೇ. ಅವರಿಬ್ಬರು ಏನು ಅಂತ ಗೊತ್ತಿಲ್ಲ. ಅದು ಜನ ತೀರ್ಮಾನ ಮಾಡಲಿ. ನಾನು ಹೇಳಿದ್ದು, ಜಮೀರ್ ಹೇಳಿದ್ದು ರಾಂಗ್. ನಾವು ಅವರನ್ನು ತಿದ್ದುತ್ತೇವೆ ಎಂದರು.

ವಕ್ಫ್ ವಿಚಾರವಾಗಿ ಬಿಜೆಪಿ ಪ್ರತಿಭಟನೆಗೆ ಸಿದ್ಧತೆ ಬಗ್ಗೆ ಪ್ರತಿಕ್ರಿಯಿಸಿ, ಅದು ಬಿಜೆಪಿಯವರ ಮೂರ್ಖತನ. ಅವರ ಕಾಲದ್ದೇ ಪಹಣಿಗಳು ಬರುತ್ತವೆ. ಅದನ್ನು ನಮ್ಮವರು ನೋಡಿಲ್ಲ. ಈಗ ಅದರ ಬಗ್ಗೆ ಮಾತನಾಡುತ್ತಿದ್ದಾರೆ. ನಾವು ಮಾತಾಡಿದರೆ ನೀವು ಕವರ್ ಮಾಡಲ್ಲ, ಅವರು ಮಾತನಾಡಿದರೆ ಕವರ್ ಮಾಡುತ್ತೀರಾ ಎಂದು ಮಾಧ್ಯಮದವರಿಗೆ ಟಾಂಗ್ ಕೊಟ್ಟರು. ಹಿಂದೆ ಅವರು ಖರೀದಿ ಮಾಡಿದ್ದು ಏನು? ಕುರಿಗಳನ್ನೇ ತಾನೇ. ಅಶ್ವಥನಾರಾಯಣ್, ಶ್ರೀನಿವಾಸಗೌಡ ಮನೆಗೆ ಹಣ ತೆಗೆದುಕೊಂಡು ಹೋಗಿರಲಿಲ್ವ ಸದನದಲ್ಲೇ ಇದರ ಬಗ್ಗೆ ಚರ್ಚೆ ಆಗಲಿಲ್ವೆ, ಮೊದಲು ಸಾವಿರ ಕೋಟಿ ಕಲೆಕ್ಟ್ ಮಾಡಿದ್ಯಾರು? ಎಂದರು.

ಮಧುಮೇಹ ಜಾಗೃತಿಗಾಗಿ ವಾಕಥಾನ್



ಮೈಸೂರಲ್ಲಿ ಶನಿವಾರ ಮಧುಮೇಹ ಜಾಗೃತಿಗಾಗಿ ಆಯೋಜಿಸಿದ್ದ ವಾಕಥಾನ್‌ಗೆ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಮಧುಮೇಹ ತಜ್ಞ ಸಂಸ್ಥೆಯ ನಿರ್ದೇಶಕ ಡಾ.ರೇಣುಕಾಪ್ರಸಾದ್, ನವಾಯು ಕೇರ್ ಸಂಟರ್ ನಿರ್ದೇಶಕಿ ಡಾ.ನವ್ಯ ಪ್ರಸಾದ್, ಓ.ಸಿದ್ದೇಗೌಡ, ಲಿಂಗರಾಜು, ಆರ್ಯನ್ ಗಂಧದಗುಡಿ, ದೀಪಕ್ ಬೆಟಗಿ, ನಾರಾಯಣಗೌಡ, ಮಂಜುನಾಥ್ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

ಒಡನಾಡಿ ವಾಸಿ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಸೈಕಲ್ ಜಾಥಾ

ಮೈಸೂರು, ನ.16(ಎಸ್‌ಬಿಡಿ)–ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶನಿವಾರ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಸೂರ್ಯೋದಯಕ್ಕೂ ಮುನ್ನ ಮಂಡಕಳ್ಳಿಯಿಂದ ನಗರದ ಹೊರವಲಯದಲ್ಲಿರುವ ಮೈದನಹಳ್ಳಿ ಗ್ರಾಮದ ಕೆರೆಯವರೆಗೆ ಸೈಕಲ್ ಜಾಥಾ ಮೂಲಕ ತೆರಳಿದ ವಿದ್ಯಾರ್ಥಿಗಳು, ಕೆರೆಯ ಪರಿಸರ, ಅಲ್ಲಿನ ಗಿಡ–ಮರಗಳು, ವಲಸಿಗ ಹಕ್ಕಿಗಳು, ಜಲಚರಗಳನ್ನು ವೀಕ್ಷಿಸಿದರು. ಸ್ಥಳೀಯರ ಸಹಕಾರದೊಂದಿಗೆ ಕೆರೆ ಆವರಣದಲ್ಲಿನ ತ್ಯಾಜ್ಯವಸ್ತುಗಳನ್ನು ತೆರವು ಮಾಡಿ, ಪ್ರಾಣಿ–ಪಕ್ಷಿಗಳಿಗೆ ಅನುಕೂಲವಾಗುವ ಗಿಡಗಳನ್ನು, ನೆಟ್ಟು, ನೀರೆರೆದರು. ಹೆಜ್ಜಾರ್ಲೆ, ಪೇಟೆಂಡ್ ಸ್ಟಾರ್ಕ್, ಬಾತುಕೋಳಿ ಸೇರಿದಂತೆ ಹತ್ತಾರು ಪ್ರಬೇಧದ ಪಕ್ಷಿಗಳ ರಕ್ಷಣೆ ಬಗ್ಗೆ ಸ್ಥಳೀಯರೊಂದಿಗೆ ಚರ್ಚಿಸಿದರು.

ಈ ವೇಳೆ ಒಡನಾಡಿ ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ಪರಿಸರ ಜಾಗೃತಿ ಕುರಿತು ಮಾತನಾಡಿ, ಪ್ರಕೃತಿ ಸಂರಕ್ಷಣೆ ನಮ್ಮ ಮೂಲಭೂತ ಜವಬ್ದಾರಿ. ಪರಿಸರದಲ್ಲಿ ಮನುಷ್ಯ ಜೀವಿ ಅತ್ಯಂತ ಸಣ್ಣ ಕಣವಷ್ಟೇ. ಪರಿಸರ ಉಳಿವಿಗಾಗಿ ಮನುಷ್ಯ ಏನೂ ಮಾಡದಿದ್ದರೂ ತನ್ನಷ್ಟಕ್ಕೆ ತಾನು ಸುಮ್ಮನಿದ್ದರೆ ಸಾಕು. ಕಾಲಕಾಲಕ್ಕೆ ಪ್ರಕೃತಿಯೇ ದಯಪಾಲಿಸುತ್ತದೆ ಎಂದು ಕಿವಿಮಾತು ಹೇಳಿದರಲ್ಲದೆ, ಪರಿಸರ ಗೀತೆಯನ್ನು ಮಕ್ಕಳಿಗೆ ಹೇಳಿಕೊಟ್ಟರು.

ಸಂಸ್ಥೆಯ ಮತ್ತೋರ್ವ ನಿರ್ದೇಶಕ ಪರಶುರಾಮ್ ಮಾತನಾಡಿ, ನಮಗೆ ಆಶ್ರಯ ನೀಡಿರುವ ಸುಂದರ ಪ್ರಕೃತಿಯನ್ನು ಕಾಪಾಡುವ ಸಾಮೂಹಿಕ ಜವಬ್ದಾರಿ ಎಲ್ಲರ ಮೇಲಿದೆ. ಪ್ರಕೃತಿಯ ಭಾಗವಾದ ಕೆರೆ–ಕಟ್ಟೆಗಳು ಅತಿಕ್ರಮಣವಾದರೆ ಪ್ರಾಣಿ–ಪಕ್ಷಿಗಳ ಜೊತೆಗೆ ಮನುಷ್ಯನ ಜೀವನ ಹರಣವಾಗುತ್ತದೆ ಎಂಬ ಎಚ್ಚರಿಕೆ ಎಲ್ಲರಲ್ಲೂ ಇರಬೇಕು ಎಂದು ಹೇಳಿದರು.

ಪಿಯುಸಿಎಲ್ ಜಿಲ್ಲಾ ಘಟಕದ ಅಧ್ಯಕ್ಷ ಕಮಲ್ ಗೋಪಿನಾಥ್ ಮಾತನಾಡಿ, ಪರಿಸರದಲ್ಲಿರುವ ಪ್ರಾಣಿ–ಪಕ್ಷಿಗಳನ್ನು ಉಳಿಸಿಕೊಳ್ಳುವುದು ನಮ್ಮ ನಿಜವಾದ ಕರ್ಮವಾಗಬೇಕು. ಇಲ್ಲಿ ಸುಮಾರು 100ಕ್ಕೂ ಹೆಚ್ಚು ಪ್ರಬೇಧದ ಪಕ್ಷಿಗಳು ಆಶ್ರಯಿಸಿರುವುದನ್ನು ನಾನು ಗಮನಿಸಿದ್ದೇನೆ. ಅವುಗಳಿಗೆ ನಮ್ಮಿಂದ ಯಾವುದೇ ತೊಂದರೆಯಾಗಬಾರದು ಎಂದು ಆಶಿಸಿದರು.

ಈ ವೇಳೆ ಪ್ರಜ್ಞಾ ಭಾರತಿ ಸಂಸ್ಥೆಯ ಎನ್.ಆರ್.ರಾಣಿ, ನಿಶಾ ಗೌತಮಿ, ಮ್ಯಾಥ್ಯು, ವಿ–ಕೇರ್ ಸಂಸ್ಥೆಯ ಧರ್ಮದರ್ಶಿ ಡಾ.ಸಾರಿಕ ಪ್ರಸಾದ್, ಶ್ರೀನಿವಾಸ್, ಶೈಲಜಾ, ಶ್ರೀಕಾಂತ್, ಅಮಿತ್, ಸುಮ, ಒಡನಾಡಿಯ ಸಹಭಾಗಿಗಳಾದ ಶೃತಿ, ಪವಿತ್ರ, ಪ್ರದೀಪ್, ಶಶಾಂಕ್, ಜ್ಯೋತಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಒಡನಾಡಿ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಪರಶುರಾಮ್ ಹಾಗೂ ಸ್ಟ್ಯಾನ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮೈಸೂರು ಮಿತ್ರ ಭಾನುವಾರ 17 ನವೆಂಬರ್ 2024

ಸಮ್ಮೇಳನಕ್ಕೆ ಆಗಮಿಸುವ ಮಹಿಳೆಯರಿಗೆ ಸೂಕ್ತ ಸೌಕರ್ಯ

ಮಂಡ್ಯ,ನ.16– ನಗರದಲ್ಲಿ ಡಿ.20,21, 22ರಂದು ಮೂರು ದಿನಗಳ ಕಾಲ ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಜ್ಯದ ನಾನಾ ಭಾಗಗಳಿಂದ ಸಮ್ಮೇಳನಕ್ಕೆ ನೊಂದಾಯಿಸಿಕೊಂಡು ಆಗಮಿಸುವ ಮಹಿಳೆಯರಿಗೆ ಸೂಕ್ತ ರೀತಿಯಲ್ಲಿ ವಸತಿ ಹಾಗೂ ಎಲ್ಲರಿಗೂ ಊಟದ ವ್ಯವಸ್ಥೆ ಕಲ್ಪಿಸಬೇಕು. ಎಲ್ಲಿಯೂ ಲೋಪವಾಗದಂತೆ ನಿಗಾವಹಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.



ಮಹಿಳಾ ಸಮಿತಿ ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್

ಶನಿವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸಮಿತಿ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಮಹಿಳೆಯರನ್ನು ಬಹಳ ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂದು ಸೂಚಿಸಿದ ಅವರು, ಮೂಲ ಸೌಕರ್ಯಕ್ಕೆ ಹೆಚ್ಚು ಒತ್ತು ನೀಡಬೇಕು. ಕುಡಿಯುವ ನೀರು, ಶೌಚಾಲಯ, ವಸತಿ ಸ್ಥಳಗಳಲ್ಲಿ ಸ್ವಚ್ಛತೆಗೆ ಆದ್ಯತೆ ಕೊಡಬೇಕು ಎಂದರು.

ಹೊರ ಜಿಲ್ಲೆಗಳಿಂದ ಕಾರ್ಯಕ್ರಮಕ್ಕೆ ಆಗಮಿಸುವವರ ವಾಹನಗಳಿಗೆ ಉಮ್ಮಡಹಳ್ಳಿ ಗೇಟ್ ಬಳಿ ಇರುವ ಸತ್ವ ಕಾವೇರಿ ಸಿರಿ ಫ್ಲಾಟ್ ಬಳಿ 10 ಎಕರೆ ಸ್ಥಳದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್ ಸ್ಥಳದಿಂದ ಜನರನ್ನು ಕರೆತರಲು ಪ್ರತಿ 5 ನಿಮಿಷಕ್ಕೊಮ್ಮೆ ಬಸ್ ವ್ಯವಸ್ಥೆ ಮಾಡಲಾಗಿದೆ. ಮಂಡ್ಯ ಜಿಲ್ಲೆಯ ಸ್ಥಳೀಯರಿಗೆ ಪ್ರತ್ಯೇಕವಾಗಿ 3 ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದು, ಅಲ್ಲಿಂದ ಸಮ್ಮೇಳನಕ್ಕೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದಲೂ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಪ್ರತಿಯೊಬ್ಬ ಮಹಿಳೆಯರಿಗೂ ಅನುಕೂಲವಾಗುವಂತೆ ಮಹಿಳಾ ಸಹಾಯವಾಣಿಯನ್ನು ಪ್ರಾರಂಭಿಸಲಾಗುವುದು. ಮಹಿಳಾ ಸಮಿತಿಯಲ್ಲಿ ಉಪ ಸಮಿತಿಗಳನ್ನು ರಚಿಸಿ ಬಹಳ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದುದಕ್ಕೆ ಅಭಿನಂದನೆ ಸಲ್ಲಿಸಿದರು. ಎಲ್ಲಾ ಸದಸ್ಯರುಗಳು ಕಡ್ಡಾಯವಾಗಿ ಪಾಸ್ ಪಡೆಯಬೇಕು. ಮಹಿಳಾ ಗೋಷ್ಠಿಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಸಮನ್ವಯ ಸಮಿತಿಯೊಂದಿಗೆ ಚರ್ಚಿಸಿ ಅಭಿಪ್ರಾಯ ಗಳನ್ನು ತಿಳಿಸಿ. ಗೋಷ್ಠಿಗೆ ಬರುವ ಸಂಪನ್ಮೂಲ ವ್ಯಕ್ತಿಗಳಿಗೆ ಊಟ, ವಸತಿ ವ್ಯವಸ್ಥೆ ಕಲ್ಪಿಸಬೇಕು ಎಂದರು.

ಆರೋಗ್ಯ ಸಮಿತಿಗೆ ಸಂಬಂಧಪಟ್ಟಂತೆ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗುವುದು. ಪ್ರತಿ ಆರೋಗ್ಯ ಕೇಂದ್ರಕ್ಕೂ ವೈದ್ಯರು ಹಾಗೂ ಸಿಬ್ಬಂದಿಗಳನ್ನು ಒಳಗೊಂಡಂತೆ ಆರೋಗ್ಯ ಪರಿಕರಗಳಿರುತ್ತವೆ. ಮಹಿಳೆಯರಿಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆಗಳಿದ್ದರೂ ಕೂಡ ಪರಿಹರಿಸಿಕೊಳ್ಳಬಹುದು. ಸಮಿತಿಯ ಸದಸ್ಯರುಗಳು ಮಹಿಳಾ ಸಮಿತಿಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಚರ್ಚಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

ಮಹಿಳಾ ಸಮಿತಿಯ ಅಧ್ಯಕ್ಷೆ ಸುನಂದಾ ಜಯರಾಮ್ ಅವರು ಮಾತನಾಡಿ, ಮಹಿಳಾ ಸಮಿತಿಯಲ್ಲಿರುವ ಸದಸ್ಯರುಗಳನ್ನು ಸ್ವಯಂ ಸೇವಕರ ಸಮಿತಿ, ನೋಂದಣಿ ಸಮಿತಿ, ಸಾರಿಗೆ ಸಮಿತಿ, ಆಹಾರ ಸಮಿತಿ, ಆರೋಗ್ಯ ಸಮಿತಿ, ಸಾಂಸ್ಕೃತಿಕ ಸಮಿತಿ, ಆಸನ ಸಮಿತಿ, ಸಮನ್ವಯ ಸಮಿತಿ, ವಸತಿ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಲು ನೇಮಿಸಲಾಗಿದೆ. ಮಹಿಳಾ ಸಮಿತಿಯಲ್ಲಿ ಉಪಸಮಿತಿಗಳನ್ನು ರಚಿಸಿದ್ದು, ಎಲ್ಲರೂ ಬಹಳ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು ಮುಂದೆಯೂ ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿಭಾಯಿಸಿ ಎಂದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾದ್ದರಿಂದ ಕನ್ನಡ ಭಾಷೆ, ಕನ್ನಡ ನಾಡು–ನುಡಿಗೆ ಹೆಚ್ಚು ಒತ್ತು ನೀಡುವ ಗೋಷ್ಠಿಗಳು ನಡೆಯುವುದರ ಜೊತೆ ಕೃಷಿ, ಹೆಣ್ಣು ಭ್ರೂಣ ಹತ್ಯೆ, ಮೌಢ್ಯತೆ ಹಾಗೂ ದುಡಿಯುವ ಮಹಿಳೆಯರ ಬಗ್ಗೆ ವಿಚಾರ ಗೋಷ್ಠಿಗಳು ನಡೆಯಬೇಕು ಎಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕಿ ಡಾ.ಮೀರಾಶಿವಲಿಂಗಯ್ಯ, ಮಹಿಳಾ ಸಮಿತಿಯ ಉಪಾಧ್ಯಕ್ಷೆ ಸೌಭಾಗ್ಯ ಮಹದೇವ್ರು, ಆಯುಷ್ ಇಲಾಖೆಯ ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಬಿ.ಎಸ್ ಸೀತಾಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ಆಕರ್ಷಿಸಲಿ ಸಮ್ಮೇಳನದ ಧ್ವಜಾರೋಹಣ

ಮಂಡ್ಯ,ನ.16–87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ 3 ದಿನ ನಡೆಯುವ ಧ್ವಜಾರೋಹಣ ಕಾರ್ಯಕ್ರಮ ಆಕರ್ಷಣೀಯವಾಗಿರಬೇಕು. ಇದಕ್ಕೆ ಸಂಬಂಧಿಸಿದ ಕಾರ್ಯವೈಖರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜವಾಬ್ದಾರಿ ಧ್ವಜ ಸಮಿತಿ ಮೇಲಿದೆ ಎಂದು ಉಪವಿಭಾಗಾಧಿಕಾರಿ ಶಿವಮೂರ್ತಿ ಹೇಳಿದರು.



ಧ್ವಜ ಸಮಿತಿ ಸಭೆಯಲ್ಲಿ ಮಾತನಾಡಿದ ಉಪ ವಿಭಾಗಾಧಿಕಾರಿ ಶಿವಮೂರ್ತಿ

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಧ್ವಜ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸಮ್ಮೇಳನದ ಉದ್ಘಾಟನೆ ಧ್ವಜರೋಹಣದಿಂದಲೇ ನಡೆಯುವುದರಿಂದ ಸಮಿತಿಯು ಕಾರ್ಯ ಕ್ರಿಯಾಶೀಲತೆಯಿಂದ ಕೂಡಿರಬೇಕು ಎಂದರು.

ಧ್ವಜ ಸ್ತಂಭಗಳನ್ನು ಸಮ್ಮೇಳನ ನಡೆಯುವ ಮುಖ್ಯದ್ವಾರದ ಬಾಗಿಲಿನ ಮುಂಭಾಗದಲ್ಲಿ ಸ್ಥಾಪಿಸಲಾಗುವುದು, ಒಟ್ಟು ಮೂರು ಧ್ವಜ ಸ್ತಂಭಗಳಿದ್ದು, ಮೊದಲ ಸ್ತಂಭ ರಾಷ್ಟ್ರಧ್ವಜದಾಗಿರುತ್ತದೆ. ಇದು ಎತ್ತರವಾಗಿರುತ್ತದೆ. ನಂತರ ಎರಡನೇ ಧ್ವಜ ಸ್ತಂಭ ನಾಡ ಧ್ವಜ ಹಾಗೂ ಮೂರನೇ ಧ್ವಜ ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜವಾಗಿದ್ದು. ಮೂರು ಧ್ವಜ ಸ್ತಂಭಗಳು ಕ್ರಮಬದ್ಧವಾಗಿ ನಿರ್ಮಾಣವಾಗಬೇಕು ಎಂದು ಹೇಳಿದರು.

ಧ್ವಜಾರೋಹಣದ ಮೊದಲ ದಿನ ರಾಷ್ಟ್ರ ಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮರುದಿನ ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜವನ್ನು ಪರಿಷತ್ತಿನ ಅಧ್ಯಕ್ಷರು ಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ. ನಾಡ ಧ್ವಜವನ್ನು ಜಿಲ್ಲೆಯ ಸಾಹಿತಿ ಹಾಗೂ ಪ್ರಗತಿಪರ ರೈತರು, ಸ್ವಾತಂತ್ರ್ಯದ ಹೋರಾಟಗಾರರು ಮತ್ತು ಮಾಜಿ ಸೈನಿಕರಿಂದ ನೆರವೇರಿಸುವ ಕುರಿತು ಸಮಾಲೋಚಿಸುವುದಾಗಿ ತಿಳಿಸಿದರು.

ಧ್ವಜ ಸಮಿತಿಯವರಿಗೆ ಪ್ರತ್ಯೇಕ ಐಡಿ ಕಾರ್ಡ್ ನೀಡುವುದರ ಜೊತೆಗೆ ಸಾಹಿತ್ಯ ಸಮ್ಮೇಳನದ ಲೋಗೋ ಇರುವ ಕ್ಯಾಪ್ ನೀಡಲಾಗುವುದು. ಸಮಿತಿ ಸದಸ್ಯರಿಗೆ ಸ್ಮರಣಿಕೆ ಹಾಗೂ ಪ್ರಮಾಣ ಪತ್ರ ನೀಡುವುದನ್ನು ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು ಎಂದರು.

ಸಭೆಯಲ್ಲಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎನ್. ಲಿಂಗರಾಜು, ನಿವೃತ್ತ ದೈಹಿಕ ಶಿಕ್ಷಕಿ ಜ್ಞಾನಪೂರ್ಣ, ಶ್ರೀರಂಗಪಟ್ಟಣ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎ. ಸೋಮಶೇಖರ ಸೇರಿದಂತೆ ನಾನಾ ಗಣ್ಯರು ಉಪಸ್ಥಿತರಿದ್ದರು.

ನ.22 ರಂದು ಭೂಮಿ ಪೂಜೆ

ಮಂಡ್ಯ, ನ.16– ಜಿಲ್ಲೆಯಲ್ಲಿ ಡಿ.20, 21, 22ರಂದು ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಚರಿಸುವ ಸಂಬಂಧ ಕಾರ್ಯಚಟುವಟಿಕೆಗಳನ್ನು ಆರಂಭಿಸಲಾಗುತ್ತಿದೆ. ಈಗಾಗಲೇ ಸಮ್ಮೇಳನ ಸಂಬಂಧ 28 ಸಮಿತಿಗಳನ್ನು ರಚಿಸಲಾಗಿದೆ. ಅಲ್ಲದೆ, ಸಮ್ಮೇಳನ ನಡೆಸಲು ರಾಷ್ಟ್ರೀಯ ಹೆದ್ದಾರಿ–275 ಹೊಂದಿಕೊಂಡಂತೆ ಇರುವ ಸಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್‌ನ ಹಿಂಭಾಗದ ಜಾಗವನ್ನು ತಜ್ಞರ ವರದಿಯನ್ವಯ ಸೂಕ್ತವೆಂದು ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ಸಮ್ಮೇಳನಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ನ.22 ರಂದು ಬೆಳಿಗ್ಗೆ 8.30 ಗಂಟೆಗೆ ಜಾಗದಲ್ಲಿ ಭೂಮಿ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ಜಿಲ್ಲಾಧಿಕಾರಿ ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಸಂಚಾಲಕರು ಮತ್ತು ಕೋಶಾಧ್ಯಕ್ಷರಾದ ಡಾ.ಕುಮಾರ ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಕುಮಾರ್ ನೇಮಕ



ಕೆ.ಆರ್.ಪೇಟೆ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕೆ.ಆರ್.ಪೇಟೆ ತಾಲೂಕು ಅಧ್ಯಕ್ಷರಾಗಿ ಅಗ್ರಹಾರಬಾಚಹಳ್ಳಿ ಎ.ಬಿ. ಕುಮಾರ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ.

ಉಳಿದಂತೆ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ವಳಗೆರೆ ಮೆಣಸ ಕುಮಾರ್, ಚಟ್ಟೇನಹಳ್ಳಿ ಉದೇಶ್, ಸಿಂಗನಹಳ್ಳಿ ಗೋಪಾಲ್, ಬಂಡಿಹೊಳೆ ಯೋಗೇಶ್, ಗೋವಿಂದನಹಳ್ಳಿ ಕೊಪ್ಪಲು ಶ್ಯಾಮಣ್ಣ ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಅಗ್ರಹಾರ ಕೆಎಸ್‌ಆರ್‌ಟಿಸಿ ಶಿವಣ್ಣ, ಗೊರವಿ ಕುಮಾರ್, ಟೌನ್ ಕನಕದಾಸನಗರ ಶಿವಮ್ಮ, ಸಿಂಧುಘಟ್ಟ ಅಫೀಜ್ ಉಲ್ಲಾ, ಬೊಮ್ಮೇನಹಳ್ಳಿ ಲತಾ, ಬೂಕನಕೆರೆ ರೂಪಾ, ಯಗಚಗುಪ್ಪೆ ಶಿವಲಿಂಗಪ್ಪ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ ಅವರನ್ನು ನೇಮಕ ಮಾಡಿ ಮಂಡ್ಯ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಸಮಿತಿಯ ನೂತನ ಅಧ್ಯಕ್ಷ ಮತ್ತು ಸದಸ್ಯರನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಸಂಸ್ಥೆಯ ಅಧ್ಯಕ್ಷ ಬಿ.ಎಲ್.ದೇವರಾಜು ಅಭಿನಂದಿಸಿದ್ದಾರೆ.

ಪೌರ ಕಾರ್ಮಿಕರ ದಿನಾಚರಣೆ ಹಬ್ಬದಂತೆ ಆಚರಿಸಬೇಕು

ಪಾಂಡವಪುರ: ನಮ್ಮ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಇಡೀ ಪಟ್ಟಣವನ್ನು ಸ್ವಚ್ಛಗೊಳಿಸಿ ಉತ್ತಮ ವಾತಾವರಣ ಕಲ್ಪಿಸಿಕೊಡುವ ಪೌರಕಾರ್ಮಿಕರ ಕೊಡುಗೆ ಸಮಾಜಕ್ಕೆ ಅಪಾರವಾಗಿದೆ, ಹಾಗಾಗಿ ಪೌರಕಾರ್ಮಿಕರ ದಿನಾಚರಣೆಯನ್ನು ಹಬ್ಬದಂತೆ ಆಚರಣೆ ಮಾಡುವ ಮೂಲಕ ಗೌರವ ಸಲ್ಲಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಸತೀಶ್‌ಕುಮಾರ್ ಹೇಳಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಅಧ್ಯಕ್ಷೆ ಜ್ಯೋತಿ ಲಕ್ಷ್ಮೀ ಬಾಬು ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಧ್ಯಕ್ಷೆ ಜ್ಯೋತಿಲಕ್ಷ್ಮಿ ಮಾತನಾಡಿ, ಪೌರಕಾರ್ಮಿಕರು ನಿರಂತರವಾಗಿ ಸ್ವಚ್ಛಗೊಳಿಸುವ ಕಾಯಕ ಮಾಡುತ್ತಿರುವುದರಿಂದಲೇ ಪಟ್ಟಣದ ಸ್ವಚ್ಛತವಾಗಿರಲು ಕಾರಣವಾಗಿದೆ. ಪೌರಕಾರ್ಮಿಕರ ಸ್ವಚ್ಛತೆ ಮಾಡುವ ಸಂದರ್ಭದಲ್ಲಿ ಆರೋಗ್ಯ ರಕ್ಷ ಕವಚಗಳು, ಹ್ಯಾಂಡ್ ಗ್ಲೌಸ್ ಹಾಕಿಕೊಂಡು ಸ್ವಚ್ಛಗೊಳಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಪುರಸಭೆ ಸದಸ್ಯ ಪಾರ್ಥಸಾರಥಿ ಮಾತನಾಡಿ, ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಪಟ್ಟಣದ ಸ್ವಚ್ಛತೆ ಕಾಯ್ದುಕೊಳ್ಳುವ ಪೌರಕಾರ್ಮಿಕರು ಮೊದಲ ಆದ್ಯತೆಯಾಗಿ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಸಾಧ್ಯವಾದಷ್ಟು ರಕ್ಷಣಾ ಕವಚಗಳನ್ನು ಬಳಸಿಕೊಂಡು ಸ್ವಚ್ಛತೆ ಮಾಡಬೇಕು. ಇಂತಹ ವಿಚಾರದಲ್ಲಿ ಉದಾಸೀನತೆ ತೋರಬಾರದು, ಸಾರ್ವಜನಿಕರು ಕೂಡ ಪೌರಕಾರ್ಮಿಕರ ಜತೆ ಬೆರೆಯಬೇಕು. ಪೌರಕಾರ್ಮಿಕರು ತಮ್ಮ ಮಕ್ಕಳನ್ನು ಹೆಚ್ಚು ವಿದ್ಯಾವಂತರನ್ನಾಗಿ ಮಾಡು ಉನ್ನತ ಹುದ್ದೆ ಪಡೆ ಯುವ ಕಡೆ ಗಮನಹರಿಸಬೇಕು ಎಂದರು.

ಸದಸ್ಯ ಚಂದ್ರು ಮಾತನಾಡಿದರು. ಇದೇ ವೇಳೆ ಪೌರ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಕ್ರೀಡಾ ಕೂಟದಲ್ಲಿ ವಿಜೇತರಾದ ಪೌರ ಕಾರ್ಮಿಕರಿಗೆ ಬಹುಮಾನ ವಿತರಿಸಲಾಯಿತು. ಪೌರ ಕಾರ್ಮಿಕರು, ಪುರಸಭೆ ಡಿ ಗ್ರೂಪ್ ನೌಕರರು, ನೀರುಗಂಟಿಗಳು ಹಾಗೂ ಪುರಸಭೆ ನೌಕರ ವರ್ಗವನ್ನು ಅಭಿನಂದಿಸಲಾಯಿತು. ಎಲ್ಲರಿಗೂ ಹೋಳಿಗೆ ಊಟ ಬಡಿಸಲಾಯಿತು. ಎಲ್.ಅಶೋಕ್, ಆರ್.ಸೋಮಶೇಖರ್, ಉಮಾಶಂಕರ್, ಯಶವಂತಕುಮಾರ್, ಇತರರು ಇದ್ದರು.



ಪಾಂಡವಪುರದಲ್ಲಿ ಶನಿವಾರ ಪೌರಕಾರ್ಮಿಕರ ದಿನವನ್ನು ಆಚರಿಸಲಾಯಿತು.

ಮಂಡ್ಯ ಬಳಿ ನಿಂತಿದ್ದ ಲಾರಿಗೆ ಮತ್ತೊಂದು ಲಾರಿ ಡಿಕ್ಕಿ: ಚಾಲಕ, ಕ್ಲೀನರ್ ಸಾವು



ಮಂಡ್ಯ: ಶುಕ್ರವಾರ ರಾತ್ರಿ ಚಿಕ್ಕಮಂಡ್ಯ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಮತ್ತೊಂದು ಲಾರಿ ಡಿಕ್ಕಿ ಹೊಡೆದ ಪರಿಣಾಮ ಲಾರಿ ಚಾಲಕ ಹಾಗೂ ಕ್ಲೀನರ್ ಸಾವನ್ನಪ್ಪಿರುವ ದಾರುಣ ಘಟನೆ ಸಂಭವಿಸಿದೆ.

ಮೃತರನ್ನು ಪಶ್ಚಿಮ ಬಂಗಾಳ ಮೂಲದ ಚಾಲಕ ಸೈಯದ್ ಮಂಡಲ್ ಮತ್ತು ಕ್ಲೀನರ್ ಸಿರಾಜುಲ್ಲಾ ಮಲ್ಲಿಕ್ ಎಂದು ಗುರುತಿಸಲಾಗಿದೆ. ಡಿಕ್ಕಿಯ ರಭಸಕ್ಕೆ ಲಾರಿಯ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ವಿಷಯ ತಿಳಿದು ಪಡೆದ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಲಾರಿಯಿಂದ ಸೈಯದ್ ಮಂಡಲ್ ಮತ್ತು ಸಿರಾಜುಲ್ಲಾ ಇಬ್ಬರನ್ನೂ ಹೊರತೆಗೆದು ಆಸ್ಪತ್ರೆಗೆ ಸಾಗಿಸಿದರು. ಸಿರಾಜುಲ್ಲಾ ಸ್ಥಳದಲ್ಲೇ ಮೃತಪಟ್ಟರೆ, ಸೈಯದ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಮೂರನೇ ಪುಟದಿಂದ

ರಾಜ್ಯ ಪೊಲೀಸರ ವಶಕ್ಕೆ 100 ಡ್ರೋನ್

ಕಣ್ಗಾವಲು, ಚಲನವಲನಗಳು, ನಿಷೇಧಿತ ಬೆಳೆಗಳ ಮೇಲೆ ಕಣ್ಗಾವಲು ಮುಂತಾದ ವಿವಿಧ ಕಾರ್ಯಗಳಲ್ಲಿ ಪೊಲೀಸರು ಬಳಸಿಕೊಳ್ಳಬಹುದಾದ ಡ್ರೋನ್‌ಗಳ ವಿಶಿಷ್ಟತೆಗಳನ್ನು ಪರಿಶೀಲಿಸಲು ಡ್ರೋನ್ ಸಹಾಯ ಮಾಡಲಿದೆ. ಬಿಕ್ಕಟ್ಟು ನಿರ್ವಹಣೆ, ಕಾನೂನು ಮತ್ತು ಸುವ್ಯವಸ್ಥೆ, ಜನಸಂದಣಿ ನಿಯಂತ್ರಣ, ವಿಐಪಿ ಚಲನೆ, ವಿಷ–ವಿರೋಧಿ ಸೇರಿದಂತೆ ಔಷಧಿಗಳ ಸಮಯೋಚಿತ ವಿತರಣೆ, ಅಪಘಾತದ ಸ್ಥಳಗಳಿಗೆ ತ್ವರಿತ ಪ್ರವೇಶ ಮತ್ತು ಕಷ್ಟಕರವಾದ ಭೂಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿಗಳು ಇತ್ಯಾದಿಗಳಲ್ಲಿ ಡ್ರೋಣ್ ಬಳಕೆ ಮಾಡಲಾಗುವುದು. ಕಾನೂನು ಜಾರಿ ಕಾರ್ಯಾಚರಣೆಗಳಲ್ಲಿ ಡ್ರೋನ್‌ಗಳ ಬಳಕೆ ಹೊಸದೇನಲ್ಲ, ಆದರೆ ದಕ್ಷ ಪೋಲೀಸಿಂಗ್ ಮತ್ತು ಸೇವಾ ವಿತರಣೆಗಾಗಿ ರಾಜ್ಯ ಪೊಲೀಸರು ಮಾನವರಹಿತ ವೈಮಾನಿಕ ವಾಹನಗಳನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸುತ್ತಿರುವುದು ಇದೇ ಮೊದಲು ಎಂದು ಹೇಳಿದ್ದಾರೆ.

ನಾಗರಿಕ ವಿಮಾನಯಾನ ನಿರ್ದೇಶನಾಲಯ ಕರ್ನಾಟಕ ಪೊಲೀಸ್‌ನ ವಿಶೇಷ ವಿಭಾಗವಾದ ಆಂತರಿಕ ಭದ್ರತಾ ವಿಭಾಗದ ಭಯೋತ್ಪಾದನೆ ನಿಗ್ರಹ ಕೇಂದ್ರಕ್ಕೆ ಡ್ರೋನ್‌ಗಳನ್ನು ಬಳಸಲು ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲು ಅಧಿಕಾರ ನೀಡಿದೆ. ಡ್ರೋನ್‌ಗಳು ಫೋರ್ಸ್ ಮಲ್ಟಿಪ್ಲೈಯರ್‌ಗಳಾಗಿವೆ ಮತ್ತು ಪ್ರಪಂಚದಾದ್ಯಂತ ಕಾನೂನು ಕಾರ್ಯಾಚರಣೆಗಳಿಗೆ ಸಹಾಯ ಮಾಡುತ್ತವೆ.

ಒಂದೇ ಒಂದು ಎಪಿಎಲ್ ಕಾರ್ಡ್ ರದ್ದಾಗಿಲ್ಲ

ಹಾಗಾಗಿ ಸದ್ಯಕ್ಕೆ ಎಪಿಎಲ್‌ಗೆ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ್ದೇವೆ. ಪರಿಷ್ಕರಣೆ ಪೂರ್ತಿ ಆದ ಮೇಲೆ ಎಪಿಎಲ್‌ನವರು ಬೇಕೆಂದು ಮುಂದೆ ಬಂದರೆ ಖಂಡಿತಾ ಕೊಡುತ್ತೇವೆ ಎಂದು ತಿಳಿಸಿದ್ದಾರೆ. ಒಂದೇ ಒಂದು ಎಪಿಎಲ್ ಕಾರ್ಡ್ ರದ್ದು ಆಗಿಲ್ಲ. ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ಕರ್ನಾಟಕದಲ್ಲಿ ಕಾರ್ಡ್ ಇದೆ. 6.50 ಕೋಟಿ ಜನ ಇದ್ದರೂ 4.50 ಕೋಟಿ ಜನರಿಗೆ ಕಾರ್ಡ್ ಕೊಟ್ಟಿದ್ದೇವೆ. ಅರ್ಹರಲ್ಲದವರು ಜಾಸ್ತಿ ಜನ ಇದ್ದಾರೆ ಎಂಬ ಭಾವನೆ ಬಂದಿದೆ.

ಸುನೀಲ್ ಕುಮಾರ್ ನನ್ನ ಬಳಿ ಕೇಳಿದ್ರೆ ಹೇಳುತ್ತೇನೆ: ಪರಿಷ್ಕರಣೆಗೆ ನಿಯಮಾವಳಿ ಹಾಕಿಕೊಂಡಿದ್ದೇವೆ. ಈ ಹಿಂದಿನ ಸರ್ಕಾರವೇ ಈ ನಿಯಮ ಮಾಡಿದೆ. ಆದಾಯ ತೆರಿಗೆ ಕಟ್ಟುವವರಿಗೆ, ಕಾರು ಇರುವವರಿಗೆಲ್ಲಾ ಅವರನ್ನು ಎಪಿಎಲ್‌ಗೆ ಹಾಕುತ್ತೇವೆ. ಅವರನ್ನು ತೆಗೆದು ಹಾಕಲ್ಲ. ಪರಿಷ್ಕರಣೆ ಮಾಡುವಾಗ ಅರ್ಹರಿಗೆ ಬಿಪಿಎಲ್ ಕೊಡುತ್ತೇವೆ. ನಮ್ಮ ಬಳಿ ಇದಕ್ಕಾಗಿ 8000 ಸಾವಿರ ಕೋಟಿ ಹಣ ರೂ. ಇದೆ. ತಿಂಗಳಿಗೆ 650 ಕೋಟಿಯೇ ಖರ್ಚು ಆಗಲ್ಲ. ಕೊಡೋದಕ್ಕೆ ಯಾವುದೇ ತೊಂದರೆ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಹಸ್ತಾಂತರ ಪ್ರಕ್ರಿಯೆ ಆರಂಭ

ಇದರಿಂದ ಖಾತೆ, ಕಂದಾಯ ಪಾವತಿ ಹಾಗೂ ಮೂಲಭೂತ ಸೌಕರ್ಯವಿಲ್ಲದೆ ಅತಂತ್ರ ಸ್ಥಿತಿಗೆ ಒಳಗಾಗಿದ್ದ ಮೈಸೂರಿನ ಬಹಳಷ್ಟು ಬಡಾವಣೆ ನಾಗರಿಕರು ನಿಟ್ಟುಸಿರು ಬಿಡುವಂತಾಗಿದೆ. ಈ ಮೂಲಕ ಹತ್ತಾರು ವರ್ಷಗಳ ಬೇಡಿಕೆ ಈಡೇರುತ್ತಿದೆ. ಕಳೆದ 15 ದಿನಗಳ ಹಿಂದೆ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಈ ಮೂಲಕ ನಗರ ಪಾಲಿಕೆ, ನಗರ ಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಎಲ್ಲಾ ಬಡಾವಣೆಗಳು ಒಳಪಡಲಿದ್ದು, ಖಾತೆ, ತೆರಿಗೆ ಸೇರಿದಂತೆ ಎಲ್ಲಾ ದಾಖಲಾತಿಗಳನ್ನು ಅಲ್ಲೇ ಪಡೆಯಬೇಕಾಗಿದೆ.

ತೆರಿಗೆಯಿಂದ ಬಂದ ಆದಾಯದಲ್ಲಿ ಆಯಾ ಸ್ಥಳಿಯ ಸಂಸ್ಥೆಗಳು ಬಡಾವಣೆಗಳಿಗೆ ಸಮರ್ಪಕ ಕುಡಿಯುವ ನೀರು, ರಸ್ತೆ ಬೀದಿ ದೀಪ, ಒಳ ಚರಂಡಿ ಸೇರಿದಂತೆ ಇತರೆ ಮೂಲ ಸೌಕರ್ಯ ಕಲ್ಪಿಸಲಿದೆ.

ಅಧಿಕಾರಿಗಳಿಂದ ಸ್ಥಳ ಪರಿಶೀಲನೆ; ವಿವರ ಸಂಗ್ರಹ

“ ಸದ್ಯಕ್ಕೆ ಮೈಸೂರು ನಗರದಲ್ಲಿರುವ 3 ಮುಡಾ ಹಾಗೂ 5 ಖಾಸಗಿ ಬಡಾವಣೆಗಳನ್ನು ನಗರ ಪಾಲಿಕೆಗೆ ಹಸ್ತಾಂತರ ಮಾಡಿಕೊಳ್ಳುತ್ತಿದ್ದೇವೆ. ಈ ಬಡಾವಣೆಗಳಿಗೆ ನಮ್ಮ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಸಮಗ್ರ ವಿವರ ಕಲೆ ಹಾಕಲಿದ್ದಾರೆ. ರಸ್ತೆ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಿರುವ ಬಡಾವಣೆಗಳನ್ನು ಹಸ್ತಾಂತರ ಮಾಡಿಕೊಳ್ಳಲು ಮೊದಲ ಆದ್ಯತೆ ನೀಡುತ್ತೇವೆ. ತರುವಾಯ ಹಂತ ಹಂತವಾಗಿ ಉಳಿದ ಬಡಾವಣೆಗಳನ್ನು ಹಸ್ತಾಂತರ ಮಾಡಿಕೊಳ್ಳುತ್ತೇವೆ. ಸದ್ಯಕ್ಕೆ ಬಡಾವಣೆಗಳು ಹೇಗೆ ಇದೆಯೋ ಹಾಗೆ ಹಸ್ತಾಂತರ ಮಾಡಿಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ಈ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಬಗ್ಗೆ ತೀರ್ಮಾನಿಸಲಾಗುವುದು.

– ಅಶಾದ್ ಉರ್ ರೆಹಮಾನ್ ಷರೀಫ್,
ಆಯುಕ್ತರು, ಮೈಸೂರು ನಗರ ಪಾಲಿಕೆ

ಚುನಾವಣಾ ಪ್ರಚಾರ ಅಸ್ತ್ರ!

ಇಂಡಿಯಾ ಒಕ್ಕೂಟದ ಸರ್ಕಾರಗಳನ್ನು ಆಪರೇಷನ್ ಕಮಲದ ಮೂಲಕ ಉರುಳಿಸುವುದೇ ಎನ್‌ಡಿಎ ಕೆಲಸ ಎಂದು ದೂರುತ್ತಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾ 'ನಾ.., ಖಾವೋಂಗಾ, ನಾ.., ಖಾನೆ ದೂಂಗ' ಎನ್ನುತ್ತಾರೆ, ಆಪರೇಷನ್ ಕಮಲ ಮಾಡಲು ಹಣ ಎಲ್ಲಿಂದ ಬಂತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಹಿಂಬಾಲಿನಿಂದ ಅಧಿಕಾರಕ್ಕೆ: ಕರ್ನಾಟಕದಲ್ಲಿ 2008ರಲ್ಲಿ ಎಂಟು ಶಾಸಕರನ್ನು ಕೋಟ್ಯಾಂತರ ರೂ. ಖರ್ಚು ಮಾಡಿ ಖರೀದಿ ಮಾಡಿದರು, 2019ರಲ್ಲಿ 17 ಜನ ಶಾಸಕರನ್ನು ಖರೀದಿಸಿದರು. ಈ ಕೋಟ್ಯಂತರ ರೂ. ಬಿಜೆಪಿಗೆ ಎಲ್ಲಿಂದ ಬಂತು. 2008ರಲ್ಲಿ ಬಿ.ಎಸ್.ಯಡಿಯೂರಪ್ಪ ಆಪರೇಷನ್ ಕಮಲ ಮಾಡಿ ಮುಖ್ಯಮಂತ್ರಿಯಾದರು. ಅವರು 2019ರಲ್ಲಿ ಪುನಃ ಮುಖ್ಯಮಂತ್ರಿಯಾದರು. 2018ರಲ್ಲಿ ಸರ್ಕಾರ ರಚನೆಗೆ ಬೇಕಿದ್ದ ಸರಳ ಬಹುಮತ 113 ಸ್ಥಾನಗಳು ದೊರೆಯದೇ, ಎರಡೂ ಬಾರಿಯೂ ಅವರು ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರು ಎಂದು ಮುಖ್ಯಮಂತ್ರಿ ವಿವರಿಸಿದರು.

ಎಲ್ಲಾ ಕಡೆ ಆಪರೇಷನ್ ಕಮಲದಿಂದ ಬಿಜೆಪಿ ಅಧಿಕಾರ ಹಿಡಿಯುವ ಪ್ರಯತ್ನ ಮಾಡುತ್ತಿದೆ. ಅನೇಕ ಕಡೆಗಳಲ್ಲಿ ಅಧಿಕಾರಕ್ಕಾಗಿ ಆಪರೇಷನ್ ಕಮಲ ಮಾಡಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿರುವ ನಿದರ್ಶನಗಳಿವೆ, ಒಮ್ಮೆಯೂ ಜನರ ಆಶೀರ್ವಾದ ಪಡೆದು ಅಧಿಕಾರಕ್ಕೆ ಬರಲಿಲ್ಲ. ನರೇಂದ್ರ ಮೋದಿ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಯಾವುದೇ ನೈತಿಕ ಹಕ್ಕಿಲ್ಲ. ಗ್ಯಾರಂಟಿ ಯೋಜನೆಗಳ ಬಗ್ಗೆ ಲೇವಡಿ ಮಾಡಿ ಮಾತನಾಡುತ್ತಾರೆ. ಗ್ಯಾರಂಟಿ ಯೋಜನೆಗಳನ್ನು ಕರ್ನಾಟಕದಲ್ಲಿ ಘೋಷಣೆ ಮಾಡಿದಾಗ 5 ಗ್ಯಾರಂಟಿಗಳನ್ನೂ ಜಾರಿ ಮಾಡಲಾಗುವುದಿಲ್ಲ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ರಾಜ್ಯ ದಿವಾಳಿಯಾಗುತ್ತದೆ ಎಂದಿದ್ದರು. ಗ್ಯಾರಂಟಿ ಜಾರಿಯಾದ ರಾಜ್ಯಗಳು ಆರ್ಥಿಕವಾಗಿ ದಿವಾಳಿಯಾಗಿಲ್ಲ. ಬಿಜೆಪಿ ರಾಜಸ್ಥಾನ, ಮಧ್ಯಪ್ರದೇಶ, ಜಾರ್ಖಂಡ್, ಹರಿಯಾಣದಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದೆ. ಅವರು ಹೇಳುವುದು ಒಂದು ಮಾಡುವುದು ಇನ್ನೊಂದು, ಸುಳ್ಳು ಹೇಳುವುದರಲ್ಲಿ ಬಿಜೆಪಿಯವರು ನಿಸ್ಸೀಮರು. ಮೋದಿ, ಈ ರಾಜ್ಯಗಳಲ್ಲಿ ಗ್ಯಾರಂಟಿಗಳ ಪರ ಮಾತನಾಡಿ, ಇದರಿಂದ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧ್ಯ ಎನ್ನುತ್ತಾರೆ. ಇಂತಹ ಗೊಂದಲಕಾರಿ ಹೇಳಿಕೆ ಕೊಡುವ ಮೂಲಕ ಈ ದೇಶದ ಜನರ ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳಿಗೆ ಕರ್ನಾಟಕದಲ್ಲಿ 56,000 ಕೋಟಿ ರೂ. ವೆಚ್ಚ ಮಾಡುತ್ತಿದ್ದು, 3 ಲಕ್ಷದ 71 ಸಾವಿರ ಕೋಟಿ ರೂ. ಬಜೆಟ್‌ನಲ್ಲಿ 1.20 ಲಕ್ಷ ಕೋಟಿ ರೂ. ಅಭಿವೃದ್ಧಿಗೆ ಮೀಸಲಿಡಲಾಗಿದೆ, ಗ್ಯಾರಂಟಿ ಯೋಜನೆಗಳು ಜಾರಿಯಾದ ಯಾವ ರಾಜ್ಯದಲ್ಲಿಯೂ ಅಭಿವೃದ್ಧಿ ಕೆಲಸಗಳು ನಿಂತಿಲ್ಲ. ಕೇಂದ್ರ ಸರ್ಕಾರಕ್ಕೆ ತೆರಿಗೆ ಕೊಡುವುದರಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಕೇಂದ್ರಕ್ಕೆ 8 ಲಕ್ಷ 88 ಸಾವಿರ ಕೋಟಿ ರೂ. ನೀಡುತ್ತದೆ. ಆದರೆ, 1.30 ಸಾವಿರ ಕೋಟಿ ರೂ. ಮಾತ್ರ ವಾಪಸ್ ಬರುತ್ತದೆ.

ನಿಮ್ಮ ತೆರಿಗೆಯಲ್ಲಿ 15 ಪೈಸೆ ಮಾತ್ರ ವಾಪಸ್ಸು ಕೊಡುತ್ತಾರೆ. ಕರ್ನಾಟಕದಿಂದ 4.50 ಲಕ್ಷ ರೂ. ತೆರಿಗೆ ಕೊಟ್ಟರೆ 60,000 ಕೋಟಿ ರೂ. ಮಾತ್ರ ವಾಪಸ್ಸು ಬರುತ್ತದೆ. ಅಂದರೆ, ಒಂದು ರೂಪಾಯಿಗೆ 13 ರಿಂದ 14 ಪೈಸೆ ಮಾತ್ರ ವಾಪಸ್ ಬರುತ್ತದೆ. ಇದನ್ನು ವಿರೋಧ ಮಾಡಬೇಕೋ ಬೇಡವೋ ಎಂದು ಪ್ರಶ್ನಿಸಿದರು. ಗ್ಯಾರಂಟಿಗಳಿಗೆ ಹಣ ಸಿಗಬಾರದು ಎಂಬ ಕಾರಣಕ್ಕೆ ನಮಗೆ ನ್ಯಾಯಯುತವಾಗಿ ಬರಬೇಕಾದ ತೆರಿಗೆಯಲ್ಲಿ ಮೋಸ ಮಾಡುತ್ತಿದ್ದಾರೆ, ಕರ್ನಾಟಕ, ತೆಲಂಗಾಣ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳು ಕೇಂದ್ರದ ಈ ನಿಲುವನ್ನು ವಿರೋಧಿಸಬೇಕೆಂದು ಕರೆ ನೀಡಿದರು. ಗೃಹಲಕ್ಷ್ಮೀ ಯೋಜನೆಗೆ ಹಣವಿಲ್ಲ ಎಂದು ಜಾಹೀರಾತು ನೀಡಿದ್ದರು, ಬಿಜೆಪಿಗೆ ಸುಳ್ಳೇ ಮನೆ ದೇವರು, ಯಾವ ರಾಜ್ಯಗಳಲ್ಲಿಯೂ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ನಿಲ್ಲಿಸಿಲ್ಲ. ಈ ತೆರಿಗೆ ನೀತಿಯನ್ನು ವಿರೋಧಿಸಬೇಕೆಂದರೆ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ, ಮಹಾ ವಿಕಾಸ ಅಘಾಡಿ ಗೆಲ್ಲಿಸಿ ಎಂದರು.

ರೋಹಿತ್‌ಗೆ ತೀವ್ರ ಗಾಯ

ಅಪಘಾತದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ರೋಹಿತ್‌ನ ದವಡೆ ಮತ್ತು ತಲೆ ಭಾಗಕ್ಕೆ ತೀವ್ರ ಗಾಯಗಳಾಗಿದ್ದು, ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲಾಗಿದೆ. ಈ ಅಪಘಾತದಲ್ಲಿ ರೋಹಿತ್ ತಾಯಿ ಛಾಯಾಲಕ್ಷ್ಮಿ, ಸ್ನೇಹಿತ ಮತ್ತು ಉಪನ್ಯಾಸಕರೊಬ್ಬರು ಗಾಯಗೊಂಡಿದ್ದು, ಎಲ್ಲರನ್ನೂ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಾಲ ನಟ ರೋಹಿತ್‌ಗೆ ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇದೆ ಎಂದು ಮೂಲಗಳು ತಿಳಿಸಿವೆ.

ವಕ್ಫ್ ಮಂಡಳಿಗೆ ಮುಸ್ಲಿಮರ ವಿವಾಹ ನೋಂದಣಿ ಪ್ರಮಾಣಪತ್ರ ವಿತರಿಸುವ ಅಧಿಕಾರ

ಕರ್ನಾಟಕ ಸರ್ಕಾರದ ವಿರುದ್ಧ ಹೈಕೋರ್ಟ್ ಗರಂ




ಬೆಂಗಳೂರು, ನ.16–ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಮುಸ್ಲಿಮರ ವಿವಾಹ ನೋಂದಣಿ ಪ್ರಮಾಣಪತ್ರ ವಿತರಿಸುವ ಅಧಿಕಾರ ನೀಡಿರುವ ರಾಜ್ಯ ಸರ್ಕಾರದ ಆದೇಶದ ವಿರುದ್ಧ ಹೈಕೋರ್ಟ್ ಗರಂ ಆಗಿದೆ. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಮುಸ್ಲಿಮರ ವಿವಾಹ ನೋಂದಣಿ ಪ್ರಮಾಣಪತ್ರ ನೀಡುವ ಅಧಿಕಾರ ನೀಡಿ ರುವಂತಹುದನ್ನು ನಾವು ಎಲ್ಲೂ ಕೇಳಿಲ್ಲ ಎಂದು ಹೇಳಿರುವ ಕರ್ನಾಟಕ ಹೈಕೋರ್ಟ್, ಸರ್ಕಾರ ಯಾವ ಕಾನೂನಿನಡಿ ಅಧಿ ಕಾರ ಬಳಸಿ ಇಂತಹ ಆದೇಶ ಹೊರಡಿ ಸಿದೆ ಎಂಬ ಬಗ್ಗೆ ಉತ್ತರ ನೀಡಬೇಕು ಎಂದು ಆದೇಶಿಸಿದೆ. ಬೆಂಗಳೂರಿನ ಆಲಂ ಪಾಷಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾ. ಕೆ.ವಿ. ಅರ ವಿಂದ್ ಅವರಿದ್ದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು.

ಸರ್ಕಾರಿ ವಕೀಲರು ಆಕ್ಷೇಪಣೆ ಸಲ್ಲಿಸಲು ಎರಡು ವಾರ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು. ಅದಕ್ಕೆ ನ್ಯಾಯಾಲಯ ಒಪ್ಪಲಿಲ್ಲ. ಅಲ್ಲದೆ, ವಿಚಾರಣೆಯನ್ನು ನ.21ಕ್ಕೆ ಮುಂದೂಡಿ, ಸರ್ಕಾರ ಮುಂದಿನ ವಿಚಾರಣೆ ವೇಳೆಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ನಿರ್ದೇಶನ ನೀಡಿತು. ವಕ್ಫ್ ಕಾಯಿದೆಯಡಿ ಮಂಡಳಿಗೆ ಮದುವೆ ನೋಂದಣಿ ಪ್ರಮಾಣಪತ್ರ ವಿತರಿಸುವಂತಹ ಅಧಿಕಾರ ಹೇಗೆ ನೀಡಬಹುದು ಎಂಬುದನ್ನು ಸಾಬೀತುಪಡಿಸುವಂತೆ ಮೌಖಿಕವಾಗಿ ಹೇಳಿತು. ಕಳೆದ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ರಾಜ್ಯ ಸರ್ಕಾರದ ಅಲ್ಪಸಂಖ್ಯಾತ, ವಕ್ಫ್ ಮತ್ತು ಹಜ್ ಇಲಾಖೆ 2023ರ ಸೆ.30ರಂದು ಆದೇಶ ಹೊರಡಿಸಿ, ಮುಸ್ಲಿಂ ಸಮುದಾಯದವರ ವಿವಾಹ ನೋಂದಣಿ ಪ್ರಮಾಣಪತ್ರಗಳನ್ನು ವಿತರಿಸುವ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಿದೆ. ಇದು ವಕ್ಫ್ ಕಾಯಿದೆ–1995ರ ನಿಯಮಗಳಿಗೆ ವಿರುದ್ಧವಾಗಿದೆ. ಹಾಗಾಗಿ, ಸರ್ಕಾರದ ಆದೇಶ ರದ್ದುಗೊಳಿಸಿ, ಮೊದಲಿದ್ದ ವ್ಯವಸ್ಥೆಯನ್ನೇ ಮುಂದುವರಿಸಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದ್ದರು.

ಆಗ ಸರಕಾರಿ ವಕೀಲರು, ಮದುವೆ ಪ್ರಮಾಣಪತ್ರಗಳನ್ನು ವಿತರಿಸುವ ಅಧಿಕಾರ ಮಾತ್ರ ವಕ್ಫ್ ಮಂಡಳಿಗೆ ನೀಡಲಾಗಿದೆ. ಬೇರೆ ಯಾವ ಅಧಿಕಾರವನ್ನೂ ನೀಡಿಲ್ಲ ಎಂದು ಸಮಜಾಯಿಷಿ ನೀಡಲು ಮುಂದಾಗಿದ್ದರು. ಅದಕ್ಕೆ ನ್ಯಾಯಾಲಯ, ಮದುವೆ ಪ್ರಮಾಣಪತ್ರ ವಿತರಿಸುವ ಕಾರ್ಯವನ್ನು ವಕ್ಫ್ ಬೋರ್ಡ್ ಮಾಡಬೇಕಿಲ್ಲ ಎಂದು ಮೌಖಿಕವಾಗಿ ಹೇಳಿತ್ತು.

ನಟ ಪ್ರಥಮ್ ಮೇಲೆ ಹಲ್ಲೆ: 50 ಜನರ ಮೇಲೆ ಎಫ್‌ಐಆರ್!



ಬೆಂಗಳೂರು, ನ.16– ಬಿಗ್ ಬಾಸ್ ಖ್ಯಾತಿಯ ನಟ ಒಳ್ಳೆ ಹುಡುಗ ಪ್ರಥಮ್ ಅವರ ಮೇಲೆ ನಟ ದರ್ಶನ್ ಅಭಿಮಾನಿಗಳು ಹೋಟೆಲ್‌ನಲ್ಲಿ ಹಲ್ಲೆ ಮಾಡಲು ಯತ್ನಿಸಿದ್ದಾರೆ. ಅಲ್ಲಿಂದ ತಪ್ಪಿಸಿಕೊಂಡು ಬಂದ ನಟ ಪ್ರಥಮ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡು ಇದೀಗ ಪೊಲೀಸರಿಗೆ ನಟ ದರ್ಶನ್ ಅವರ 60 ಅಭಿಮಾನಿಗಳ ದೂರು ದಾಖಲಿಸಿದ್ದಾರೆ. ಬೆಂಗಳೂರಿನ ಪಶ್ಚಿಮ ಸೆನ್ ಪೊಲೀಸ್ ಠಾಣೆಯಲ್ಲಿ ನಟ ದರ್ಶನ್ ಅಭಿಮಾನಿಗಳ ವಿರುದ್ಧ ನಟ ಪ್ರಥಮ್ ದೂರು ದಾಖಲಿಸಿದ್ದಾರೆ.

ಇನ್ನು ನಟ ಪ್ರಥಮ್ ದೂರಿನ ಅನ್ವಯ ಪೊಲೀಸರು ದರ್ಶನ್ ಅಭಿ ಮಾನಿಗಳ ವಿರುದ್ಧ ಎಫ್.ಐ.ಆರ್ ಮಾಡಿದ್ದಾರೆ. ಈ ಬಗ್ಗೆ ಮಾಧ್ಯಮ ಗಳಿಗೆ ಪ್ರತಿಕ್ರಿಯೆ ನೀಡಿದ ಪ್ರಥಮ್, ಇದು 2ನೇ ಸಲ ದರ್ಶನ್ ಅಭಿಮಾನಿಗಳು ನನ್ನ ಮೇಲೆ ಹಲ್ಲೆಗೆ ಪ್ರಯತ್ನ ಮಾಡಿದ್ದಾರೆ. ಒಂದೂವರೆ ತಿಂಗಳ ಹಿಂದೆ ಮೊದಲ ಸಲ ಹಲ್ಲೆ ಯತ್ನ ನಡೆದಿತ್ತು ಆಗ ನಾನೇ ಬೇಡ ಅಂತ ದೂರು ನೀಡಿರಲಿಲ್ಲ. ಆದರೆ, ನಿನ್ನೆ ಪ್ರತಿಷ್ಠಿತ ಹೋಟೆಲ್‌ನಲ್ಲಿ ಊಟಕ್ಕೆ ಹೋಗಿದ್ದಾಗ ದರ್ಶನ್ ಅಭಿಮಾನಿಗಳೇ ಬಂದು ಕಿರುಚಾಡಿ ಗಲಾಟೆ ಮಾಡಿ, ಹಲ್ಲೆಗೆ ಮುಂದಾಗಿದ್ದರು.

ಈ ಘಟನೆಯ ನಂತರ ನಾನು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡು ಪೋಸ್ಟ್ ಹಂಚಿಕೊಂಡಿದ್ದೆನು. ನನ್ನ ಪೋಸ್ಟ್ ಮಾಧ್ಯಮಗಳಲ್ಲಿ ವರದಿ ಆಗುತ್ತಿದ್ದಂತೆ ಬೆಂಗಳೂರು ವೆಸ್ಟ್ ಡಿಸಿಪಿ ಕರೆ ಮಾಡಿದ್ದಾರೆ. ಹೀಗಾಗಿ, ನಾನು ಡಿಸಿಪಿ ಬಳಿ ಮಾತನಾಡಿ ಈಗ ದೂರು ನೀಡಿದ್ದೇನೆ. ನನ್ನ ಪ್ರಕಾರ ಸುಮಾರು 50–60 ದರ್ಶನ್ ಅಭಿಮಾನಿಗಳು ಒಳಗೆ ಹೋಗುತ್ತಾರೆ. ಮೊದಲ ಸಲದ ಹಲ್ಲೆಯ ವಿಡಿಯೋ ಪೊಲೀಸರಿಗೆ ಕೊಟ್ಟಿದ್ದೀನಿ ಎಂದಿದ್ದಾರೆ.

ಎನ್.ಶ್ರೀನಿವಾಸನ್ ಅವರಿಗೆ ಅಭಿನಂದನೆ...



ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ ಕುಹೂ.. ಕುಹೂ.. ಮೈಸೂರು ಕೋಗಿಲೆ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮದಲ್ಲಿ ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಕೋಗಿಲೆ ಗಾಯನ ಪ್ರತಿಭಾ ಶೋಧದ ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅವಾರ್ಡ್ ಅನ್ನು ಭಾನುವಾರ ಪ್ರದಾನ ಮಾಡಲಾಗುತ್ತದೆ.

ಮೈಸೂರು ಮಿತ್ರ
ಭಾನುವಾರ 17 ನವೆಂಬರ್ 2024

ದೇಶದ ಮಹನೀಯರ ತ್ಯಾಗ–ಬಲಿದಾನಕ್ಕೆ ಈಗ ಕವಡೆ ಕಾಸಿನ ಕಿಮ್ಮತ್ತಿಲ್ಲ

● ಮಾಜಿ ಸ್ಪೀಕರ್ ರಮೇಶ್‌ಕುಮಾರ್ ತೀವ್ರ ವಿಷಾದದ ನುಡಿ ● ಹಿಂದೆ ಮಹನೀಯರು ದೇಶಕ್ಕಾಗಿ ನೇಣುಗಂಬಕ್ಕೇರಿದರು; ಈಗ ಅವರವರ ಮಕ್ಕಳ ಅಧಿಕಾರಕ್ಕೇರಿಸಲು ಇತರರ ನೇಣುಗಂಬಕ್ಕೇರಿಸಲಾಗುತ್ತಿದೆ! ● ಮೈಸೂರು ಪ್ರಜಾಪ್ರತಿನಿಧಿ ಸಭೆ– ಚಾರಿತ್ರಿಕ ಅವಲೋಕನ' ಕುರಿತ ವಿಚಾರ ಸಂಕಿರಣ ಸಮಾರೋಪ

ಮೈಸೂರು, ನ.16(ಎಸ್‌ಬಿಡಿ)– ಚರಿತ್ರೆಯ ಅವಲೋಕನದ ಜೊತೆಗೆ ಈ ದೇಶ ಹಾಗೂ ಸಮಾಜಕ್ಕಾಗಿ ತ್ಯಾಗ–ಬಲಿದಾನ ಮಾಡಿದವರ ಆಶಯವನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯ ಎಂದು ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ರಾಜ್ಯ ಪತ್ರಾಗಾರ ಇಲಾಖೆ ವಿಭಾಗೀಯ ಕಚೇರಿ ಸಹಯೋಗದಲ್ಲಿ ನಡೆದ 'ಮೈಸೂರು ಪ್ರಜಾ ಪ್ರತಿನಿಧಿ ಸಭೆ– ಚಾರಿತ್ರಿಕ ಅವಲೋಕನ' ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಮಹನೀಯರ ಆಶಯವನ್ನು ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸುಳ್ಳಾಗಿಸಿದ್ದೀವಿ. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಗಾಂಧೀಜಿ ಬಂಧನದಿಂದ ಜನ ಕಂಗಾಲಾಗಿದ್ದಾಗ ಅವರ ಪತ್ನಿ ಕಸ್ತೂರ್ ಬಾ ಹೋರಾಟಕ್ಕಿಳಿಯುತ್ತಾರೆ. ಆವರೆಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿಯಾಗದವರು ಅಂದು ಮಾತನಾಡಿ, ಜನರಿಗೆ ಸ್ಥೈರ್ಯ ತುಂಬಿದರು. ಆದರೆ ಅವರು ಜೈಲಿನಲ್ಲೇ ಕೊನೆಯುಸಿರೆಳೆದರು. ವಿಶ್ವದ ಎಲ್ಲಾ ದೇಶಗಳ ಸಂವಿಧಾನ ಅಧ್ಯಯನ ಮಾಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿ, ಸಮಾನತೆ ಸಾಕಾರಕ್ಕಾಗಿ ಮತದಾನದ ಹಕ್ಕು ಕಲ್ಪಿಸಿದರು. ಆದರೆ ಇಂತಹ ಮಹನೀಯರ ತ್ಯಾಗ–ಬಲಿದಾನಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲದ ದುಃಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನರಮೇಧದ ಗುಣ ಉಳಿದಿದೆ: ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಬ್ರಿಟಿಷರಿಗೆ ಮೊದಲು ಜಹಾಂಗೀರ್ ಚಕ್ರವರ್ತಿ ಗುಜರಾತ್‌ನಲ್ಲಿ ಅವಕಾಶ ಮಾಡಿಕೊಟ್ಟ, ಬಳಿಕ ಬ್ರಿಟಿಷರು ದೇಶವನ್ನೇ ಮುಷ್ಟಿಯಲ್ಲಿಟ್ಟುಕೊಂಡರು. 1919ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆಯಿತು. ಆ ನರಮೇಧದಲ್ಲಿ 1459 ಜನ ಹತರಾದರೆಂದು ಪ್ರತ್ಯಕ್ಷದರ್ಶಿಗಳು ಹೇಳಿದರೂ, ಬ್ರಿಟಿಷ್ ಸರ್ಕಾರ ಹೇಳಿದ್ದು ಮಾತ್ರ ನೂರಾರು ಮಂದಿ ಎಂದು. ದಾಖಲೆಯಲ್ಲಿ ಸಾವಿನ ಲೆಕ್ಕವನ್ನೇ ಮರೆಮಾಚಿದರು. ಅಂತಹ ಗುಣಗಳು ಈಗಿನ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಉಳಿಸಿಕೊಂಡಿದ್ದೇವೆ. ಈಗಿನ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಬಳಸುತ್ತಿರುವ ಭಾಷೆ ಯಾರಿಗೂ ಗೌರವ ತರುವಂತದ್ದಲ್ಲ. 27 ವರ್ಷದ ಭಗತ್ ಸಿಂಗ್ ಅವರನ್ನು ಬ್ರಿಟಿಷರು ನೇಣಿಗೇರಿಸಿದರು. ದೇಶಕ್ಕಾಗಿ ನೇಣಿಗೇರಲು ಸಿದ್ಧವಾಗಿದ್ದ ಭಗತ್ ಬಗ್ಗೆ ಆತನ ತಾಯಿ ಹೆಮ್ಮೆ ಪಟ್ಟಿದ್ದಳು. ಆದರೆ ಈಗ



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ 'ಮೈಸೂರು ಪ್ರಜಾಪ್ರತಿನಿಧಿ ಸಭೆ– ಚಾರಿತ್ರಿಕ ಅವಲೋಕನ' ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಮಾತನಾಡಿದರು.

ತಮ್ಮ ಮಕ್ಕಳನ್ನು ಅಧಿಕಾರಕ್ಕೇರಿಸಲು ಉಳಿದವರನ್ನು ನೇಣುಗಂಬಕ್ಕೆ ಏರಿಸುವ ಕೆಟ್ಟ ಸ್ಥಿತಿ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇದೆ ಎಂದು ಹೇಳಿದರು.

12ನೇ ಶತಮಾನದಲ್ಲಿ ಬಿತ್ತನೆ: ಇಂಗ್ಲೆಂಡ್‌ನಲ್ಲಿ 12ನೇ ಶತಮಾನದಲ್ಲಿ ಪ್ರಜಾಪ್ರಭುತ್ವದ ಮೊದಲ ಬೀಜ ಬಿತ್ತನೆಯಾಯಿತು. ರಾಜರು ತಮ್ಮ ವೈಭೋಗದ ಜೀವನಕ್ಕಾಗಿ ತೆರಿಗೆ ಹಾಕುವುದರ ವಿರುದ್ಧ ಜನ ಗಟ್ಟಿಯಾಗಿ ಮಾತನಾಡಲಾರಂಭಿಸಿ, ಬೀದಿಗಿಳಿದು ಪ್ರತಿಭಟಿಸಿದರು. ಸಂಘಟಿತರಾಗಿ ನಿರಂಕುಶ ಪ್ರಭುತ್ವದ ವಿರುದ್ಧ ತಿರುಗಿಬಿದ್ದರು. ನಮ್ಮ ಪ್ರಾತಿನಿಧ್ಯ ಇಲ್ಲದೆ ತೆರಿಗೆ ಹಾಕುವಂತಿಲ್ಲ ಎಂಬ ಘೋಷಣೆ ಮೊಳಗಿಸಿದರು. ಅದೇ ವೇಳೆ ಕರ್ನಾಟಕದ ಒಂದು ಮೂಲೆಯಲ್ಲಿ ವಚನ ಚಳವಳಿ ಆರಂಭವಾಯಿತು. ಮೇಲು–ಕೀಳು ಇಲ್ಲ, ಶೋಷಣೆ ನಿಲ್ಲಬೇಕು, ದುಡಿಮೆಯೇ ಶ್ರೇಷ್ಠ ಎಂಬ ಸಂದೇಶ ಸಾರಿದರು. ಬಸವಣ್ಣನವರು ಪೌರೋಹಿತ್ಯ ಶಾಹಿ ದೌರ್ಜನ್ಯದ ವಿರುದ್ಧ ಹೊಸ ವ್ಯವಸ್ಥೆಯನ್ನೇ ರೂಪಿಸಿದರು. ಹಾಗೆಯೇ ಯೂರೋಪ್‌ನಲ್ಲಿ ಚಕ್ರವರ್ತಿಯನ್ನು ಆಯ್ಕೆ ಮಾಡುತ್ತಿದ್ದ ಚರ್ಚ್‌ಗಳ ಭ್ರಷ್ಟತೆ ವಿರುದ್ಧ ಜನ ತಿರುಗಿ ಬಿದ್ದರು. ಲಂಡನ್‌ನ ವೈಟ್‌ಹಾಲ್‌ನಲ್ಲಿ ದುಷ್ಟ ರಾಜನ ಶಿರಚ್ಛೇದ ಮಾಡಲಾಯಿತು. ಹೀಗೆ ನಿರಂಕುಶ ಪ್ರಭುತ್ವದ ವಿರುದ್ಧ ಜನ ಸಿಡಿದೇಳುವ ಮೂಲಕ ಪ್ರಜಾಪ್ರಭುತ್ವಕ್ಕೆ ಬೀಜಾಂಕುರವಾಯಿತು ಎಂದು ತಿಳಿಸಿದರು.

ಪ್ರಜಾಪ್ರತಿನಿಧಿ ಸಭೆ ಬಗ್ಗೆ ಹೆಮ್ಮೆ: ಮೈಸೂರು ಮಹಾರಾಜರು ಪ್ರಜಾಪರಿಪಾಲನೆಯಲ್ಲಿ ಸ್ವಲ್ಪ ಎಡವಿ, ಪರಿಸ್ಥಿತಿ ಕೈಮೀರಬಹುದಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬ್ರಿಟಿಷರು, ರಾಜರನ್ನು ಬದಿಗಿರಿಸಿ ಆಡಳಿತ ನಡೆಸಲಾರಂಭಿಸು

> "ರಾಜಕಾರಣಿಗಳ ಫುಟ್‌ಬಾಲ್ ಆಟಕ್ಕೆ ಪ್ರಜೆಗಳು ಚೆಂಡಿನಂತಾಗಿದ್ದಾರೆ. ಈ ಸಂದರ್ಭದಲ್ಲಿ ಚಾರಿತ್ರಿಕ ಸತ್ಯಕ್ಕೆ ಅಪಚಾರವಾದಾಗ ಪತ್ರಾಗಾರ ಇಲಾಖೆ ಸಂಬಂಧಪಟ್ಟ ಸೂಕ್ತ ದಾಖಲೆಗಳನ್ನು ಒದಗಿಸುವ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು. ಜನ ಏನೇ ಹೇಳಿದರೂ ದಾಖಲೆಗಳು ಸತ್ಯ ಹೇಳುತ್ತವೆ.
> –ಕೆ.ಆರ್.ರಮೇಶ್ ಕುಮಾರ್, ಮಾಜಿ ಸ್ಪೀಕರ್

ತ್ತಾರೆ. 50 ವರ್ಷಗಳ ಬಳಿಕ ರಾಜರು ಆಡಳಿತವನ್ನು ಪುನಃ ಪಡೆದುಕೊಳ್ಳುತ್ತಾರೆ. ಬಳಿಕ 1881ರಲ್ಲಿ ಪ್ರಜಾಪ್ರತಿನಿಧಿ ಸಭೆ ಅಸ್ತಿತ್ವಕ್ಕೆ ಬರುತ್ತದೆ. ಆಗಿನ ಮಾನದಂಡದನ್ವಯ ದೊಡ್ಡ ಜಮೀನ್ದಾರರು, ಶಿಕ್ಷಣ ಪಡೆದವರು ಸಭೆಯ ಸದಸ್ಯರಾಗುತ್ತಾರೆ. ಕಾರ್ಯನಿರ್ವಾಹಕ ಮಂಡಳಿಯೂ ಇರುತ್ತದೆ. ಸಭೆಯ ಸದಸ್ಯರಿಗೆ ಶಾಸನ ಮಾಡುವ, ನಿರ್ಧಾರ ಪ್ರಶ್ನಿಸುವ, ಬಜೆಟ್ ಬಗ್ಗೆ ಚರ್ಚಿಸುವ ಅಧಿಕಾರ ಇಲ್ಲವಾಗಿದ್ದರೂ ಪ್ರಜೆಗಳ, ಆಸೆ–ಆಕಾಂಕ್ಷೆ, ಆಶಯಗಳನ್ನು ಪ್ರತಿನಿಧಿಸುವ ಅವಕಾಶವಿರುತ್ತದೆ. ನಂತರ ಸದಸ್ಯರ ಆಯ್ಕೆ ಮಾನದಂಡಗಳು ಸಡಿಲವಾಗಿದ್ದರಿಂದ ಸಾಮಾನ್ಯರಿಗೂ ಅವಕಾಶ ಸಿಗುತ್ತದೆ. ಕನ್ನಂಬಾಡಿ ಅಣೆಕಟ್ಟೆ ವಿಚಾರವೂ ಸಭೆಯಲ್ಲಿ ಚರ್ಚೆಯಾಗುತ್ತದೆ. ಸಂಸ್ಥಾನದ ಆಗಿನ 2.84 ಕೋಟಿ ಬಜೆಟ್ ವ್ಯಾಪ್ತಿಯಲ್ಲಿ ಹಲವು ಯೋಜನೆಗಳನ್ನು ಕೈಗೊಂಡಿದ್ದರ ಬಗ್ಗೆ ಬಸವಯ್ಯ ಹಾಗೂ ಬಸವರಾಜಪ್ಪ ಅವರು ಆರ್ಥಿಕ ಸ್ಥಿತಿ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಾರೆ. ದೇಶದ ಬೇರೆ ಯಾವುದೇ ಭಾಗದಲ್ಲಿ ಈ ಆಲೋಚನೆ ಇರಲಿಲ್ಲ. ರಾಜರು ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದು ಮಹತ್ವದ ವಿಚಾರ ಎಂದರು.

ರಾಜೀವ್‌ಗಾಂಧಿ ಅವರು ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದು, ಪ್ರಧಾನಿಯಾದರು. ಅವರು ಆದರ್ಶ ವ್ಯಕ್ತಿ. ಮತದಾನದ ಹಕ್ಕನ್ನು 18 ವರ್ಷಕ್ಕೆ ಇಳಿಸಿದರು. ಅದು ಸರಿ–ತಪ್ಪು ಎಂಬುದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಜವಾಬ್ದಾರಿ ಇಲ್ಲದ ಹಂತದಲ್ಲಿ ಹಕ್ಕು ನೀಡಿದಾಗ ಸಮರ್ಥವಾಗಿ ನಿರ್ವಹಿಸುವುದಿಲ್ಲ. ಆದರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಯಾವುದೇ ಹಕ್ಕು ಇಲ್ಲವಾಗಿದ್ದರೂ ಜನರ ಪರವಾದ ಜವಾಬ್ದಾರಿ ಇತ್ತು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್.ಮಂಜುನಾಥ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮೂಗೇಶಪ್ಪ, ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಭು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಮಾತ್ರವಲ್ಲ, ಎಲ್ಲರೂ ಮುಡಾ ನಿವೇಶನ ಪಡೆದಿದ್ದಾರೆ



ಹುಬ್ಬಳ್ಳಿ, ನ.16– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಬ್ಬರೇ ನಿವೇಶನ ಪಡೆದಿಲ್ಲ. ಎಲ್ಲಾ ಪಕ್ಷದವರೂ ಪಡೆದಿದ್ದಾರೆ ಎಂದು ಬಿಜೆಪಿ ಹಿರಿಯ ಮುಖಂಡ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಪ್ರಕರಣವನ್ನು ಸಿಬಿಐಗೆ ಕೊಟ್ಟರೆ ಎಲ್ಲಾ ಪಕ್ಷದವರ ಹೆಸರುಗಳೂ ಹೊರಗೆ ಬರುತ್ತವೆ. ಎಲ್ಲ ಪಕ್ಷದಲ್ಲೂ ಕಳ್ಳರಿದ್ದಾರೆ. ಯಾರೂ ಹರಿಶ್ಚಂದ್ರನ ಎರಡನೇ ಸಂತತಿಯವರಲ್ಲ. ಎಲ್ಲಾ ಪಕ್ಷದವರು ಎಂದು ಹೇಳಿದ ಮೇಲೆ ಬಿಜೆಪಿಯವರೂ ಇರುತ್ತಾರಲ್ಲವೇ ಎಂದು ಪ್ರಶ್ನಿಸಿದರು.

ಪ್ರಕರಣವನ್ನು ಸಿಬಿಐಗೆ ಕೊಡದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಲ್ಲರನ್ನೂ ರಕ್ಷಣೆ ಮಾಡುತ್ತಿದ್ದಾರೆ. ಅವರು ಎಂತಹ ಒಳ್ಳೆಯ ಮನುಷ್ಯ ಎಂದು ವ್ಯಂಗ್ಯವಾಡಿದ ಯತ್ನಾಳ್, ಅಡ್ಜಸ್ಟ್‌ಮೆಂಟ್‌ಗಾಗಿ ಸಿದ್ದರಾಮಯ್ಯ ಬಲಿ ಆಗುತ್ತಿದ್ದಾರೆ ಎಂದರು.

ಆಪರೇಷನ್ ಕಮಲ ಬಗ್ಗೆ ಸಿದ್ದರಾಮಯ್ಯ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಅವರ ಬಳಿ ಆಧಾರ ಏನಿದೆ, ರೆಕಾರ್ಡಿಂಗ್ ಇದೆಯಾ. ಹಾಗೇನಾದರೂ ಇದ್ದರೆ ಅರೆಸ್ಟ್ ಮಾಡಿಸಲಿ. ನಮಗೆ ಕಾಂಗ್ರೆಸ್ ಸರ್ಕಾರದಲ್ಲಿರುವ ಎಂಎಲ್‌ಎ, ಮಂತ್ರಿ ಯಾರೂ ಬೇಡ. ಇವರನ್ನು ತಗೊಂಡು ನಾವು ಸರ್ಕಾರ ಮಾಡಿದರೆ ಮುಗೀತು. ಕಾಂಗ್ರೆಸ್ ಸರ್ಕಾರ ಈಗಲೇ ಪತನ ಆದರೆ, ಬಿಜೆಪಿ 150 ಸೀಟ್ ಬರುತ್ತೆ. ನಾವ್ಯಾಕೆ ಆಪರೇಷನ್‌ದಂತಹ ಹಲ್ಕಾ ಕೆಲಸ ಮಾಡಬೇಕು ಎಂದರು. ಯಾವುದೇ ಕಾರಣಕ್ಕೂ ಆಪರೇಷನ್ ಕಮಲ ಮಾಡುವುದು ಬೇಡ ಎಂದು ಹೈಕಮಾಂಡ್ ನಾಯಕರಿಗೆ ನಾನು ಹೇಳಿದ್ದೇನೆ. ಬಿಜೆಪಿಯಲ್ಲಿ ಯಾರಿಗೆ ಮುಖ್ಯಮಂತ್ರಿ ಆಗಬೇಕೋ ಅವರಿಗೆ ಗಡಿಬಿಡಿ ಇದೆ, ನಮಗಿಲ್ಲ. ನಾನು ಶಾಸಕನಾಗಿ ಕೆಲಸ ಮಾಡುತ್ತೇನೆ ಎಂದರು. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಇಬ್ಬರೂ ನನ್ನ ಜೊತೆ ನಾಟಕ ಕಂಪನಿ ಮಾಡಿದರು. ನಿಮ್ಮನ್ನು ಮಂತ್ರಿ ಮಾಡುತ್ತೇವೆ ಎಂದು ಬೊಮ್ಮಾಯಿ ಹೇಳುತ್ತಿದ್ದರು ಎಂದರು.

ಪ್ರಹ್ಲಾದ್ ಜೋಶಿರನ್ನು ಸೋಲಿಸಲು ಅಪ್ಪ–ಮಕ್ಕಳು ಪ್ರಯತ್ನಿಸಿದ್ರು!

● ಪ್ರತಾಪ್ ಸಿಂಹಗೆ ಟಿಕೆಟ್ ತಪ್ಪಿಸಿದವರೂ ಇವರೇ!

ಹುಬ್ಬಳ್ಳಿ, ನ.16– ಈ ಬಾರಿ ಪ್ರಹ್ಲಾದ್ ಜೋಶಿಯವರನ್ನು ಸೋಲಿಸಲು ಅಪ್ಪ–ಮಕ್ಕಳು ಪ್ರಯತ್ನಿಸಿದ್ದರು ಎಂದು ಬಿ.ಎಸ್.ಯಡಿಯೂರಪ್ಪ ಮತ್ತು ಬಿವೈ.ವಿಜಯೇಂದ್ರ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ಮಾಡಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಲೋಕಸಭೆ ಚುನಾವಣೆಯಲ್ಲಿ ಪ್ರಹ್ಲಾದ್ ಜೋಶಿ ಅವರನ್ನೇ ಸೋಲಿಸಲು ಪ್ರಯತ್ನಿಸಿದ್ದರು ಎಂದು ಹೊಸ ಬಾಂಬ್ ಹಾಕಿದ್ದಾರೆ.

ಇದು ರಕ್ತಗತವಾಗಿದೆ: ನಮ್ಮಲ್ಲಿ ಒಡಕು ತರುವ ಪ್ರಯತ್ನ ಸನ್ಮಾನ್ಯ ವಿಜಯೇಂದ್ರ ಮಾಡುತ್ತಿದ್ದಾರೆ. ಅವರ ತಂದೆ ಯಡಿಯೂರಪ್ಪನವರು ಸಹ ಹೀಗೆ ಮಾಡಿದ್ದಾರೆ. ಪ್ರತಾಪ್ ಸಿಂಹಗೆ ಟಿಕೆಟ್ ತಪ್ಪಿಸಿದ್ರು, ಇದು ಅವರ ರಕ್ತಗತವಾಗಿದೆ ಎಂದು ಕಿಡಿಕಾರಿದ್ದಾರೆ. ವಕ್ಫ್ ವಿರುದ್ಧ ಜನಜಾಗೃತಿ ಅಭಿಯಾನಕ್ಕೆ ಹೈಕಮಾಂಡ್ ಬೆಂಬಲ ಇದೆ. ನಮ್ಮ ಅಭಿಯಾನಕ್ಕೆ ಹೈಕಮಾಂಡ್ ಬೆಂಬಲ ಇದೆ. ಹೈಕಮಾಂಡ್ ಬೆಂಬಲ ಇದಿದ್ದರಿಂದಲೇ ಜೆಪಿಸಿ ಕಮಿಟಿ ಬಂದಿರೋದು. ನಾವು ಡಿ.25ರಿಂದ ಜನಜಾಗೃತಿ ಅಭಿಯಾನ ಆರಂಭಿಸುತ್ತೇವೆ. ಮೂರು ತಂಡಗಳಿಗೆ ತಂದೆ ಇಲ್ಲ, ತಾಯಿನೂ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ

ಪ್ರತಿ ಶನಿವಾರದ ಸಾಂಸ್ಕೃತಿಕ ಸ್ಪರ್ಧೆಗೆ ಚಾಲನೆ

ಗಂಜೀಫಾ ಕಲಾವಿದ ರಘುಪತಿ ಭಟ್, ಶಿಲ್ಪ ಕಲಾವಿದ ಅರುಣ್ ಯೋಗಿರಾಜ್, ರಂಗಕರ್ಮಿ ಡಾ.ಜನಾರ್ಧನ್, ಹಿರಿಯ ಕಲಾವಿದೆ ಸರಸ್ವತಿ ಜುಲೇಖಾ ಬೇಗಂ ಅವರಿಗೆ ಸನ್ಮಾನ



ವಸ್ತುಪ್ರದರ್ಶನದ ಗಾನಕೋಗಿಲೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭದಲ್ಲಿ ಗಂಜೀಫಾ ಕಲಾವಿದ ರಘುಪತಿ ಭಟ್, ಶಿಲ್ಪ ಕಲಾವಿದ ಅರುಣ್ ಯೋಗಿರಾಜ್, ರಂಗಕರ್ಮಿ ಡಾ.ಜನಾರ್ಧನ್ (ಜನ್ನಿ), ಹಿರಿಯ ರಂಗಭೂಮಿ ಕಲಾವಿದೆ ಸರಸ್ವತಿ ಜುಲೇಖಾ ಬೇಗಂ, ಲೇಖಕಿ ತಾರಿಣಿ ಚಿದಾನಂದಗೌಡ, ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ನ.16(ಪಿಎಂ)– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ದಸರಾ ವಸ್ತುಪ್ರದರ್ಶನ–2024ರ ಪ್ರಯುಕ್ತ ಡಿ.28ರವರೆಗೆ ವಾರಾಂತ್ಯದ ಪ್ರತಿ ಶನಿವಾರ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಸಮೂಹ ನೃತ್ಯ ಮತ್ತು ಗಾಯನ ಸ್ಪರ್ಧೆಗಳಿಗೆ ಶನಿವಾರ ಚಾಲನೆ ದೊರೆಯಿತು.

ವಸ್ತುಪ್ರದರ್ಶನದ ಗಾನಕೋಗಿಲೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಪ್ರತಿ ಶನಿವಾರ ಈ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿದ್ದು, ಒಟ್ಟು 7 ಶನಿವಾರಗಳಂದು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ನ.16ರ ಶನಿವಾರವಾದ ಇಂದು ಇದೇ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ಲೇಖಕರೂ ಆದ ರಾಷ್ಟ್ರಕವಿ ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದಗೌಡ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿದರು.

ಇದೇ ವೇಳೆ ರಾಷ್ಟ್ರ ಪ್ರಶಸ್ತಿ ಹಾಗೂ ರಾಷ್ಟ್ರೀಯ ಕಾಳಿದಾಸ ಸನ್ಮಾನ ಪುರಸ್ಕೃತ ಗಂಜೀಫಾ ಕಲಾವಿದ ರಘುಪತಿ ಭಟ್, ರಾಷ್ಟ್ರ ಪ್ರಶಸ್ತಿ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಿಲ್ಪ ಕಲಾವಿದ ಅರುಣ್ ಯೋಗಿರಾಜ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಡಾ.ಜನಾರ್ಧನ್ (ಜನ್ನಿ) ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗಭೂಮಿ ಕಲಾವಿದೆ ಸರಸ್ವತಿ ಜುಲೇಖಾ ಬೇಗಂ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ತಾರಿಣಿ ಚಿದಾನಂದಗೌಡ ಮತ್ತು ಅವರ ಪತಿ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ ಅವರನ್ನೂ ಸನ್ಮಾನಿಸಲಾಯಿತು.

ತಾರಿಣಿ ಚಿದಾನಂದಗೌಡ ಮಾತನಾಡಿ, ಇಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ಬಹಳ ವರ್ಷಗಳ ಹಿಂದೆ ಇಲ್ಲಿಗೆ ಭೇಟಿ ನೀಡಿದ್ದೆ. ಚಿಕ್ಕ ವಯಸ್ಸಿನಲ್ಲಿ ವಸ್ತು ಪ್ರದರ್ಶನಕ್ಕೆ ಬಂದು ಸಂಭ್ರಮಪಡುತ್ತಿದ್ದೆವು. ಈಗ ಬಹಳ ವರ್ಷಗಳ ನಂತರ ಇಲ್ಲಿಗೆ ಭೇಟಿ ನೀಡಿದ್ದೇನೆ. ನೃತ್ಯ ಸ್ಪರ್ಧಿಗಳು ಹಾಗೂ ಸನ್ಮಾನಿತರಿಗೂ ಶುಭಾಶಯ ತಿಳಿಸುವುದಾಗಿ ಹೇಳಿದರಲ್ಲದೆ, ಅರುಣ್ ಯೋಗಿರಾಜ್ ಅವರನ್ನು ಮಾಧ್ಯಮಗಳಲ್ಲಿ ಮಾತ್ರ ನೋಡಿದ್ದೆ. ಇಂದು ಅವರನ್ನು ನೇರವಾಗಿ ನೋಡಿದ್ದು ಸಂತಸ ಉಂಟು ಮಾಡಿದೆ ಎಂದು



ಭದ್ರಾವತಿ ಶಿವ ಡಾನ್ಸ್ ಕ್ಲಾಸ್ ತಂಡದಿಂದ ನೃತ್ಯ ಪ್ರದರ್ಶಿಸಿದ್ದನ್ನು ಕಾಣಬಹುದು.

ಹರ್ಷ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪಿ.ಕಾಳಿಂಗರಾವ್ ರಂಗಮಂಟಪಕ್ಕೆ ಒಂದು ಇತಿಹಾಸವೇ ಇದೆ. ಈ ಮಂಟಪದಲ್ಲಿ ಹೆಚ್ಚಾಗಿ ಮೈಸೂರು ಹಾಗೂ ನೆರೆ ಜಿಲ್ಲೆಗಳ ಕಲಾವಿದರು ತಮ್ಮ ಕಲೆಗಳ ಪ್ರದರ್ಶನ ನೀಡಿದ್ದಾರೆ. ಆದರೆ ನಾನು ಪ್ರಾಧಿಕಾರದ ಅಧ್ಯಕ್ಷನಾದ ಬಳಿಕ ಇಡೀ ರಾಜ್ಯದ ಕಲಾವಿದರಿಗೆ ಇಲ್ಲಿ ವೇದಿಕೆ ಕಲ್ಪಿಸಲು ನಿರ್ಧರಿಸಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇಂದಿನ ಸ್ಪರ್ಧೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳ 20ಕ್ಕೂ ಹೆಚ್ಚು ತಂಡಗಳು ಪಾಲ್ಗೊಂಡಿದ್ದು, ನಗದು ಬಹುಮಾನ ಸಹ ನೀಡಲಾಗುತ್ತಿದೆ. ಜನವರಿ 1ರವರೆಗೆ ವಸ್ತು ಪ್ರದರ್ಶನ ಇರಲಿದ್ದು, ಆವರೆಗೂ ಒಂದಲ್ಲಾ ಒಂದು ಕಾರ್ಯಕ್ರಮ ಇಲ್ಲಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಇನ್ನು ಅತ್ಯುತ್ತಮ ರೀತಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಬಂಧ ಚರ್ಚೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಬಳಿಕ 14 ವರ್ಷ ಒಳಪಟ್ಟವರ ಸಮೂಹ ನೃತ್ಯ ಸ್ಪರ್ಧೆ ನಡೆಯಿತು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಾಧಿಕಾರದ ಸಿಇಓ ಕೆ.ರುದ್ರೇಶ್, ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಕಾರ್ಯಾಧ್ಯಕ್ಷ ಕೆ.ವಿ.ಮಲ್ಲೇಶ್, ಉಪಾಧ್ಯಕ್ಷ ಸೈಯದ್ ಅಜರತ್ ಉಲ್ಲಾ, ಸಂಚಾಲಕ ಸುಹೇಲ್ ಬೇಗ್, ಮುಖಂಡ ಅಜಯ್‌ಶಾಸ್ತ್ರಿ ಮತ್ತಿತರರು ಹಾಜರಿದ್ದರು.

ಮುಂದಿನ ಶನಿವಾರ ಜಾನಪದ ಸಮೂಹ ನೃತ್ಯ ಸ್ಪರ್ಧೆ

ಮುಂಬರುವ ಶನಿವಾರ (ನ.23) ಜಾನಪದ ಸಮೂಹ ನೃತ್ಯ ಸ್ಪರ್ಧೆ (ಎಲ್ಲಾ ವಯೋಮಾನದವರಿಗೆ) ಆಯೋಜಿಸಲಾಗಿದೆ. ಸದರಿ ದಿನದ ಸ್ಪರ್ಧೆಗೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ನ.21. ಪ್ರತಿ ತಂಡದ ಪ್ರವೇಶಾತಿ ಶುಲ್ಕ ಸಾವಿರ ರೂ. ಆಗಿದೆ. ಎಲ್ಲಾ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಪ್ರಥಮ ಬಹುಮಾನ 30 ಸಾವಿರ ರೂ., ದ್ವಿತೀಯ ಬಹುಮಾನ 20 ಸಾವಿರ ರೂ., ತೃತೀಯ ಬಹುಮಾನ 15 ಸಾವಿರ ರೂ., ಸಮಾಧಾನಕರ ಬಹುಮಾನ (2 ತಂಡಕ್ಕೆ) 5 ಸಾವಿರ ರೂ. ಆಗಿದ್ದು, ಹೆಚ್ಚಿನ ವಿವರಗಳಿಗೆ ಮೊ..98803 58761 ಅಥವಾ 72042 02444 ಅನ್ನು ಸಂಪರ್ಕಿಸಬಹುದು.

ದೇಶ - ವಿದೇಶ

ಆತ್ಮಾಹುತಿ ಡ್ರೋನ್ ತಯಾರಿಕೆಗೆ ಉ.ಕೊರಿಯಾ ನಾಯಕ ಕಿಮ್ ಜಾಂಗ್ ಆದೇಶ

ಸಿಯೋಲ್: ಆತ್ಮಾಹುತಿ ಡ್ರೋನ್‌ಗಳನ್ನು ತ್ವರಿತಗತಿಯಲ್ಲಿ



ಸಾಮೂಹಿಕವಾಗಿ ತಯಾರಿಸುವುದು ಅಗತ್ಯ ಎಂದು ಉತ್ತರ ಕೊರಿಯಾದ ನಾಯಕ ಕಿಮ್ ಜಾಂಗ್–ಉನ್ ಹೇಳಿದ್ದಾರೆ. ಆತ್ಮಾಹುತಿ ದಾಳಿ ಡ್ರೋನ್‌ಗಳ ಕಾರ್ಯಕ್ಷಮತೆ ಪರೀಕ್ಷೆಯ ಮೇಲ್ವಿಚಾರಣೆ ನಡೆಸಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ಇದಕ್ಕೂ ಹಿಂದಿನ ದಿನ ಮಾನವರಹಿತ ವೈಮಾನಿಕ ತಂತ್ರಜ್ಞಾನ ಸಂಕೀರ್ಣದ ಸಂಯೋಜಿತ ಸಂಸ್ಥೆ ತಯಾರಿಸಿದ ವಿವಿಧ ರೀತಿಯ ಆತ್ಮಾಹುತಿ ದಾಳಿ ಡ್ರೋನ್‌ಗಳ ಪರೀಕ್ಷೆಗಳಿಗೆ ಕಿಮ್ ಸ್ಥಳದಲ್ಲೇ ಮಾರ್ಗದರ್ಶನ ನೀಡಿದರು ಎಂದು ಕೊರಿಯಾದ ಸೆಂಟ್ರಲ್ ನ್ಯೂಸ್ ಏಜೆನ್ಸಿಯನ್ನು ಉಲ್ಲೇಖಿಸಿ ಯೋನ್ ಹಾಪ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ವಿವಿಧ ದಾಳಿಗಳಲ್ಲಿ ಬಳಸಬೇಕಾದ ಆತ್ಮಾಹುತಿ ಡ್ರೋನ್‌ಗಳು ನೆಲ ಮತ್ತು ಸಮುದ್ರದಲ್ಲಿ ಯಾವುದೇ ಶತ್ರು ಗುರಿಗಳ ಮೇಲೆ ನಿಖರವಾಗಿ ದಾಳಿ ಮಾಡುವ ಸಾಮರ್ಥ್ಯ ಹೊಂದಿವೆ ಎಂದು ಕೆಸಿಎನ್‌ಎ ಹೇಳಿದೆ. ಗುರುವಾರದ ಪರೀಕ್ಷೆಯಲ್ಲಿ ಡ್ರೋನ್‌ಗಳು ಪೂರ್ವ ನಿರ್ಧರಿತ ಮಾರ್ಗಗಳಲ್ಲಿ ಹಾರಾಟ ನಡೆಸಿದ ನಂತರ ನಿಖರವಾಗಿ ಗುರಿಗಳನ್ನು ಹೊಡೆದುರುಳಿಸಿದವು ಎಂದು ಅದು ವರದಿ ಮಾಡಿದೆ.

ಉತ್ತರಪ್ರದೇಶದ ಆಸ್ಪತ್ರೆಯಲ್ಲಿ ಅಗ್ನಿ ಅವಘಡ; 10 ಮಕ್ಕಳು ಸಜೀವ ದಹನ

ಝಾನ್ಸಿ: ಶುಕ್ರವಾರ ತಡರಾತ್ರಿ ಉತ್ತರ ಪ್ರದೇಶದ ಝಾನ್ಸಿ



ವೈದ್ಯಕೀಯ ಕಾಲೇಜಿನ ಎನ್‌ಐಸಿಯುನಲ್ಲಿ ಬೆಂಕಿ ಕಾಣಿಸಿಕೊಂಡು 10ಕ್ಕೂ ಹೆಚ್ಚು ಮಕ್ಕಳು ಸಜೀವ ದಹನಗೊಂಡಿದ್ದಾರೆ. 37 ಮಕ್ಕಳನ್ನು ಸ್ಥಳಾಂತರಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಜಿಲ್ಲಾಧಿಕಾರಿ ಸೇರಿದಂತೆ ಎಲ್ಲ ಅಧಿಕಾರಿಗಳು ಸ್ಥಳದಲ್ಲಿಯೇ ಇದ್ದಾರೆ. ಮುಖ್ಯಮಂತ್ರಿ ಯೋಗಿ ಅವರು ಅವಘಡದ ಬಗ್ಗೆ ಗಮನಹರಿಸಿದ್ದು, ತಕ್ಷಣ ಸ್ಥಳಕ್ಕೆ ಆಗಮಿಸಿ ಪರಿಹಾರ ಕಾರ್ಯವನ್ನು ವೇಗಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾಡಳಿತ ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ಆಗಮಿಸಿ ಪರಿಹಾರ ಕಾರ್ಯವನ್ನು ಚುರುಕುಗೊಳಿಸುವಂತೆ ಸಿಎಂ ಯೋಗಿ ಸೂಚಿಸಿದರು. ಇಲ್ಲಿ ಅಪಘಾತದ ಕುರಿತು ತನಿಖೆ ನಡೆಸಿ 12 ಗಂಟೆಯೊಳಗೆ ವರದಿ ಸಲ್ಲಿಸುವಂತೆ ಝಾನ್ಸಿ ಕಮಿಷನರ್ ಹಾಗೂ ಡಿಐಜಿಗೆ ಸಿಎಂ ಯೋಗಿ ಸೂಚನೆ ನೀಡಿದ್ದಾರೆ. ಶಾರ್ಟ್ ಸರ್ಕ್ಯೂಟ್‌ನಿಂದ ಐಸಿಯು ಒಳಗಿನ ಘಟಕದಲ್ಲಿ ರಾತ್ರಿ 10.30ರಿಂದ 10.45ರ ವೇಳೆಗೆ (ಶುಕ್ರವಾರ) ಬೆಂಕಿ ಕಾಣಿಸಿಕೊಂಡಿದೆ. ವರದಿಗಳ ಪ್ರಕಾರ, ಘಟನೆಯಲ್ಲಿ 10 ಶಿಶುಗಳು ಸಾವನ್ನಪ್ಪಿರುವ ಭಯವಿದೆ ಎಂದು ಝಾನ್ಸಿ ಪೊಲೀಸ್ ಅಧಿಕಾರಿ ಅವಿನಾಶ್‌ಕುಮಾರ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹೆಲಿಕಾಪ್ಟರ್‌ನಲ್ಲಿ ಸೈನಿಕರ ರತಿಕ್ರೀಡೆ!

ಅಮೆರಿಕಾ: ಅಮೆರಿಕಾ ಸೇನೆಯ ಇಬ್ಬರು ಯೋಧರು



ಅಪಾಚೆ ಹೆಲಿಕಾಪ್ಟರ್‌ನಲ್ಲಿ ಲೈಂಗಿಕ ಕ್ರಿಯೆ ನಡೆಸುತ್ತಿರುವಾಗ ಸಿಕ್ಕಿಬಿದ್ದಿದ್ದಾರೆ. ಹಾರುತ್ತಿದ್ದ ಹೆಲಿಕಾಪ್ಟರ್ ತೂಗಾಡುತ್ತಿರುವುದನ್ನು ಏರ್ ಬೇಸ್ ಸಿಬ್ಬಂದಿ ಗಮನಿಸಿದ್ದರು. ಬಳಿಕ ಯೋಧರನ್ನು ಸಂಪರ್ಕಿಸಿದಾಗ ಇಬ್ಬರೂ ಕುಡಿದ ಮತ್ತಿನಲ್ಲಿದ್ದರು ಎಂಬುದು ಬೆಳಕಿಗೆ ಬಂದಿದೆ. ಮಿರರ್ ವರದಿಯ ಪ್ರಕಾರ, ಇಬ್ಬರೂ ಯೋಧರು ಕುಡಿದ ಮತ್ತಿನಲ್ಲಿದ್ದರು. ನಿಯಮಿತ ಹಾರಾಟದ ವೇಳೆ ಹೆಲಿಕಾಪ್ಟರ್‌ನ ಕಾಕ್‌ಪಿಟ್‌ನಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದರು. ಈ ವೇಳೆ ಹೆಲಿಕಾಪ್ಟರ್ ಗಾಳಿಯಲ್ಲಿ ತೂರಾಡಲು ಶುರುವಾದಾಗ ಏರ್‌ಬೇಸ್ ಸಿಬ್ಬಂದಿ ಗಮನಕ್ಕೆ ಬಂದಿತು. ಹೆಲ್‌ಫೈರ್ ಕ್ಷಿಪಣಿಗಳು ಮತ್ತು 30 ಎಂಎಂ ಫಿರಂಗಿಗಳನ್ನು ಹೊಂದಿದ್ದ ಎರಡು ಆಸನಗಳ ಗನ್‌ಶಿಪ್‌ನ ಹಿಂಭಾಗದಲ್ಲಿ ಈ ಜೋಡಿಯನ್ನು ಕೂರಿಸಲಾಗಿತ್ತು ಎಂದು ಔಟ್‌ಲೆಟ್ ವರದಿ ಮಾಡಿದೆ. ಮಿಲಿಟರಿ ವಾಯುಯಾನ ಪ್ರಾಧಿಕಾರದ ವರದಿಯಲ್ಲಿ, 653 ಸ್ಕ್ವಾಡ್ರನ್‌ನ ಕಮಾಂಡ್ ಸರಪಳಿ ಮತ್ತು ಅವರ ಮೂಲ ಘಟಕ ಬರುವವರೆಗೆ ಅವರನ್ನು ಬಂಧನದಲ್ಲಿರಿಸಲಾಗಿತ್ತು ಎಂದು ಹೇಳಲಾಗಿದೆ. ಸೇನೆಗೆ ಸಂಬಂಧಿಸಿದ ಪ್ರಕರಣವಾಗಿರುವುದರಿಂದ ಯೋಧರ ಗುರುತು ಬಹಿರಂಗಪಡಿಸಲಾಗಿಲ್ಲ. ಆದರೆ ಯುಎಸ್‌ನ ನಾರ್ಥ್ ಈಸ್ಟ್ ಬೇಸ್‌ನ ಮಿಲಿಟರಿ ಅವರು ಎಂದು ಶಂಕಿಸಲಾಗಿದೆ.

ಎದುರು ನಿಂತು ಎದೆಗೆ ಗುರಿ ಇಟ್ಟಾಗ ಕೈ ಕೊಟ್ಟ ಗನ್; ಅದೃಷ್ಟವಶಾತ್ ಉಳಿಯಿತು ಟಿಎಂಸಿ ನಾಯಕನ ಪ್ರಾಣ

ಕೊಲ್ಕತ್ತಾ: ಕೊಲ್ಕತ್ತಾದ ಕಸ್ಬಾ ಪ್ರದೇಶದಲ್ಲಿ ಶೂಟರ್‌ನ ಗನ್ ಕೈ ಕೊಟ್ಟಿದ್ದರಿಂದ ಕೊಲೆ ಯತ್ನದಲ್ಲಿ ಟಿಎಂಸಿ ಕೌನ್ಸಿಲರ್ ಬದುಕುಳಿದರು. ತೃಣಮೂಲ ಕಾಂಗ್ರೆಸ್ ನಾಯಕನ ಮನೆಯ ಮುಂದೆ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾದಲ್ಲಿ ಕೊಲೆ ಯತ್ನದ ನಾಟಕೀಯ ದೃಶ್ಯಗಳು ಸೆರೆಯಾಗಿವೆ. ಕೊಲ್ಕತ್ತಾ ಮುನ್ಸಿಪಲ್ ಕಾರ್ಪೊರೇಶನ್‌ನ ವಾರ್ಡ್ 108ರ ಕೌನ್ಸಿಲರ್ ಸುಶಾಂತ ಘೋಷ್, ಅವರ ಮನೆ ಮುಂದೆ ಕುಳಿತಿದ್ದಾಗ ಇಬ್ಬರು ಶೂಟರ್‌ಗಳು ಸ್ಕೂಟರ್‌ನಲ್ಲಿ ಬಂದರು. ಅವರಲ್ಲಿ ಒಬ್ಬ ಗನ್ ತೆಗೆದು ಎರಡು ಬಾರಿ ಗುಂಡು ಹಾರಿಸಲು ಪ್ರಯತ್ನಿಸಿದ. ಆದರೆ ಬಂದೂಕು ಕೆಲಸ ಮಾಡಲಿಲ್ಲ, ಗುಂಡುಗಳು ಫೈರ್ ಆಗಲಿಲ್ಲ. ಗನ್ ಕೈ ಕೊಟ್ಟ ತಕ್ಷಣ ಸ್ಥಳದಿಂದ ಪರಾರಿಯಾಗಲು ಸಹಚರನ ಸ್ಕೂಟರ್ ಹತ್ತಲು ಪ್ರಯತ್ನಿಸಿದಾಗ ಶೂಟರ್ ಜಾರಿಬಿದ್ದ. ನಂತರ ಓಡಿ ಹೋಗಲು ಯತ್ನಿಸಿದಾಗ ಬೆನ್ನಟ್ಟಿ ಹಿಡಿದು ಥಳಿಸಲಾಗಿದೆ. ನನಗೆ ಯಾವುದೇ ಹಣ ನೀಡಿಲ್ಲ. ನನಗೆ ಕೇವಲ ಫೋಟೋವನ್ನು ನೀಡಲಾಯಿತು. ಕೊಲೆ ಮಾಡಲು ಹೇಳಿದರು ಎಂದು ಆರೋಪಿ ಹೇಳಿದ್ದಾನೆ. ಅವನನ್ನು ಪೊಲೀಸರಿಗೆ ಒಪ್ಪಿಸಲಾಯಿತು. ಕೌನ್ಸಿಲರ್‌ನನ್ನು ಕೊಲ್ಲಲು ಶೂಟರ್‌ಗಳನ್ನು ಬಿಹಾರದಿಂದ ನೇಮಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುಡಾನ್ ಸಂಘರ್ಷ: ನಿರಾಶ್ರಿತರ ಸಂಖ್ಯೆ ನಿರಂತರ ಹೆಚ್ಚಳ

ಪೋರ್ಟ್ ಸುಡಾನ್: ಸ್ಥಳಾಂತರಗೊಂಡಿರುವ ಸಾವಿರಾರು ಜನರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ನೆರವು ನೀಡಬೇಕೆಂದು ಸುಡಾನ್‌ನ ರೆಡ್ ಸೀ ಪ್ರಾಂತ್ಯದ ಸರ್ಕಾರವು ಅಂತಾರಾಷ್ಟ್ರೀಯ ಸಮುದಾಯ ಮತ್ತು ಮಾನವೀಯ ಸಂಸ್ಥೆಗಳಿಗೆ ಮನವಿ ಮಾಡಿದೆ. ಪ್ರಾಂತ್ಯದಲ್ಲಿ ಅತ್ಯಧಿಕ ಸಂಖ್ಯೆಯ ಸ್ಥಳಾಂತರಗೊಂಡ ಜನರಿದ್ದು, ಇವರ ಸಂಖ್ಯೆ ಇನ್ನೂ ಹೆಚ್ಚುತ್ತಿದೆ ಎಂದು ರೆಡ್ ಸೀ ಪ್ರಾಂತ್ಯದ ಸಮಾಜ ಕಲ್ಯಾಣ ಸಚಿವ ಇಲ್ಹಾಮ್ ಇಡ್ರಿಸ್ ಗಸ್ಮಲ್ಲಾ ಹೇಳಿದರು. ಇಷ್ಟೊಂದು ದೊಡ್ಡ ಸಂಖ್ಯೆಯ ಜನರಿಗೆ ನಾವು ಸಾಧ್ಯವಿರುವ ಎಲ್ಲ ಸಹಾಯ ಮಾಡುತ್ತೇವೆ. ಆದರೆ, ಅವರಿಗೆ ಅಗತ್ಯ ಇರುವುದೆಲ್ಲವನ್ನೂ ನೀಡಲು ಸಾಧ್ಯವಾಗುತ್ತಿಲ್ಲ. ಈ ಕೊರತೆ ನೀಗಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಸ್ಥಳಾಂತರಗೊಂಡವರಿಗೆ ಆಶ್ರಯ ಸಾಮಗ್ರಿಗಳು, ವೈದ್ಯಕೀಯ ಸರಬರಾಜು ಮತ್ತು ಪರಿಸರ ನೈರ್ಮಲ್ಯ ಸಂಪನ್ಮೂಲಗಳ ತುರ್ತು ಅಗತ್ಯ ಒತ್ತಿ ಹೇಳಿದ ಗಸ್ಮಲ್ಲಾ ಅಂತಾರಾಷ್ಟ್ರೀಯ ಸಹಾಯಕ್ಕಾಗಿ ಮನವಿ ಮಾಡಿದ್ದಾರೆ. ಟೆಂಟ್‌ಗಳ ಕೊರತೆ ತೀವ್ರವಾಗಿದೆ ಮತ್ತು ರೆಡ್ ಸೀ ಪ್ರಾಂತ್ಯದಲ್ಲಿ ಇಷ್ಟರಲ್ಲೇ ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ, ನೈರ್ಮಲ್ಯ ಮತ್ತು ರೋಗ ನಿಯಂತ್ರಣಕ್ಕೆ ಅಗತ್ಯ ವಸ್ತುಗಳ ಪೂರೈಕೆಗಳ ಜೊತೆಗೆ ಜ್ವರದಂಥ ಸೀಸನಲ್ ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ನಮಗೆ ತುರ್ತಾಗಿ ಔಷಧಗಳ ಅಗತ್ಯವಿದೆ ಎಂದು ಹೇಳಿದರು.

ಮೈಸೂರು ಮಿತ್ರ ಭಾನುವಾರ 17 ನವೆಂಬರ್ 2024

ಕೊಡಗು ಚೆಸ್ಕಾಂನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

ಇಂಧನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ



ಇಂಧನ ಸಚಿವ ಕೆ.ಜೆ.ಜಾರ್ಜ್ ಶನಿವಾರ ಮಡಿಕೇರಿಯಲ್ಲಿ ವಿದ್ಯುತ್ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮಡಿಕೇರಿ,ನ.16– ಕೊಡಗು ಚೆಸ್ಕಾಂನಲ್ಲಿ ಖಾಲಿ ಇರುವ ಅಧಿಕಾರಿಗಳು ಹಾಗೂ ಲೈನ್ ಮೆನ್‌ಗಳ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೊಡಗಿನಲ್ಲಿ ಖಾಲಿ ಇರುವ ಲೈನ್ ಮೆನ್‌ಗಳ ಹುದ್ದೆ ಭರ್ತಿ ಮಾಡುವ ಸಂದರ್ಭ ರಾಜ್ಯದ ವಿವಿಧ ಭಾಗಗಳಿಂದ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಆ ಬಳಿಕ ಕೆಲವೇ ವರ್ಷಗಳಲ್ಲಿ ಅಧಿಕಾರಿಗಳ ಸಹಿತ ಲೈನ್‌ಮೆನ್‌ಗಳು ವರ್ಗಾವಣೆ ಪಡೆದು ಬೇರೆಡೆಗಳಿಗೆ ತೆರಳುತ್ತಾರೆ. ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ರಾಮೀಣ ಭಾಗದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೂಡ ಕ್ರಮ ವಹಿಸಲಾಗುತ್ತದೆ. ಸಂಪರ್ಕ ಕಲ್ಪಿಸಲು ಸಾಧ್ಯವಾಗದ ಮನೆಗಳಿಗೆ ಸೋಲಾರ್ ದೀಪದ ವ್ಯವಸ್ಥೆ ಮಾಡಲಾಗುವುದು. ಈ ಕುರಿತು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಕಾಫಿ ಬೆಳೆಗಾರರಿಗೆ 10 ಹೆಚ್.ಪಿ. ಮೋಟಾರ್ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಸಂಬಂಧ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ಜಿಲ್ಲೆಯ ಶಾಸಕರುಗಳ ಬೇಡಿಕೆಗೆ ಅನುಗುಣವಾಗಿ ಕೆಲವೆಡೆ ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೂ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವ ಜಾರ್ಜ್ ನುಡಿದರು.

ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ ಹುದಿಕೇರಿ, ಮೂರ್ನಾಡು, ಬಾಳೆಲೆ ಸಿದ್ದಾಪುರದಲ್ಲಿ ತಲಾ ಒಂದೊಂದು 66/11 ಕೆವಿ ವಿದ್ಯುತ್ ಉಪ ಕೇಂದ್ರಗಳ ನಿರ್ಮಾಣಕ್ಕೆ 112 ಕೋಟಿ ರೂಗಳ ಟೆಂಡರ್ ಕರೆಯಲಾಗಿದೆ. ಕಾಟಕೇರಿಯಲ್ಲಿ ಒಂದು ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಜಿಲ್ಲಾಧಿಕಾರಿಗಳು ಜಾಗ ಗುರುತಿಸಿದ್ದಾರೆ. ಮೂರ್ನಾಡು ಹಾಗೂ ಮರಗೋಡಿನಲ್ಲೂ ಖಾಸಗಿಯಾಗಿ ಜಾಗ ಖರೀದಿಸಿ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗಿದೆ. ಸಬ್ ಸ್ಟೇಷನ್‌ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಗತವಾದರೆ ಕೊಡಗು ಜಿಲ್ಲೆಗೆ ವಿದ್ಯುತ್ ಸಮಸ್ಯೆ ತಲೆದೋರುವುದಿಲ್ಲ ಎಂದರು.

ಸಂಪಾಜೆಯಿಂದ ಭಾಗಮಂಡಲಕ್ಕೆ ನೂತನವಾಗಿ 66 ಕೆವಿ ವಿದ್ಯುತ್ ಮಾರ್ಗ ಅಳವಡಿಸುವ ಸಂಬಂಧ ಅರಣ್ಯ ಇಲಾಖೆಯ ಕಾನೂನು ತೊಡಕುಗಳಿವೆ. ವಿದ್ಯುತ್ ಲೈನ್ ಅರಣ್ಯ ಪ್ರದೇಶದ ಮೂಲಕ ಹಾದು ಹೋಗಲಿರುವ ಕಾರಣ ಅರಣ್ಯ ಇಲಾಖೆ ಅನುಮತಿ ಸಬೇಕಾಗಿದೆ. ಈ ನಿಟ್ಟಿನಲ್ಲೂ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. ಜಿಲ್ಲೆಯಲ್ಲಿ ವಿದ್ಯುತ್ ಉಪಕೇಂದ್ರಗಳ ನಿರ್ಮಾಣ, ಲೈನ್‌ಗಳ ಬದಲಾವಣೆ, ಲೈನ್‌ಗಳ ಸಾಮರ್ಥ್ಯ ಹೆಚ್ಚಳ, ನಿರ್ವಹಣೆ, ಕೆಲವೆಡೆ ಯು.ಜಿ ಕೇಬಲ್‌ಗಳ ಅಳವಡಿಕೆ ಮತ್ತಿತ್ತರ ಕಾಮಗಾರಿಗಳಿಗೆ ಒಟ್ಟು 208 ಕೋಟಿ ರೂ.ಗಳಿಗೆ ಅನುಮೋದನೆ ದೊರೆತಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿಕ್ಷೇತ್ರ ಶಾಸಕ ಡಾ.ಮಂತರ್ ಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜಾ ಉತ್ತಪ್ಪ ಡಿಸಿ ವೆಂಕಟ್ ರಾಜಾ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮತ್ತಿತ್ತರರು ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ 13 ಉಪ ಕೇಂದ್ರಗಳ ಸ್ಥಾಪನೆ

ಮಡಿಕೇರಿ ನ.16– ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಇಂಧನ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವರು ಮಾತನಾಡಿದರು. ವಿವಿಧ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ 208 ಕೋಟಿ ರೂ. ವಿನಿಯೋಗ ಮಾಡಲಾಗುತ್ತದೆ ಎಂದರು.

ಸೋಮವಾರಪೇಟೆ, ಮಾದಾಪುರ, ಮೂರ್ನಾಡು, ಹುದಿಕೇರಿ, ಬಾಳೆಲೆ, ಸಿದ್ದಾಪುರ, ಕೂಡಿಗೆ, ಕೋಪಟ್ಟಿ, ಸಂಪಾಜೆ, ಕೊಡ್ಲಿಪೇಟೆ, ಕಾಟಕೇರಿ, ಕಳತ್ಮಾಡು, ಮರುಗೋಡು ಕೇಂದ್ರಗಳಲ್ಲಿ ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಮುಂದಾಗಲಾಗಿದೆ. ಆ ನಿಟ್ಟಿಲ್ಲಿ ಈಗಾಗಲೇ ಹಲವು ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಟೆಂಡರ್ ಆಹ್ವಾನಿಸಲಾಗಿದೆ ಎಂದರು.

ಜಿಲ್ಲೆಯ ಹಾಡಿಗಳು ಸೇರಿದಂತೆ ಎಲ್ಲಾ ಕುಗ್ರಾಮಗಳಿಗೂ ಸಹ ವಿದ್ಯುತ್ ಸಂಪರ್ಕ ಕಲ್ಪಿಸಲು ಪ್ರಯತ್ನಿಸಲಾಗಿದೆ. ಆ ನಿಟ್ಟಿನಲ್ಲಿ ಸೆಸ್ಕ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯ ನಿರ್ವಹಿಸುವಂತೆ ಸಚಿವರು ಸೂಚಿಸಿದರು.

ಸರ್ಕಾರ ವಿವಿಧ ಕಡೆಗಳಲ್ಲಿ 6 ಲಕ್ಷಕ್ಕೂ ಹೆಚ್ಚು ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಲು ಮುಂದಾಗಿದೆ. ವಿದ್ಯುತ್ ಉಪ ಕೇಂದ್ರಗಳು ಎಲ್ಲೆಲ್ಲಿ ಅಗತ್ಯವಿದೆ. ಅಂತಹ ಕಡೆಗಳಲ್ಲಿ ವಿದ್ಯುತ್ ಉಪ ಕೇಂದ್ರ ನಿರ್ಮಾಣಕ್ಕೆ ಮುಂದಾಗಲಾಗುವುದು. ಅಕ್ರಮ ಸಕ್ರಮ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದು. ರಾಜ್ಯದಲ್ಲಿ ಅಗತ್ಯವಿರುವ ಕಡೆಗಳಲ್ಲಿ ಸೋಲಾರ್ ಬಳಕೆಗೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ ಎಂದರು.

ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಮಾತನಾಡಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹುದಿಕೇರಿ, ಸಿದ್ದಾಪುರ, ಬಾಳೆಲೆಯಲ್ಲಿ ವಿದ್ಯುತ್ ಉಪ ಕೇಂದ್ರ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿ ಸದ್ಯದಲ್ಲೇ ಆರಂಭವಾಗಲಿದೆ ಎಂದರು. ಹಾಗೆಯೇ ಸಂಪಾಜೆ, ಭಾಗಮಂಡಲ ಭಾಗದಲ್ಲಿಯೂ ಸಹ ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು ಮುಂದಾಗಲಾಗಿದೆ ಎಂದರು.

ತ್ರಿವೇಣಿ ಸಂಗಮದಲ್ಲಿ ಕಾವೇರಿ ತಾಯಿಗೆ ಆರತಿ



ತ್ರಿವೇಣಿ ಸಂಗಮದಲ್ಲಿ ಭಜನೆ, ವೇದಘೋಷಗಳೊಂದಿಗೆ ಕಾವೇರಿ ತಾಯಿಗೆ ಆರತಿ ನಡೆಯಿತು.

ಮಡಿಕೇರಿ,ನ.16– ವಿಶ್ವ ಹಿಂದೂ ಪರಿಷತ್ ವತಿಯಿಂದ ಭಾಗಮಂಡಲದ ಕಾವೇರಿ, ಕನ್ನಿಕೆ ಹಾಗೂ ಸುಜ್ಯೋತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಭಜನೆ, ವೇದಘೋಷಗಳೊಂದಿಗೆ ಕಾವೇರಿ ತಾಯಿಗೆ ಆರತಿ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಹುಬ್ಬಳ್ಳಿಯ ಜೇಷ್ಠ ಪ್ರಚಾರಕ ಸು.ರಾಮಣ್ಣ, ಪವಿತ್ರ ದೀಪೋತ್ಸವದ ಸಂದರ್ಭದಲ್ಲಿ ಕಾವೇರಿ ಮಾತೆ ನಮ್ಮೆಲ್ಲರ ಅಂತರಂಗದಲ್ಲಿ ಭಾರತೀಯತೆಯನ್ನು ಬೆಳೆಗಿಸಲಿ. ಹಿಂದುತ್ವದ ಬೆಳಕು ಎಂದು ಆರದಿರಲಿ ಎಂದು ಹೇಳಿದರು. ಈ ಸಂದರ್ಭ ದಕ್ಷಿಣ ಪ್ರಾಂತ್ಯ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್, ವಿಶ್ವ ಹಿಂದೂ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮತ್ತೆ ಕಾಡಾನೆಗಳ ದಾಳಿ: ಭತ್ತ, ಕಾಫಿ ಬೆಳೆ ನಾಶ



ಭತ್ತದ ಗದ್ದೆಯನ್ನು ಕಾಡಾನೆಗಳು ನಾಶಪಡಿಸಿರುವುದು.

ಮಡಿಕೇರಿ,ನ.16– ಚೆಯ್ಯಂಡಾಣೆ ಬಳಿಯ ನರಿಯಂದಡ ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಆರಂಭವಾಗಿದೆ. ಗ್ರಾಮದ ಪೊಕ್ಕುಳಂಡ್ರ ಈರಪ್ಪ ಎಂಬವರಿಗೆ ಸೇರಿದ ಪೈರು ಭರಿತ ಭತ್ತದ ಗದ್ದೆಯನ್ನು ಕಾಡಾನೆಗಳ ಹಿಂಡು ತುಳಿದು ನಾಶ ಪಡಿಸಿವೆ. ಗ್ರಾಮದ ಸದಾ ಎಂಬವರ ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ಕಾಫಿ ಹಾಗೂ ಮತ್ತಿತ್ತರ ಫಸಲು ಭರಿತ ಕೃಷಿ ಗಿಡಗಳನ್ನು ತುಳಿದು ನಾಶಪಡಿಸಿದ್ದು ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.

ಈ ವ್ಯಾಪ್ತಿಯಲ್ಲಿ ಬೆರಳೆಣಿಕೆಯ ರೈತರು ಮಾತ್ರ ಭತ್ತದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಇದೀಗ ಕಾಡಾನೆಗಳ ಹಿಂಡು ಭತ್ತದ ಬೆಳೆಯನ್ನು ನಾಶಪಡಿಸುತ್ತಿರುವುದರಿಂದ ಭತ್ತ ಬೆಳೆಯಲು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಅರಣ್ಯ ಇಲಾಖೆ ಕ್ರಮ ಕೈಗೊಂಡು ಗ್ರಾಮಕ್ಕೆ ಕಾಡಾನೆ ನುಸುಳದಂತೆ ಕ್ರಮ ಕೈಗೊಳ್ಳಬೇಕು. ನಷ್ಟ ಅನುಭವಿಸಿದ ತೋಟದ ಮಾಲೀಕರಿಗೆ ಪರಿಹಾರ ಒದಗಿಸಬೇಕು, ಪ್ರಾಣ ಹಾನಿ ಸಂಭವಿಸುವ ಮುನ್ನ ಇಲಾಖೆ ಎಚ್ಚೆತ್ತು ಕೊಳ್ಳಬೇಕೆಂಬುದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಎಪಿಸಿಎಂಎಸ್‌ಗೆ ಅಧ್ಯಕ್ಷರ ಆಯ್ಕೆ



ವಿರಾಜಪೇಟೆ, ನ.16– ವಿರಾಜಪೇಟೆ ಎ.ಪಿ.ಸಿ.ಎಂ.ಎಸ್ ಸಂಸ್ಥೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕುಂಬೆರ ಎ.ಮನು ಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಯ ಮಡಿಕೇರಿ ಪಿ.ಆಶಾ ಭಾಗವಹಿಸಿದ್ದರು.

ಎಪಿಸಿಎಂಎಸ್ ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ನಿರ್ದೇಶಕರುಗಳಾದ ಪಟ್ಟಡ ಸಿ.ರಾಮಚಂದ್ರ, ಮಾಳೇಟಿರ ಬಿ.ದೇವಯ್ಯ, ಪುಟ್ಟಿಚಂಡ ಟಿ.ನರೇಂದ್ರ, ಬಿ.ಎಲ್. ರಾಮಚಂದ್ರ, ಕೆ.ಬಿ.ಪ್ರಸಾದ್ ಕುಮಾರ್, ಬೊವ್ವೆರಿಯಂಡ ಆಶಾ ಸುಬ್ಬಯ್ಯ, ಕುಂಞೀರ ಪಿ.ಗಂಗಮ್ಮ, ಪೂಳಂಡ ಪಿ.ಪೆಮ್ಮಯ್ಯ, ಹಾಗೂ ವ್ಯವಸ್ಥಾಪಕರಾದ ಎಂ.ಎಸ್.ವಿಶ್ವಾನಾಥ್ ಅವರುಗಳು ಹಾಜರಿದ್ದರು.

ಮಿನಿ ಒಲಿಂಪಿಕ್‌ಗೆ ಕೊಡಗಿನ ವಿದ್ಯಾರ್ಥಿಗಳ ಆಯ್ಕೆ

ಮಡಿಕೇರಿ,ನ.16– ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಟೆಕ್ವಾಂಡೋ ಸ್ಪರ್ಧೆಯಲ್ಲಿ ಪದಕ ಗೆದ್ದ ಕೊಡಗು ಮರ್ಕರ ಟೆಕ್ವಾಂಡೋ ಕ್ಲಬ್‌ನ ವಿದ್ಯಾರ್ಥಿಗಳು ಮಿನಿ ಒಲಿಂಪಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ನಗರದ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ ಮಿಶಾಲ್, ಸಂತ ಜೊಸೆಫರ ಶಾಲೆಯ ವಿರಾಟ್, ವಿರಾಂಜನ್, ಅನಿಯ ಪರ್ವಿನ್ ಹಾಗೂ ಸಂತ ಮೈಕಲರ ಶಾಲೆಯ ಆರೂಷ್ ಪರ್ವಿನ್, ಕೊಡಗು ವಿದ್ಯಾಲಯ ಶಾಲೆಯ ಪಾವನಿ, ಹರ್ಷ್ ಕರುಂಬಯ್ಯ, ಹೋಂ ಸ್ಕೂಲ್‌ನ ಅನನ್ಯ ಆಯ್ಕೆಯಾಗಿದ್ದಾರೆ.



ಮಿನಿ ಒಲಿಂಪಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಕೊಡವ ವಿದ್ಯಾರ್ಥಿಗಳು.

ಇವರು ಕರ್ನಾಟಕ ಒಲಿಂಪಿಕ್ ಸಂಸ್ಥೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಬೆಂಗಳೂರಿನ ಕಂಠೀರವ ಒಳಂಗಾಣ ಕ್ರೀಡಾಂಗಣದಲ್ಲಿ ನ.20ರವರೆಗೆ ನಡೆಯಲಿರುವ ಮಿನಿ ಒಲಿಂಪಿಕ್ ಕ್ರೀಡಾಕೂಟದಲ್ಲಿ ಕೊಡಗನ್ನು ಪ್ರತಿನಿಧಿಸಲಿದ್ದಾರೆ. ಕ್ರೀಡಾಕೂಟವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಸೇರಿದಂತೆ ಇತರ ಸಚಿವರು ಪಾಲ್ಗೊಳ್ಳಲಿದ್ದಾರೆ. ಇವರಿಗೆ ಕರ್ನಾಟಕ ಸರ್ಕಾರದ ಎಲ್ಲಾ ಕ್ರೀಡಾ ಸೌಲಭ್ಯಗಳು ದೊರೆಯಲಿದೆ ಎಂದು ಟೆಕ್ವಾಂಡೋ ಕ್ಲಬ್‌ನ ಮಾಸ್ಟರ್ ಕುಶಾಲ್ ಕುಮಾರ್ ತಿಳಿಸಿದ್ದಾರೆ.


ಕೊಡಗು ಜಿಲ್ಲಾ ನಿವೃತ್ತ ಉದ್ಯೋಗಿಗಳ ಸಂಘದ ವಾರ್ಷಿಕ ಮಹಾಸಭೆ

ವಿರಾಜಪೇಟೆ, ನ.16– ಕೊಡಗು ಜಿಲ್ಲಾ ನಿವೃತ ಉದ್ಯೋಗಸ್ಥರ ಸಂಘದ ವಾರ್ಷಿಕ ಮಹಾಸಭೆ ನ.18ರಂದು ಸೋಮವಾರ 10.30 ಗಂಟೆಗೆ ವಿರಾಜಪೇಟೆ ಗಣಪತಿ ದೇವಾಲಯದ ಹಿಂಭಾಗದಲ್ಲಿರುವ ಸಂಘದ ಕಟ್ಟಡದ ಸಭಾಗಂಣದಲ್ಲಿ ಸಂಘದ ಅಧ್ಯಕ್ಷ ಸಿ.ಎನ್.ವಿಶ್ವನಾಥ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶೇಷಚೇತನರಿಗೆ ವಸತಿ ಶಾಲೆಗಳಲ್ಲಿ ನೇರ ಪ್ರವೇಶಕ್ಕೆ ಅವಕಾಶ ಕಲ್ಪಿಸಿ

ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಸೂಚನೆ

ಚಾಮರಾಜನಗರ, ನ.16– ಸರ್ಕಾರಿ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆ ಇಲ್ಲದೇ ವಿಕಲಚೇತನರಿಗೆ ಶೇ.20 ರಿಂದ 25ರಷ್ಟು ನೇರವಾಗಿ ಪ್ರವೇಶ ನೀಡಲು ಅವಕಾಶವಿದ್ದು, ಈ ಬಗ್ಗೆ ಅನುಷ್ಠಾನ ಮಾಡುವಂತೆ ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಅವರು ಸೂಚಿಸಿದರು.



ಚಾಮರಾಜನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಪ್ರಗತಿ ಪರಿಶೀಲನೆ ಮಾಡಿದರು.

ನಗರದ ಜಿಲ್ಲಾ ಪಂಚಾಯತ್ ಕೆ.ಡಿ.ಪಿ ಸಭಾಂಗಣದಲ್ಲಿಂದು ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಅನುಷ್ಠಾನ ಮತ್ತು ವಿಕಲಚೇತನರ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು.

ವಿಶೇಷಚೇತನರಿಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸಬೇಕಿದೆ. ಸರ್ಕಾರಿ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆ ನಡೆಸದೆ ವಿಶೇಷಚೇತನರಿಗೆ ಶೇ.20 ರಿಂದ 25ರಷ್ಟು ನೇರವಾಗಿ ಸೀಟುಗಳನ್ನು ನೀಡಬೇಕು. ಇದರಿಂದ ವಿಶೇಷ ಚೇತನರ ಅನುಕೂಲವಾಗಲಿದೆ. ಈ ಮೂಲಕ ವ್ಯಾಸಂಗಕ್ಕೆ ಉತ್ತೇಜನ ನೀಡಬೇಕಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಕ್ರಮವಹಿಸಬೇಕೆಂದು ತಿಳಿಸಿದರು.

ಶಾಲೆಗಳಲ್ಲಿ ಅಂಧ ಮಕ್ಕಳಿಗೆ ಬ್ರೈಲ್ ಇನ್ನಿತರ ಅನುಕೂಲವಾಗುವ ವ್ಯವಸ್ಥೆಗಳನ್ನು ಜಾರಿಗೆ ತರಬೇಕು. ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರನ್ನು ಅಂಧ ವಿದ್ಯಾರ್ಥಿಗಳ ಬೋಧನೆಗೆ ನಿಯೋಜಿಸಬೇಕು. ಅಂಧ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿಯೇ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಶಿಕ್ಷಣದ ನೈಜ ಉದ್ದೇಶ ಈಡೇರಿದಂತಾಗುವುದಿಲ್ಲ ಎಂದರು.

ಆಯುಕ್ತ ದಾಸ್ ಸೂರ್ಯವಂಶಿ ಅವರು ಆರೋಗ್ಯ ಇಲಾಖೆಯಿಂದ ವಿಶೇಷಚೇತನರಿಗೆ ಒದಗಿಸುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದ ವೇಳೆ ಅಂಗವಿಕಲತೆ ಹೋಗಲಾಡಿಸುವಲ್ಲಿ ಆರೋಗ್ಯ ಇಲಾಖೆಯ ಪಾತ್ರ ತುಂಬಾ ಮಹತ್ವದ್ದಾಗಿದೆ. ತಪಾಸಣೆ ಆರಂಭದಲ್ಲಿಯೇ ಅನಾರೋಗ್ಯದ ತೊಂದರೆಗಳನ್ನು ಪತ್ತೆಹಚ್ಚಿ ಸರಿಯಾದ ಸಮಯಕ್ಕೆ ಔಷದೋಪಚಾರ ಚಿಕಿತ್ಸೆ ನೀಡುವುದು ಮುಖ್ಯವಾಗುತ್ತದೆ. ವಿಶೇಷಚೇತನರ ಆರೋಗ್ಯದ ಬಗ್ಗೆ ಆರೋಗ್ಯ ಅಧಿಕಾರಿಗಳು ಹೆಚ್ಚಿನ ಕಾಳಜಿ ಹೊಂದಬೇಕು ಎಂದು ತಿಳಿಸಿದರು.

ಇನ್ನಿತರ ಇಲಾಖೆಗಳು ವಿಶೇಷಚೇತನರಿಗೆ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದ ಆಯುಕ್ತರು ಎಲ್ಲ ಇಲಾಖೆಗಳು ವಿಶೇಷಚೇತನರಿಗೆ ಇರುವ ಅವಕಾಶಗಳನ್ನು ಬಳಸಿಕೊಳ್ಳಲು ಕಾರ್ಯನಿರ್ವಹಿಸಬೇಕು. ಕಷ್ಟಕರ ಜೀವನ ನಡೆಸುವ ವಿಶೇಷಚೇತನರ ಕೆಲಸಗಳನ್ನು ಸಕಾಲಕ್ಕೆ ಮಾಡಿಕೊಡಬೇಕು. ಯೋಜನೆಗಳನ್ನು ಪರಿಣಾಮಕಾರಿಯಾಗಿ ತಲುಪಿಸಿದರೆ ಅನುಕೂಲವಾಗಲಿದೆ. ಬೇರೆ ಜಿಲ್ಲೆಗಳಿಗೆ ಚಾಮರಾಜನಗರ ಮಾದರಿಯಾಗಬೇಕು. ವಿಶೇಷಚೇತನರಿಗೆ ಮೀಸಲಾಗಿರುವ ಅನುದಾನ ಹೆಚ್ಚಿನ ಪ್ರಮಾಣದಲ್ಲಿ ವಿನಿಯೋಗವಾಗಬೇಕು ಎಂದರು.

ಕಟ್ಟಡ ನಿರ್ಮಿಸುವಾಗ ಇಲಾಖೆಗಳು ವಿಕಲಚೇತನ ಸ್ನೇಹಿ ಸೌಕರ್ಯಗಳನ್ನು ಇರುವಂತೆ ನೋಡಿಕೊಳ್ಳಬೇಕು. ರ್‍ಯಾಂಪ್ ಸೇರಿದಂತೆ ವಿಶೇಷಚೇತನರು ಪ್ರವೇಶಿಸಲು ಅನುವು ಮಾಡಿಕೊಡುವ ಇನ್ನಿತರ ಆಧುನಿಕ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಕೆಎಸ್ ಆರ್‌ಟಿಸಿ ಸೇವೆಗಳಲ್ಲಿ ವಿಶೇಷಚೇತನರಿಗೆ ನೆರವಾಗುವ ಸೌಲಭ್ಯಗಳು ಇರಬೇಕು ಎಂದು ಆಯುಕ್ತರಾದ ದಾಸ್ ಸೂರ್ಯವಂಶಿ ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಅಂಧ ಮಕ್ಕಳ ಶಿಕ್ಷಣಕ್ಕಾಗಿಯೇ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಲಿದ್ದೇವೆ. ಮೂರು ತಿಂಗಳ ತರಬೇತಿ ಶಿಬಿರಗಳನ್ನು ಏರ್ಪಾಡು ಮಾಡಲಾಗುವುದು. ಜಿಪಂ ಸಿಇಓ ಅಧಿಕಾರಿಗಳೊಂದಿಗೆ ಈ ಸಂಬಂಧ ವಿಸ್ತೃತವಾಗಿ ಚರ್ಚೆ ನಡೆಸಿ ಶಿಕ್ಷಣದ ಸುಧಾರಣೆಗೆ ಆದ್ಯ ಗಮನ ಹರಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಮೋನಾ ರೋತ್, ಉಪಕಾರ್ಯದರ್ಶಿ ಪಿ.ಲಕ್ಷ್ಮಿ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

‘ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ’

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಚಾಮರಾಜನಗರ ದಲ್ಲಿ ರಾಜ್ಯ ಅಂಗವಿಕಲರ ಅಧಿನಿಯಮ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಅವರಿಗೆ ಜಿಲ್ಲಾ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.



ಚಾಮರಾಜನಗರ: ರಾಜ್ಯಾದ್ಯಂತ ಅಂಗವಿಕಲರಿಗೆ ಉಚಿತ ಪಾಸ್ ವಿತರಿಸಬೇಕು, ಮಾಸಾಶನವನ್ನು 5 ಸಾವಿರಕ್ಕೇರಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದಲ್ಲಿ ಶನಿವಾರ ರಾಜ್ಯ ಅಂಗವಿಕಲರ ಅಧಿನಿಯಮ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಅವರಿಗೆ ಜಿಲ್ಲಾ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಅಂಗವಿಕಲರ ಕಲ್ಯಾಣ ಇಲಾಖೆಗೆ ಪೂರ್ಣ ಪ್ರಮಾಣದ ಜಿಲ್ಲಾಮಟ್ಟದ ಅಧಿಕಾರಿ ನೇಮಕಕ್ಕೆ ಕ್ರಮಕೈಗೊಳ್ಳಬೇಕು, ಅಂಗವಿಕಲರಿಗಾಗಿ ಮೀಸಲಿಟ್ಟಿರುವ ಹಣದ ದುರುಪಯೋಗ ತಡೆಯಬೇಕು, ನಕಲಿ ಅಂಗವಿಕಲರ ಸೃಷ್ಟಿಗೆ ಕಾರಣವಾಗಿರುವ ವೈದ್ಯಕೀಯ ಮಂಡಳಿ ವಿರುದ್ಧ ಕ್ರಮಕ್ಕೆ ಸರ್ಕಾರದ ಮೇಲೆ ಒತ್ತಡತರಬೇಕು, ಮೂರು ತಿಂಗಳಿಗೊಮ್ಮೆ ಅಂಗವಿಕಲರ ಕುಂದು–ಕೊರತೆ ಸಭೆ ನಡೆಸಲು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕು, ಪುನರ್ವಸತಿ ಕಾರ್ಯಕರ್ತರಿಗೆ ಕನಿಷ್ಠ ವೇತನ ನಿಗದಿ ಮಾಡುವಂತೆ ಒತ್ತಾಯಿಸಿದ್ದಾರೆ,

ಈ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ರಮೇಶ್, ರಾಜ್ಯ ಉಪಾಧ್ಯಕ್ಷ ವಿ.ಕುಮಾರ್, ತಾಲೂಕು ಅಧ್ಯಕ್ಷ ರೂಪೇಶ್, ಸದಸ್ಯರಾದ ರಘು, ಮಹದೇವಸ್ವಾಮಿ, ಸಿ.ಎಂ. ನಾಗರಾಜು, ನಾಗರಾಜು, ಕೊತ್ತಲವಾಡಿನವೀನ್, ರಾಮಣ್ಣ, ಸಿ.ಕೃಷ್ಣಮೂರ್ತಿ ಸೇರಿದಂತೆ ಇತರರು ಹಾಜರಿದ್ದರು.

ಭಿಕ್ಷೆ ಹಣದ ಆಸೆ ತೋರಿಸಿ ಮಗು ಅಪಹರಿಸಿದ ಭಿಕ್ಷುಕಿ

ಚಾಮರಾಜನಗರ, ನ.16–ಗೃಹಿಣಿಯ ವಿಶ್ವಾಸಗಳಿಸಿದ ಭಿಕ್ಷುಕಿ, ಆಕೆಯ ಮಗುವನ್ನು ಅಪಹರಿಸಿರುವ ಘಟನೆ ಚಾಮರಾಜನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ರಾಮನಗರ ಮೂಲದ ಅನಿತಾ(28) ಮಗು ಕಳೆದುಕೊಂಡವರಾಗಿದ್ದು, ಈಕೆ ಮನೆಯವರಿಗೆ ಹೇಳದೇ ತನ್ನ ಎರಡೂವರೆ ವರ್ಷದ ಹೆಣ್ಣು ಮಗುವಿನೊಂದಿಗೆ ಮೂರ್‍ನಾಲ್ಕು ದಿನದ ಹಿಂದೆ ಮಲೆಮಹದೇಶ್ವರ ಬೆಟ್ಟಕ್ಕೆ ತೆರಳಿದ್ದಾಳೆ. ಪ್ರಯಾಣದ ವೇಳೆ ಈಕೆಗೆ ಪರಿಚಯವಾದ ಭಿಕ್ಷುಕಿ, ಮಗುವನ್ನಿಟ್ಟುಕೊಂಡು ಭಿಕ್ಷೆ ಬೇಡಿದರೆ ಹಣ ಬರುತ್ತದೆ ಎಂದು ಆಸೆ ಹುಟ್ಟಿಸಿದ್ದಾಳೆ ಎನ್ನಲಾಗಿದೆ.

ಮಹದೇಶ್ವರಬೆಟ್ಟದ ಬಯಲು ರಂಗಮಂದಿರದ ಬಳಿ ಇವರಿಬ್ಬರೂ ವಾಸ್ತವ್ಯ ಹೂಡಿದ್ದು, ಅನಿತಾಳ ಮಗುವನ್ನು ಎತ್ತಿಕೊಂಡು ಭಿಕ್ಷುಕಿ ಮಹದೇಶ್ವರ ಬೆಟ್ಟದಲ್ಲಿ ಭಿಕ್ಷೆ ಬೇಡಿ ಬಂದ ನಂತರ ಅನಿತಾಳಿಗೂ ಸ್ವಲ್ಪ ಹಣ ನೀಡಿದ್ದಾಳೆ. ಕಳೆದ ಶುಕ್ರವಾರ ಮಹದೇಶ್ವರಬೆಟ್ಟದಿಂದ ನಂಜನಗೂಡಿಗೆ ಇಬ್ಬರೂ ಬಂದಿದ್ದು, ಅಲ್ಲಿನ ದೇವಸ್ಥಾನದ ಬಳಿ ಅನಿತಾಳನ್ನು ಕುಳ್ಳಿರಿಸಿ ಮಗುವಿನೊಂದಿಗೆ ಭಿಕ್ಷೆ ಬೇಡಿ ಬಂದ ಭಿಕ್ಷುಕಿ, ಅನಿತಾಳಿಗೆ ಸ್ವಲ್ಪ ಹಣವನ್ನು ನೀಡಿ, ಅಲ್ಲಿಂದ ಚಾಮರಾಜನಗರಕ್ಕೆ ಕರೆತಂದಿದ್ದಾಳೆ.



ಚಾಮರಾಜನಗರದಲ್ಲಿ ಮಗುವಿನೊಂದಿಗೆ ಭಿಕ್ಷೆ ಬೇಡುತ್ತಿರುವ ಭಿಕ್ಷುಕಿ.

ಚಾಮರಾಜನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಅನಿತಾಳನ್ನು ಕುಳ್ಳಿರಿಸಿ ಮಗುವಿನೊಂದಿಗೆ ತೆರಳಿದ ಭಿಕ್ಷುಕಿ, ಮತ್ತೆ ಬರಲೇ ಇಲ್ಲ. ಇದರಿಂದ ಆತಂಕಗೊಂಡ ಅನಿತಾ, ಚಾಮರಾಜನಗರ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾಳೆ.

ಚಾಮರಾಜನಗರದ ಬಸ್ ನಿಲ್ದಾಣ, ಚಾಮರಾಜೇಶ್ವರ ಉದ್ಯಾನವನದ ಮುಂಭಾಗದ ಮಳಿಗೆಗಳ ಬಳಿ ಮಗುವಿನೊಂದಿಗೆ ಭಿಕ್ಷುಕಿ ಭಿಕ್ಷೆ ಬೇಡುತ್ತಿರುವ ದೃಶ್ಯಗಳು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆಕೆಗಾಗಿ ಹುಡುಕಾಟ ನಡೆಸಿದ್ದಾರೆ.

ಸಮಾಜದಲ್ಲಿ ಹೆಣ್ಣಿಗೆ ಪ್ರೋತ್ಸಾಹ ನೀಡಿದರೆ ಉತ್ತಮ ಸಮಾಜ ನಿರ್ಮಾಣ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ

ಚಾಮರಾಜನಗರ, ನ.16– ಹೆಣ್ಣು ಮಕ್ಕಳು ಸಮಾಜದ ಮುಖ್ಯ ವಾಹಿನಿಗೆ ಬರಲು ಹೆಚ್ಚಿನ ಅವಕಾಶಗಳಿದ್ದು, ಅವರಿಗೆ ಪ್ರೋತ್ಸಾಹ ನೀಡಿದರೆ, ಇನ್ನು ಹೆಚ್ಚಿನ ಸಾಧನೆ ಮಾಡಲಿದ್ದಾರೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಹೊಂಡರಬಾಳು ಸಮೀಪದಲ್ಲಿರುವ ಅಮೃತಭೂಮಿಯಲ್ಲಿ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ 2024–25ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಎಲ್ಲಾ ರಂಗದಲ್ಲಿಯೂ ಪ್ರಬುದ್ಧತೆಯನ್ನು ಹೊಂದುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿಯೇ ಪ್ರಮುಖ ಹುದ್ದೆಗಳಲ್ಲಿ ಮಹಿಳಾ ಅಧಿಕಾರಿಗಳೇ ಇದ್ದಾರೆ. ಹೀಗಾಗಿ ಅವರಿಗೆ ಇನ್ನು ಹೆಚ್ಚಿನ ಉತ್ತೇಜನ ನೀಡಿದರೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಿದೆ ಎಂದರು.

ಹೆಣ್ಣು ಭ್ರೂಣ ಹತ್ಯೆಗಳನ್ನು ತಡೆಯಲು ಎಲ್ಲರು ಜಾಗೃತರಾಗಬೇಕಾಗಿದೆ. ಹೆಣ್ಣು ಮಗುವನ್ನು ಭ್ರೂಣದಲ್ಲಿಯೇ ಚಿವುಡುವುದು ಅಮಾನವೀಯ ಕೃತ್ಯವಾಗಿದೆ. ಕೆಲಸದಲ್ಲಿ ನಿರತರಾದವರಿಗೆ ಉಗ್ರ ಶಿಕ್ಷೆಯಾಗಬೇಕು. ಹೆಣ್ಣು ಮಗು ಹುಟ್ಟಿದರೆ ಅದೃಷ್ಟ ಎಂದು ಭಾವಿಸಬೇಕು ಎಂದರು.



ಚಾಮರಾಜನಗರ ತಾಲೂಕಿನ ಹೊಂಡರಬಾಳು ಸಮೀಪದಲ್ಲಿರುವ ಅಮೃತಭೂಮಿಯಲ್ಲಿ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜು ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್, ಪರೀಕ್ಷೆಗಳನ್ನು ಬರೆದು ಅಂಕ ಗಳಿಸುವುದಷ್ಟೇ ಶಿಕ್ಷಣವಲ್ಲ. ಪರಿಪೂರ್ಣ ಶಿಕ್ಷಣದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ. ಕಾಲೇಜು ಹಂತಗಳಲ್ಲಿ ಎನ್‌ಎಸ್‌ಎಸ್ ಶಿಬಿರಗಳು ಸೇವೆ ಮನೋಭಾವನೆಯನ್ನು ರೂಡಿಸುವ ಜೊತೆಗೆ ಮಾನವೀಯ ಗುಣಗಳನ್ನು ಬೆಳೆಸುತ್ತದೆ. ಪ್ರಬುದ್ಧತೆ ಬೆಳೆಯುತ್ತದೆ ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಪ್ರಸನ್ನ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಜ್ಯ ಕನಿಷ್ಠ ವೇತನ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಎಸ್‌ಪಿಕೆ ಉಮೇಶ್, ಪ್ರಾಂಶುಪಾಲ ದೇವರಾಜಮೂರ್ತಿ, ಮಂಡ್ಯ ಪಿಇಎಸ್ ಕಾಲೇಜಿನ ನೋಡಲ್ ಅಧಿಕಾರಿ ಕ್ಯಾತೆಗೌಡ ಶಿಬಿರದ ಕಾರ್ಯಕ್ರಮಾಧಿಕಾರಿ ಗಿರೀಶ್ ಹರವೆ, ಕುಮಾರಿ, ಯಶಸ್ವಿನಿ, ಕುಮಾರಿ, ಗಗನ, ಜಾನ್ಹವಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.16– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಚಾಮರಾಜನಗರ ಉಪವಿಭಾಗ ವ್ಯಾಪ್ತಿ ತುರ್ತು ಕಾಮಗಾರಿ ನಿಮಿತ್ತ ನ.17ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗಾಳಿಪುರ, ಸೋಮವಾರಪೇಟೆ, ವರದರಾಜಪುರ, ಸತ್ತಿ ರಸ್ತೆ, ಮಲ್ಲಯ್ಯನಪುರ, ಮೂಡ್ಲುಪುರ, ಯಡಬೆಟ್ಟ, ಕುವೆಂಪು ಬಡಾವಣೆ ಹಾಗೂ ಉತ್ತುವಳ್ಳಿ, ಎಡಪುರ, ಮೆಡಿಕಲ್ ಕಾಲೇಜ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ ಕೆ.ಪರಮೇಶ
ಮೊ.7795862281

ಭುವಿಯ 'ಕನಕ' ಕನಕದಾಸರು



ಈ ನೆಲದ ಬಯಲಲಿ ದೇವರು ವಾಸವಿಲ್ಲ, ದೇವತಾ ಮನುಷ್ಯರು ವಾಸವಾಗಿದ್ದಾರೆ. ಅಂತಹ ಶ್ರೇಷ್ಠ ಮನುಷತ್ವದ ಆದರ್ಶ ಪುರುಷರು ಸ್ಫೂರ್ತಿಯ ಎಳೆಯಲ್ಲಿ ಈ ಭುವಿಯಲ್ಲಿ ಆಗಾಗ ಜನಿಸುತ್ತಿರುತ್ತಾರೆ. ಈ ಬಗೆಯ ಬೆಳಕಿನ ದೀಪಗಳ ಕುರಿತು ಜಯಂತಿಗಳ ರೂಪದಲ್ಲಿ ಅವರು ಬದುಕಿದ ರೀತಿ-ನೀತಿಗಳು, ಕೈಗೊಂಡ ಕಾರ್ಯಗಳು, ಪ್ರಸ್ತುತಕ್ಕೆ ಅಳವಡಿಕೆಯಾಗಬೇಕಾದ ಮೌಲ್ಯಗಳ ಕುರಿತು ಮೆಲುಕು ಹಾಕುತ್ತಾ ಕಲಿಯುವ-ಕಲಿಸುವ ಬೋಧನೆಗಳು ನಮಗೆ ಹಿರಿಯ ಮಾರ್ಗದರ್ಶನವಾಗಿದೆ.

ನಮ್ಮ ನಾಡು ಸಂಸ್ಕೃತಿ, ಪರಂಪರೆ, ಸಿರಿವಂತಿಕೆಯ ರಸಬೀಡು. ಹಲವಾರು ಸಾಧು ಸಂತರು, ಮಹಾನ್ ಮಾನವತವಾದಿಗಳು ಜನಿಸಿದ ಪುಣ್ಯಭೂಮಿ. ಇಂತಹ ನಾಡಿನಲ್ಲಿ ಜನ್ಮ ಪಡೆದ ನಾವುಗಳೇ ಧನ್ಯರೆಂದೇ ಹೇಳಬೇಕು. ಬುದ್ಧ, ಬಸವ, ಗಾಂಧಿ, ಮಹಾವೀರ, ಕನಕದಾಸ, ಪುರಂದರದಾಸ, ಅಂಬೇಡ್ಕರ್, ವಾಲ್ಮೀಕಿ ಹೀಗೆ ಸಾಗುವ ಮಹಾನ್ ನಾಯಕರ ಆದರ್ಶ ಬದುಕು ಅವರನ್ನು ಮಹಾತ್ಮರನ್ನಾಗಿ ಮಾಡಿದೆ. ಇಲ್ಲಿ ಯಾರೇ ಹುಟ್ಟಿ ಬಂದರೂ ಮಾನವನಾಗಿ ಹುಟ್ಟಿ ಬರುವುದಿಲ್ಲ ಮಾನವರಾಗಲು ಹುಟ್ಟುವುದು ಎಂಬ ಕವಿ-ಕಿವಿಯ ಮಾತು ಇಲ್ಲಿ ಉಲ್ಲೇಖನೀಯ. ಸಮಾಜದಲ್ಲಿ ಮಾನವಧರ್ಮದ ಒಳಿತಿಗಾಗಿ ಅವತಾರವೆತ್ತಿ ಬಂದ ಈ ಪುಣ್ಯ ಪುರುಷರ ಸಾಮಾಜಿಕ ಕಳಕಳಿಯ, ನಿಸ್ವಾರ್ಥ ಸೇವೆಯಿಂದ ಪ್ರಗತಿ ಕಾರ್ಯಗಳು ಸಾಕಾರಗೊಳ್ಳುತ್ತವೋ ಆ ನಾಡು ಸಮೃದ್ಧವಾಗಿರುತ್ತದೆ ಎಂಬ ಮಾತಿನಲ್ಲಿ ಎಳ್ಳಷ್ಟು ಅನುಮಾನವಿಲ್ಲ. ಹೀಗೆ ಆಕಾರದಲ್ಲಿ ಸಾಕಾರಗೊಂಡ ವ್ಯಕ್ತಿಗಳ ವ್ಯಕ್ತಿತ್ವ ಅವರು ತಮ್ಮ ತನು-ಮನ ಪೂರ್ವಕವಾಗಿ ಸಮರ್ಪಿಸಿಕೊಂಡ ಭಾವ ನಮ್ಮನ್ನು ಚೇತೋಹಾರಿಗಳಾಗಿಸಿ ನಾವು ಕೂಡ ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲು ಪ್ರೇರಣೆ ನೀಡುತ್ತವೆ. ದಾಸ ಸಾಹಿತ್ಯದ ಸಂತ, ಕವಿವರ್ಯ ಕನಕದಾಸರು ಅಂತಹ ಮಹಾ ಪುರುಷರಲ್ಲಿ ಒಬ್ಬರು. ಕರ್ನಾಟಕದ ಧಾರವಾಡ ಜಿಲ್ಲೆಯ ಬಂಕಾಪುರದ ಬಳಿಯ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ಸುಪುತ್ರರಾಗಿ ಜನಿಸಿದ ಕನಕದಾಸರ ಮೂಲ ಹೆಸರು ತಿಮ್ಮಪ್ಪ. ಇವರ ಕಾಲ ಸುಮಾರು 1508-1606 ಎಂದು ವಿದ್ವಾಂಸರು ಗುರುತಿಸಿದ್ದಾರೆ. ಜನಿಸಿದ್ದು ಬಾಡವಾದರೂ ಓಡಾಡಿದ್ದು ವಿಜಯ ನಗರ, ಜೀವಿಸಿ ಬದುಕಿದ್ದು ಕಾಗಿನೆಲೆ. ತಿಮ್ಮಪ್ಪ, ವಿಜಯ ನಗರದ ಬಂಕಾಪುರದಲ್ಲಿನ ಎಪ್ಪತ್ತು ಹಳ್ಳಿಗಳ ಪಾಳೆಪಟ್ಟಿನ ನೇತೃತ್ವ ವಹಿಸಿಕೊಂಡು ಅವುಗಳನ್ನು ನೋಡಿಕೊಳ್ಳುತ್ತಿದ್ದರು. ಒಮ್ಮೆ ಯುದ್ಧದಲ್ಲಿ ಅಪಾರ ನೋವು ಅನುಭವಿಸಿದರು. ಆದರೂ ಗೆಲುವು ಲಭಿಸುತ್ತದೆ. ಜಯಶೀಲರಾಗಿ ವಾಪಸು ತನ್ನ ಸ್ವಸ್ಥಳಕ್ಕೆ ಆಗಮಿಸಿದ ಕನಕ ದಾಸರಿಗೆ ಅಭೂತಪೂರ್ವ ಸ್ವಾಗತ ಲಭಿಸುತ್ತದೆ. ಆದರೆ, ಅವರ ಮನಸ್ಸು ಯುದ್ಧದ ಭೀಕರತೆಯ ಅರಿತು ಅದರ ನಿರಾಕರಣೆ ಹಾಗೂ ಪಾಳೆಗಾರಿಕೆಯನ್ನು ತೊರೆದು ಬದಲಾದ ವ್ಯವಸ್ಥೆಗೆ ತಮ್ಮನ್ನು ತಾವು ಒಗ್ಗಿಸಿಕೊಂಡು ಮರಳಿ ಮಣ್ಣಿಗೆ ಎನ್ನುವಂತೆ ವಾಪಾಸು ತಮ್ಮ ಸ್ವ-ಗ್ರಾಮಕ್ಕೆ ಬಂದು ವ್ಯವಸಾಯದ ಕಾಯಕದಲ್ಲಿ ನಿರತರಾಗುತ್ತಾರೆ. ಜಮೀನಿನಲ್ಲಿ ದುಡಿಮೆಯಲ್ಲಿ ನಿರತರಾಗಿದ್ದಾಗ ಚಿನ್ನದ ಕೊಪ್ಪರಿಗೆ ದೊರೆಯುತ್ತದೆ. ಆದರೆ ಐಹಿಕವಾದ ಬದುಕು ನಶ್ವರ ಎಂದು ತಿಳಿದಿದ್ದ ಕನಕದಾಸರು ಸಿಕ್ಕಿದಂತಹ ಅಷ್ಟೂ ಕನಕವನ್ನು ತ್ಯಾಗ ಮಾಡಿದರಂತೆ. ಆಗಲೇ ಬೀರಪ್ಪ, ಕನಕದಾಸರಾಗಿ ಬದಲಾದದ್ದು. ಈ ಐತಿಹ್ಯವು ಕನಕದಾಸರಲ್ಲಿ ಇದ್ದ ಉದಾರತೆಯನ್ನು ಸಾರುತ್ತದೆ ಮತ್ತು ಸಂಪತ್ತಿಗಾಗಿ ಬಡಿದಾಡುವ ಮಂದಿಗೆ ಈ ಸಂಗತಿ ಸ್ಫೂರ್ತಿಯ ಬೆಳಕು. ಅನಂತರ ವ್ಯಾಸರಾಯರ ಶಿಷ್ಯರಾಗಿ ಆಧ್ಯಾತ್ಮಿಕ ಜ್ಞಾನದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು, ತಾಳ-ತಂಬೂರಿ ಹಿಡಿದು ನಡೆಯುತ್ತಾರೆ. ಕೇವಲ ಚಿನ್ನ ಇದ್ದ ಮಾತ್ರಕ್ಕೆ ಆತ ದೊಡ್ಡ ವ್ಯಕ್ತಿಯಾಗುವುದಿಲ್ಲ. ಚಿನ್ನದಂತಹ ಗುಣ-ವ್ಯಕ್ತಿತ್ವ ಇರಬೇಕು. ಆಗಲೇ ವ್ಯಕ್ತಿ ತುಂಬಾ ಎತ್ತರಕ್ಕೆ ಬೆಳೆಯಲು ಸಾಧ್ಯ. ತಂಬೂರಿ-ತಾಳ ಹಿಡಿದು ಕರ್ನಾಟಕದ ಉಡುಪಿಗೆ ಭೇಟಿ ನೀಡಿದಾಗ ಅಲ್ಲಿ ಒಂದು ಬಗೆಯ ಪವಾಡ ನಡೆಯುತ್ತದೆ. ಕನಕದಾಸರು ಹಿಂದುಳಿದ


> **ಶತ ಶತಮಾನಗಳಿಂದಲೂ ಅಸ್ತಿತ್ವದಲ್ಲಿದ್ದ ಜಾತಿ ಪದ್ಧತಿಯ ನಿರ್ಮೂಲನೆಗಾಗಿ 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ ಬಲ್ಲಿರಾ...' ಎಂದು ಪ್ರಶ್ನಿಸಿ ವಿಶ್ವಭ್ರಾತೃತ್ವವನ್ನು ಸಾರಿದರು. ಅಂತೆಯೇ 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ಜೀವನದ ಅವಶ್ಯಕತೆಗೆ ಮಾನವನು ಕೈಗೊಳ್ಳುವ ವಿವಿಧ ಬಗೆಯ ವೃತ್ತಿಯನ್ನು ಕುರಿತು ಹೇಳುವ ಕನಕದಾಸರು ಮಾನವನ ಇಹಲೋಕದ ಬದುಕು, ಹೋರಾಟ ಎಲ್ಲವೂ ಹೊಟ್ಟೆ ಪಾಡಿಗಾಗಿ ಎನ್ನುವ ಅಂತಿಮ ಸತ್ಯವನ್ನು ಸಾರುತ್ತಾ ಮಾನವ ಒಂದಲ್ಲ ಒಂದು ಬಗೆಯ ಕಾರ್ಯದಲ್ಲಿ ನಿರತನಾಗಿ ಬದುಕಲೇಬೇಕಾದ ಅನಿವಾರ್ಯತೆಯನ್ನು ಸಾರಿದ್ದಾರೆ.**

ವರ್ಗಕ್ಕೆ ಸೇರಿದವರು ಎಂಬ ಒಂದೇ ಕಾರಣಕ್ಕೆ ದೇವಸ್ಥಾನ ಪ್ರವೇಶಕ್ಕೆ ತಡೆ ಒಡ್ಡಲಾಗುತ್ತದೆ. ಈ ಅವಮಾನದಿಂದ ಮನ ನೊಂದ ಕನಕದಾಸರು ದೇವಸ್ಥಾನದ ಹಿಂಭಾಗಕ್ಕೆ ಬಂದು, 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ...' ಎಂಬ ಪ್ರಾರ್ಥನೆ ಫಲವಾಗಿ ಉಡುಪಿಯ ಶ್ರೀಕೃಷ್ಣನು ಹಿಮ್ಮುಖವಾಗಿ ತಿರುಗಿ ಒಂದು ರಂಧ್ರದ ಮೂಲಕ ದರ್ಶನ ಭಾಗ್ಯ ನೀಡುತ್ತಾನೆ. ಅಂದಿನಿಂದ ಇಂದಿನವರೆಗೂ ಆ ರಂಧ್ರವು 'ಕನಕನ ಕಿಂಡಿ' ಎಂದೇ ಪ್ರಸಿದ್ಧಿ ಪಡೆದುಕೊಂಡಿದೆ. ಕನಕದಾಸರು ಮೊದಲೇ ಹೇಳಿದಂತೆ ವ್ಯಾಸರಾಯರ ಆಸರೆಯಲಿದ್ದು ಹಲವಾರು ಪವಾಡಗಳಿಗೆ ಸಾಕ್ಷಿಯಾಗಿದ್ದಾರೆ. ಗುರುಗಳಾದ ವ್ಯಾಸರಾಯರು "ಶಿಷ್ಯರೆಲ್ಲರನ್ನು ಕರೆದು ಯಾರು ಇಲ್ಲದ ಸ್ಥಳದಲ್ಲಿ ಯಾರಿಗೂ ತಿಳಿಯದಂತೆ ಬಾಳೇಹಣ್ಣನ್ನ ತಿಂದು ಬನ್ನಿ" ಎಂದು ಕಳುಹಿಸಲು ಕನಕದಾಸರು ಮಾತ್ರ "ದೇವರು ಇಲ್ಲದೆ ಇರುವ ಸ್ಥಳವೇ ಇಲ್ಲ" ಎಂದು ಬಾಳೇ ಹಣ್ಣನ್ನು ವಾಪಾಸು ನೀಡಿದ್ದು, "ಸ್ವರ್ಗಕ್ಕೆ ಯಾರು ಹೋಗುತ್ತಾರೆ" ಎಂದು ಗುರುಗಳು ಕೇಳಿದಾಗ ನಾನು ಹೋದರೆ ಹೋದೇನು ಎಂದು ಹೇಳಿ ಎಲ್ಲರನ್ನೂ ಆಶ್ಚರ್ಯ ಚಕಿತರನ್ನಾಗಿ ಮಾಡಿ "ನಾನು ಹೋದರೆ ಹೋದೆನು" ಎಂದು ಹೇಳಿದಾಗ ಗುರುಗಳು ಮತ್ತೆ ಪ್ರಶ್ನಿಸಿ ಆಂತರ್ಯದ ಆಳವನ್ನು ಅರ್ಥವಾಗುವಂತೆ ತಿಳಿಸಲು ಕೋರಿದಾಗ ಸಹನಾ ಚಿತ್ತದಲ್ಲಿ ಕನಕದಾಸರು "ನಾನು ಎಂಬ ಅಹಂಕಾರ ದೂರಾದರೆ ಸ್ವರ್ಗ ತಾನಾಗಿಯೇ ನಮ್ಮನ್ನು ಸ್ವಾಗತಿಸುತ್ತದೆ" ಎಂದರು. ಆಗಲೇ ಆ ಮಾತಿಗೆ ಅಲ್ಲಿ ನೆರೆದ ಶಿಷ್ಯವೃಂದ ತಲೆಬಾಗಿತು. ಅಲ್ಲದೆ ಶತ ಶತಮಾನಗಳಿಂದಲೂ ಅಸ್ತಿತ್ವದಲ್ಲಿದ್ದ ಜಾತಿ ಪದ್ಧತಿಯ ನಿರ್ಮೂಲನೆಗಾಗಿ 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ ಬಲ್ಲಿರಾ...' ಎಂದು ಪ್ರಶ್ನಿಸಿ ವಿಶ್ವಭ್ರಾತೃತ್ವ ವನ್ನು ಸಾರಿದರು. ಅಂತೆಯೇ 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ಜೀವನದ ಅವಶ್ಯಕತೆಗೆ ಮಾನವನು ಕೈಗೊಳ್ಳುವ ವಿವಿಧ ಬಗೆಯ ವೃತ್ತಿಯನ್ನು ಕುರಿತು ಹೇಳುವ ಕನಕದಾಸರು ಮಾನವನ ಇಹಲೋಕದ ಬದುಕು, ಹೋರಾಟ ಎಲ್ಲವೂ ಹೊಟ್ಟೆ ಪಾಡಿಗಾಗಿ ಎನ್ನುವ ಅಂತಿಮ ಸತ್ಯವನ್ನು ಸಾರುತ್ತಾ ಮಾನವ ಒಂದಲ್ಲ ಒಂದು ಬಗೆಯ ಕಾರ್ಯದಲ್ಲಿ ನಿರತನಾಗಿ ಬದುಕಲೇಬೇಕಾದ ಅನಿವಾರ್ಯತೆಯನ್ನು ಸಾರಿದ್ದಾರೆ. ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಂದು ಸಾರುತ್ತಾ ಭಗವಂತನ ಇರುವಿಕೆ ಮತ್ತು ಸುಭೀಕ್ಷೆಯಿಂದ ರಕ್ಷಿಸುವ ಬಗೆಯನ್ನು ಎತ್ತಿ ಹಿಡಿಯಲಾಗಿದೆ. ಅಲ್ಲದೇ ಕೇವಲ ದಾಸ ಸಾಹಿತ್ಯದ ಕಾಲಘಟ್ಟಕ್ಕೆ ನಿಲ್ಲುವ ವ್ಯಕ್ತಿಯಾಗಿರದೆ ಅನುಗಾಲ ಸ್ಮರಿಸಬೇಕಾದ ವ್ಯಕ್ತಿತ್ವದ ಮೇರುಪರ್ವತವಾಗಿದ್ದಾರೆ. ಇವರು ಕೇವಲ ಕೀರ್ತಕಾರರು ಮಾತ್ರವಾಗಿರದೆ ಕವಿಯಾಗಿಯು ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹರಿಭಕ್ತಸಾರ, ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತೆ ಅಲ್ಲದೆ ಉಗಾಭೋಗ, ಕೀರ್ತನೆಗಳನ್ನು ರಚಿಸಿದ್ದಾರೆ. ಹೀಗೆ ಕನಕದಾಸರು ಒಬ್ಬ ವ್ಯಕ್ತಿಯಾಗಿ ಅನಿಸಿದರೂ ಒಂದು ವ್ಯಕ್ತಿತ್ವದ ಪರ್ವತವಾಗಿ ಬೆಳೆದು ಇಂದು ಎಲ್ಲರ ಹೃದಯದಲ್ಲಿ ಕನಕತ್ವವನ್ನು ಹೊಂದುವಂತೆ ವಿರಾಜಮಾನರಾಗಿ ನೆಲೆಗೊಂಡಿದ್ದಾರೆ. 'ಬದುಕಿದೆನು ಬದುಕಿದೆನು ಭವ ಎನಗೆ ಇಂಗಿತು, ಪದುಮನಾಭನ ಪಾದದೊಲುಮೆ ಎನಗಾಯಿತು' ಎಂದು ಭಕ್ತಿಪರವಶದಲ್ಲಿ ಹಾಡಿದ ಭಕ್ತ ಕನಕದಾಸರು 'ಕಾಗಿನೆಲೆಯ ಆದಿಕೇಶವ' ಎಂಬ ಅಂಕಿತ ನಾಮವನ್ನು ಹೊಂದಿ ಕೊನೆಗೆ ತಮ್ಮ ಆದರ್ಶದ ಬದುಕನ್ನು ಉಳಿಸಿ, ಆದಿಕೇಶವ ರಾಯರಲ್ಲಿಯೇ 1607ರಲ್ಲಿ ಐಕ್ಯರಾಗುತ್ತಾರೆ.


ಮಕ್ಕಳ ಚಿತ್ರಕಥೆ

'ಅಮೆರಿಕಾದ ಮಾಜಿ ಅಧ್ಯಕ್ಷ ಬರೆದ ಪತ್ರ ಹೀಗಿತ್ತು....!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅಮೆರಿಕಾದ ಮಾಜಿ ಅಧ್ಯಕ್ಷ "ಅಬ್ರಹಾಮ್ ಲಿಂಕನ್"ರವರು ತನ್ನ ಮಗನನ್ನು ಶಾಲೆಗೆ ಸೇರಿಸುವಾಗ ಶಿಕ್ಷಕರಿಗೆ ಕಳಕಳಿಯ ವಿನಂತಿ ಪತ್ರವನ್ನ ಬರೆದಿದ್ದರು. ಆ ಪತ್ರದಲ್ಲಿ ಏನಿತ್ತೆಂದರೆ, 'ಆತ್ಮೀಯ ಬಂಧುಗಳೆ, ಇದು ನನ್ನೊಂದಿಗೆ ಹುಟ್ಟಿಕೊಂಡ ಕನಸುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನವಷ್ಟೇ....!.




ದಯವಿಟ್ಟು ನನ್ನ ಮಗನಿಗೆ ಅಂಕಗಳ ಹುಚ್ಚು ಹಿಡಿಸಬೇಡಿ. ಒಂದು ಉನ್ನತ ಹುದ್ದೆ ಹಿಡಿಯುವುದಕ್ಕಾಗಿ ನೀನು ಓದಲಿಕ್ಕೆ ಬಂದಿದ್ದೀಯಾ.... ಎಂದು ದಯವಿಟ್ಟು ಹೇಳಿಕೊಡಬೇಡಿ. ಕೆಲಸ ಯಾವುದೇ ಇರಲಿ, ಅದನ್ನು ಪ್ರಾಮಾಣಿಕವಾಗಿ ಖುಷಿಯಿಂದ, ಹೆಮ್ಮೆಯಿಂದ, ನಿಷ್ಠೆಯಿಂದ, ಮಾಡುವುದಷ್ಟೇ ಶ್ರೇಷ್ಠವೆಂಬುವುದನ್ನ ಹೇಳಿಕೊಡಿ. ಅವನಿಗೆ ಉತ್ತಮ ಪುಸ್ತಕಗಳ ಹುಚ್ಚು ಹಿಡಿಯುವಂತೆ ಮಾಡಿ.




ಶಾಲೆಯ ಪುಸ್ತಕಗಳಷ್ಟೇ ತಮ್ಮ ಮಿತಿ ಎಂಬ ಭ್ರಮೆ ಹುಟ್ಟಿಸಬೇಡಿ. ಭಯದಲ್ಲಿ ನಡುಗುವ ಬದಲು, ಖುಷಿಯಿಂದ ಶಿಸ್ತಿಗೆ ಒಡ್ಡಿಕೊಳ್ಳುವುದನ್ನ ಹೇಳಿಕೊಡಿ. ಅವನಿಗೆ ಬದುಕು ಕಲಿಸಿ. ಕಷ್ಟಗಳಲ್ಲಿ ಓಡಿ ಹೋಗುವ, ಸುಖ ಬಂದಾಗ ಕುಣಿದಾಡುವ ಬದಲು ಸಮಚಿತ್ತದಿಂದ ಇರುವುದನ್ನ ಹೇಳಿಕೊಡಿ. ನೋವಿನಲ್ಲೂ ನಗುವುದನ್ನ ಕಲಿಸಿ. ಎಂದಿಗೂ ಜಾತಿಯ ಬೀಜ ಮೊಳೆಯದಂತೆ ನೋಡಿಕೊಳ್ಳಿ




ಸಾಧ್ಯವಾದರೆ ಅವನಿಗೆ ಪ್ರಕೃತಿಯಲ್ಲಿ ಕಳೆದುಹೋಗುವುದನ್ನ ಹೇಳಿಕೊಡಿ. ಸುರಿಯುವ ಮಳೆಯಲ್ಲಿ ನೆನೆಯುವ ಚಿಟ್ಟೆಗಳ ಚೆಂದವನ್ನ ನೋಡಿ ಆನಂದಿಸುವ, ಹಾರು ಪಕ್ಷಿಗಳನ್ನು ಎಣಿಸುವ, ಸಾಲಾಗಿ ನಡೆದುಕೊಂಡು ಹೋಗುವ ಇರುವೆಗಳನ್ನು ಹಿಂಬಾಲಿಸುವ, ಬೀಜ ಮೊಳೆಯುವುದನ್ನು ಕಾದು ನೋಡುವ ಕುತೂಹಲ ತುಂಬಿ. ಗಿಡ ನೆಡಲು ಪಣತೊಡುವ ಮನಸನ್ನು ಬರುವಂತೆ ಮಾಡಿ.



ಬದುಕಿನಲ್ಲಿ ಮೋಸ ಮಾಡಿ ಗೆಲ್ಲುವುದಕ್ಕಿಂತ, ಪ್ರಾಮಾಣಿಕವಾಗಿ ಸೋಲುವುದನ್ನು ಕಲಿಸಿ. ಅನ್ಯಾಯ ಮಾಡಿ ಗಳಿಸುವದಕ್ಕಿಂತ, ಒಬ್ಬರಿಗೆ ನೋವು ಮಾಡಿ ಪಡೆಯುವುದಕ್ಕಿಂತ, ಪ್ರಾಮಾಣಿಕತೆಯಿಂದ ಸಾಧಿಸಲು ತಿಳಿಸಿ. ಜೀವನ ತುಂಬಾ ಸುಂದರವಾಗಿದೆ ಎಂಬುದನ್ನು ಹೇಳಿಕೊಡಿ. ಪ್ರತೀ ಕ್ಷಣದಲ್ಲೂ ಖುಷಿಇದೆ ಎಂಬುದನ್ನು ಅವನು ತಿಳಿಯಲಿ. ಹೆಣ್ಣನ್ನು ಗೌರವಿಸುವ, ದೀನ-ದುರ್ಬಲರನ್ನ, ವಯೋವೃದ್ಧರನ್ನ ನೋಡಿ ಮರುಗುವ ಗುಣ ಕಲಿಸಿ. ಕಷ್ಟದಲ್ಲಿ, ನೋವಿನಲ್ಲಿರುವವರ ಸಹಾಯಕ್ಕೆ ಧಾವಿಸುವ ಛಲ ಬರುವಂತೆ ಮಾಡಿ.



ಫೇಲ್ ಆದರೂ ಪರವಾಗಿಲ್ಲ... ಬದುಕಿನಲ್ಲಿ ಖುಷಿಯಾಗಿ ದುಡಿದು ಜೀವಿಸುವುದನ್ನ ಕಲಿಸಿ. ನಾನು ಅವನನೊಬ್ಬ ಡಾಕ್ಟರ್, ಎಂಜಿನೀಯರ್, ಉನ್ನತ ಅಧಿಕಾರಿಯಾಗುವುದನ್ನು ನೋಡುವುದಕ್ಕಿಂತ, ಒಳ್ಳೆಯ ಮನುಷ್ಯನನ್ನಾಗಿ ಬಾಳುವುದನ್ನ ಕಾಣಬಯಸುತ್ತೇನೆ. ಅವನಿಗೆ ಇಂತಹ ಗುಣಗಳನ್ನ ರೂಡಿಸಿದರೆ ನಾನು ನಿಮಗೆ ಋಣಿಯಾಗಿರುತ್ತೇನೆ. ಇದು ಅಮೆರಿಕಾದ ಮಾಜಿ ಅಧ್ಯಕ್ಷ "ಅಬ್ರಹಾಮ್ ಲಿಂಕನ್"ರವರ ಪತ್ರವಾಗಿತ್ತು.



ವಾರಭವಿಷ್ಯ

17.11.2024 ರಿಂದ 23.11.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ವೃಷಭ, ಮಿಥುನ, ಕಟಕ, ಸಿಂಹ, ಕುಜ-ಕಟಕ, ಬುಧ-ವೃಶ್ಚಿಕ, ಗುರು-ವೃಷಭ, ಶುಕ್ರ-ಧನುಸ್ಸು, ಶನಿ ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ಚಂದ್ರ ಗೋಚರ ಫಲ ಉತ್ತಮವಾಗಿರುತ್ತದೆ. ಮನಸ್ಸಿಗೆ ಉಂಟಾಗಿದ್ದ ಕೆಲವು ಗೊಂದಲಮಯ ವಿಚಾರಗಳು ತಿಳಿಯಾಗಲಿದೆ. ಮಾನಸಿಕವಾಗಿ ಪ್ರಫುಲ್ಲರಾಗಿರುವಿರಿ. ನಿಮ್ಮ ಮಿತ್ರ ವೃಂದ ಬೆಳೆಯುವುದು. ಪಶು, ಗೋವು ಪಾಲಕರಿಗೆ ಹೆಚ್ಚಿನ ಧನ ಲಾಭವಾಗುವುದು. ಸಮುದ್ರ ಜನ್ಮ ವಸ್ತುಗಳ ಕ್ರಯ-ವಿಕ್ರಯದಿಂದಲೂ ಧನ ಲಾಭವನ್ನು ನಿರೀಕ್ಷಿಸಿರಿ.

ಶ್ರೀ ದುರ್ಗಾದೇವಿ ಸ್ತುತಿ. ಶುಭ ಸಂಖ್ಯೆ-3



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಪ್ರವೇಶಿಸುವ ಉಚ್ಛ ಚಂದ್ರ ಶುಭ ಫಲಗಳ ಸಂಕೇತವನ್ನು ನೀಡುತ್ತಲಿದ್ದಾನೆ. ದೈನಂದಿನ ಕೆಲಸಗಳು ನೀವಂದುಕೊಂಡಂತೆ ಸಾಗುವುದು. ವೈಯಕ್ತಿಕ ವಿಚಾರಗಳು ನಿಮಗೆ ಅನುಕೂಲಕರವಾಗಿದೆ. ಎನ್‌ಕ್ಯಾಶ್ ಮಾಡಿಕೊಳ್ಳಲು ಹಿಂದೆ ಬೀಳದಿರಿ. ಹೋಟೆಲ್, ಕ್ಯಾಟರಿಂಗ್ ಉದ್ಯಮಿಗಳಿಗೆ ಹಣದ ಹರಿವು ಚೆನ್ನಾಗಿರುತ್ತದೆ. ವಾರದ ಕಡೆಗೆ ಪಿಕ್‌ನಿಕ್ ಜೊತೆಗೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-4



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರದ ಆರಂಭಕ್ಕೆ ವಾಕ್ಚಾತುರ್ಯದಿಂದ ಕಾರ್ಯ ಜಯ. ಮನೆಗೆ ಅತಿಥಿ, ಅಭ್ಯಾಗತರ ಬರುವಿಕೆ, ಅವರ ಸತ್ಕಾರಕ್ಕಾಗಿ ಧಾರಾಳ ಹಣ ವ್ಯಯ. ಟ್ರಾವೆಲ್ಸ್ ಏಜೆನ್ಸಿಯವರಿಗೆ ಉತ್ತಮ ಲಾಭ ದೊರಕುವುದು. ವಾರ ಮಧ್ಯಾನಂತರ ಬರುವ ಎಡರು-ತೊಡರುಗಳನ್ನು ಸುದೀರ್ಘವಾಗಿ ಯೋಚಿಸಿ ಪರಿಹರಿಸಿಕೊಳ್ಳಿ. ನಿಮ್ಮ ವಿಶ್ವಾಸಕ್ಕೆ ಪಾತ್ರರಾದ ವ್ಯಕ್ತಿಗಳಿಂದ ಸಮಯೋಚಿತ ಸಹಾಯ ದೊರಕುವುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-9



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿಯಾದ ಚಂದ್ರನ ಶುಭ ಗೋಚರದ ಫಲ ಈ ವಾರಪೂರ್ತಿ ಇರುತ್ತದೆ. ನೂತನ ವ್ಯಾಪಾರ, ಉದ್ಯಮ ಆರಂಭಿಸಲು ಸುಸಮಯ ಬಂದಿದೆ. ವಿವಾಹಕಾಂಕ್ಷಿಗಳಿಗೆ ಮನ ಮೆಚ್ಚಿನ ಬಾಳ ಸಂಗಾತಿ ದೊರೆಯಲು ಗುರುಬಲವಿದೆ. ಮಕ್ಕಳ ಸಾಧನೆ, ವಿಕ್ರಮಗಳಿಂದ ಸಂತೋಷದಿಂದ ಬೀಗುವಿರಿ. ನಿಮ್ಮ ಜಾತಕದಲ್ಲಿ ದಶಾ-ಭುಕ್ತಿಗಳು ಉತ್ತಮವಿದ್ದರೆ ಯಾವುದಾದರೂ ಲಾಟರಿಯಲ್ಲಿ ಜಯಗಳಿಸುವ ಸಂಭವವಿದೆ.

ಶ್ರೀ ತ್ರಿಪುರ ಸುಂದರಿ ಉಪಾಸನೆ. ಶುಭ ಸಂಖ್ಯೆ-5



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಪೂರ್ವಾರ್ಧದಲ್ಲಿ ಸಜ್ಜನರ ಭೇಟಿಯಿಂದ ನಿಮ್ಮ ಭವಿಷ್ಯ ಉಜ್ವಲವಾಗಲು ದಾರಿ ತೋರುವುದು. ಆದಾಯ-ವೆಚ್ಚಗಳು ಸಮನಾಗಿರುತ್ತವೆ. ಸರಾಫ್ ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರ. ರಾಹು-ಕೇತುಗಳ ಸಂಚಾರ ಅಶುಭವಿದೆ. ಮನೆ ಮಂದಿಯೊಂದಿಗೆ ಸಂಘರ್ಷ ಬೇಡ. ಹುಲ್ಲುಕಡ್ಡಿ ಬೆಟ್ಟವಾದೀತು. ವನಿತಾಮಣಿಯರು ಆಭರಣ ಪ್ರದರ್ಶಿಸಿಕೊಂಡು ಓಡಾಡಬೇಡಿ.

ಶ್ರೀಸಾಯಿಬಾಬಾ ದರ್ಶನ. ಶುಭ ಸಂಖ್ಯೆ-6



ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಮನೆಯಲ್ಲಿ ಸಂತಸದ ವಾತಾವರಣ. ಆಸ್ತಿ ವಿಚಾರದಲ್ಲಿ ಗಣ್ಯ ವ್ಯಕ್ತಿಗಳ ಸಂಧಾನದಿಂದ ಅನುಕೂಲ. ಬ್ಯಾಂಕ್ ಸಾಲದ ಪ್ರಯತ್ನದಲ್ಲಿ ಸಫಲತೆ. ವಿವಾಹಾಕಾಂಕ್ಷಿಗಳಿಗೆ ಮನ ಮೆಚ್ಚಿನ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇದೆ. ಜನ್ಮ ಕೇತು ಕಾರಣ ಉದರ, ಕರಳು ಸಂಬಂಧಿ ಕಾಯಿಲೆ ಕಾಡಬಹುದು. ದಂಪತಿಗಳ ವಾದ, ವಿವಾದದಲ್ಲಿ ಸೋತವರು ಗೆದ್ದಂತೆ.

ಓಂ ನಮೋ ಭಗವತೇ ವಾಸುದೇವಾಯ ಮಂತ್ರ ಜಪಿಸಿ. ಶುಭ ಸಂಖ್ಯೆ-9



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರ ಮಿಶ್ರ ಫಲವನ್ನು ಅನುಭವಿಸುವಿರಿ. ಕುಟುಂಬ ಸದಸ್ಯರೊಂದಿಗೆ ಪ್ರವಾಸಗಳು ಉಂಟಾದೀತು. ಐಚ್ಛಿಕ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ಹಣಕಾಸಿನ ವ್ಯವಹಾರದಲ್ಲಿ ಜಾಗೃತರಾಗಿರಿ. ಆರೋಗ್ಯ ಸಮರ್ಪಕವಾಗಿ ಇರುವುದಿಲ್ಲ. ವೈದ್ಯೋಪಚಾರಕ್ಕೆ ಹಣ ವ್ಯಯ. ವಾರದ ಉತ್ತರಾರ್ಧಕ್ಕೆ ನಿಮ್ಮ ದಕ್ಷತೆಯಿಂದ ಕಾರ್ಯಾನುಕೂಲ. ಸಾರ್ವಜನಿಕ ಕೆಲಸಗಳಿಗೆ ಅಪರೂಪದ ಆಹ್ವಾನ ದೊರಕುವುದು. ಜೂಜು, ರೇಸ್‌ನಿಂದ ದೂರವಿರಿ. ಶ್ರೀ ಚಾಮುಂಡೇಶ್ವರಿ ಅರ್ಚನೆ. ಶುಭ ಸಂಖ್ಯೆ-7



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಕೈಗೆತ್ತಿಕೊಂಡ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವಿರಿ. ಸಮಾಜದಲ್ಲಿ ನಿಮ್ಮ ಗೌರವ, ಪ್ರತಿಷ್ಠೆಗಳು ವೃದ್ಧಿಸುವುದು. ವೃತ್ತಿಪರ ವ್ಯವಹಾರಗಳು ಅನುಕೂಲಕರವಾಗಿರುತ್ತದೆ. ಚಿನ್ನ-ಬೆಳ್ಳಿ ಪದಾರ್ಥಗಳು ಮನೆಗೆ ಬರುವುದು. ಅಶುಭ ಶನಿಯಿಂದ ವೃತ್ತಿಯಲ್ಲಿ ಬೇಸರ, ಸೇವಕರಿಂದಲೂ ಅನಿಷ್ಟ ಸಂಗತಿಗಳು ಘಟಿಸುತ್ತವೆ. ಹೊಸ ಯೋಜನೆಗಳನ್ನು ಮುಂದೂಡಿ.

ಶ್ರೀ ಶನಿಮೂಲ ಮಂತ್ರ ಜಪಿಸಿ. ಶುಭ ಸಂಖ್ಯೆ-1



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ನಿತ್ಯ ಕಾರ್ಯಗಳಲ್ಲಿ ಉತ್ಸಾಹವಿರುತ್ತದೆ. ಆರ್ಥಿಕ ಸಮಸ್ಯೆಗಳು ಪರಿಹಾರವಾಗುವುದು. ಸ್ಥಿರಾಸ್ತಿ ಕ್ರಮ-ವಿಕ್ರಯಗಳು ಲಾಭದಾಯಕವೆನಿಸಲಿದೆ. ಪ್ರಮುಖ ವಿಷಯಗಳಲ್ಲಿ ಅತುರದ ನಿರ್ಧಾರ ಕೈಗೊಳ್ಳುವುದರಿಂದ ನಷ್ಟ ಉಂಟಾಗುತ್ತದೆ. ಅನುಚಿತ ವ್ಯಕ್ತಿಗಳ ಸಂಪರ್ಕದಿಂದ ತೊಂದರೆಗೆ ಸಿಲುಕುವಿರಿ. ನಿಮ್ಮ ಮಾತೃಶ್ರೀಯವರ ಆರೋಗ್ಯದಲ್ಲಿ ವ್ಯತ್ಯಯ ಉಂಟಾದೀತು.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಂಪಾದನೆ ಹೆಚ್ಚುವುದು, ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ. ಆಗುವುದೆಲ್ಲಾ ಒಳ್ಳೆಯದಕ್ಕೆ ಎಂಬ ನಂಬಿಕೆ ಇರಲಿ. ಅಧ್ಯಾಪಕ ವೃತ್ತಿಯವರಿಗೆ ಪಿಹೆಚ್.ಡಿ ಶಿಕ್ಷಣಕ್ಕೆ ಅನುಮತಿ ದೊರಕಬಹುದು. ಪಾಸಿಟೀವ್ ಚಿಂತನೆಯಿಂದ ಸಮಸ್ಯೆಗೆ ಸಮಾಧಾನ ದೊರಕುವುದು. ದ್ವಿತೀಯ ಶನಿಯಿಂದ ಆರೋಗ್ಯ ಸಮಸ್ಯೆ ಕಾಡುತ್ತದೆ. ಡ್ರೈವಿಂಗ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬ ನೆನಪಿರಲಿ.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-4



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಮನೋಭಿಲಾಷೆಗಳು ಈಡೇರಲು ಮಾತೃಶ್ರೀಯವರ ಆಶೀರ್ವಾದ ಪಡೆಯಿರಿ. ಪರಿಶ್ರಮವಿಲ್ಲದೆ ಅದೃಷ್ಟ ಒಲಿದು ಬರದು. ಯೋಚಿಸಿದ್ದನ್ನೆಲ್ಲಾ ಮಾತನಾಡಬೇಡಿ. ಮಾತಿನಿಂದ ಸಂಬಂಧಗಳು ಕೆಡುವುದು, ಪಿತ್ರಾರ್ಜಿತ ಆಸ್ತಿ ವಿಚಾರಗಳು ತೀರ್ಮಾನವಾಗುವುದರಲ್ಲಿ ವಿಳಂಬವಾಗುವುದು. ವಾರಾಂತ್ಯಕ್ಕೆ ವ್ಯಾಪಾರ, ವ್ಯವಹಾರಗಳು ನಿಧಾನವಾಗಿ ಸಾಗಿದರೂ, ಲಾಭಾಂಶಕ್ಕೆ ಕೊರತೆಯಾಗದು.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-6



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆರಂಭಕ್ಕೆ ನಿಮ್ಮ ರಾಶ್ಯಾಧಿಪತಿ ಗುರುವಿನ ಸಮಾಗಮ ಉಚ್ಛ ಚಂದ್ರನ ಜೊತೆ ಆಗಲಿದ್ದು, ಮನೋವಾಂಛಿತ ಕೆಲಸಗಳು ಸುಗಮವಾಗಿ ಸಾಗುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗಲಿದೆ. ವಾರ ಸಾಗಿದಂತೆ ಸಾಡೇಸಾತಿಯ ಪ್ರಭಾವದಿಂದ ಹಂಗಿನ ಹಾಲಿಗಿಂತ ರಾಗಿ ಅಂಬಲಿ ಲೇಸು ಎಂಬ ಸತ್ಯದ ಅರಿವು ಆಗಲಿದೆ. ನಿಮ್ಮ ರಾಶಿ ಸ್ಥಿತ ರಾಹು ದುಡುಕು ಪ್ರವೃತ್ತಿಗೆ ಪ್ರೇರಕನಾಗುವನು. ಆಕಸ್ಮಿಕ ಅಪಘಾತಗಳು ಸಂಭವಿಸಬಹುದು. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4

ಪರಸ್ಪರ ಸಹಕಾರದಿಂದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ಸಾಧ್ಯ

ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಶಾಸಕ ಡಿ.ರವಿಶಂಕರ್



ಕಾರ್ಯಕ್ರಮದಲ್ಲಿ ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು, ಸಿಇಓಗಳನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ನ.16– ಪರಸ್ಪರ ಸಹಕಾರದಿಂದ ಕೆಲಸ ಮಾಡಿದರೆ ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸು ಸಾಧಿಸಿ ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗಲಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಕ್ಷೇತ್ರ ಪ್ರಗತಿಯಾದರೇ ದೇಶದ ಆರ್ಥಿಕಾಭಿವೃದ್ಧಿ ನಾಗಾಲೋಟದಲ್ಲಿ ಸಾಗಲಿದೆ. ಇದನ್ನು ಅರಿತು ಸರ್ವರೂ ಮುನ್ನಡೆಯಬೇಕು ಎಂದರು.

ಗ್ರಾಮೀಣ ರೈತರು ಹೈನುಗಾರಿಕೆ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಅವರಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ಅಧಿಕಾರಿಗಳು ತಲುಪಿಸಬೇಕು. ಜೊತೆಗೆ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಸಾಲ ನೀಡುವಾಗ ಎಲ್ಲಾ ರೈತ ಸದಸ್ಯರಿಗೂ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಯಲ್ಲಿ ಸಹಕಾರ ಇಲಾಖೆ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಭವಿಷ್ಯದಲ್ಲಿ ಮತ್ತಷ್ಟು ಪರಿಮಾಣಕಾರಿಯಾಗಿ ಕಾರ್ಯ ನಿರ್ವಹಿಸಿ ರಾಜ್ಯಕ್ಕೆ ಮಾದರಿಯಾಗಬೇಕು. ಜಿಲ್ಲಾ ಹಾಲು ಒಕ್ಕೂಟದ ಕಾರ್ಯ ವೈಖರಿಯನ್ನು ಮಾದರಿಯಾಗಿಟ್ಟುಕೊಂಡು ಕೆಲಸ ನಿರ್ವಹಿಸಬೇಕು ಎಂದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಡಾ.ಹೆಚ್.ವಿ.ರಾಜೀವ್ ಮಾತನಾಡಿ, ಗ್ರಾಮಾಂತರ ಪ್ರದೇಶದ ಆರ್ಥಿಕ ಚಟುವಟಿಕೆಗಳು ಸಹಕಾರ ಸಂಘದ ಮೇಲೆ ಅವಲಂಬಿತವಾಗಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಪ್ರತಿಯೊಬ್ಬರು ಒಂದಿಲ್ಲೊಂದು ಸಂಘಗಳ ಸದಸ್ಯರಾಗಿ ಸಕ್ರಿಯ ಸಹಕಾರಿಗಳಾಗಬೇಕು ಎಂದರು.

ಪ್ರತಿವರ್ಷ ಸಹಕಾರ ಸಪ್ತಾಹ ನಡೆಸಿ, ಆ ಕ್ಷೇತ್ರವನ್ನು ಉತ್ತೇಜಿಸಿ, ಸಾಧಕರನ್ನು ಗುರುತಿಸಿ ಗೌರವಿಸುವ ಮೂಲಕ ಸರ್ಕಾರಿಗೂ ಸಹಕಾರ ಸಂಘಗಳು ಮತ್ತು ಸಂಸ್ಥೆಗಳಿಂದ ದೊರೆಯುವ ಸವಲತ್ತುಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚಲುವರಾಜು, ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷ ಬಿ.ಎನ್.ಸದಾನಂದ, ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ರಾಜ್ಯ ಮುಕ್ತ ವಿವಿಯ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ, ಮೈಮುಲ್ ಮಾಜಿ ನಿರ್ದೇಶಕ ಎ.ಟಿ.ಸೋಮಶೇಖರ್ ಮಾತನಾಡಿದರು.

ಈ ವೇಳೆ ಹೊಸಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆ ಎಂ.ಜಿ.ಗೀತಾ ಮಂಜುಗೌಡ, ಚಿಕ್ಕವಡ್ಡರಗುಡಿ ಪಿಎಸಿಎಸ್ ಅಧ್ಯಕ್ಷ ರಂಗೇಗೌಡ ಸೇರಿದಂತೆ ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಸಿಇಓಗಳನ್ನು ಸನ್ಮಾನಿಸಲಾಯಿತು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎಂ.ಮಲ್ಲಿಕಾರ್ಜುನ, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಟಿ.ರಾಮೇಗೌಡ, ಮೈಮುಲ್ ನಿರ್ದೇಶಕಿ ಎ.ಬಿ.ಮಲ್ಲಿಕಾ, ರಾಜ್ಯ ಕುಕ್ಕುಟ ಸಹಕಾರ ಮಹಾ ಮಂಡಳದ ನಿರ್ದೇಶಕ ಎಸ್.ಸಿದ್ದೇಗೌಡ, ಸಹಕಾರ ಅಭಿವೃದ್ಧಿ ಅಧಿಕಾರಿ ಎಸ್.ರವಿ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ದಿನೇಶ್ ಸೇರಿದಂತೆ ಇನ್ನಿತರರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನಡೆಸಲು ಮನವಿ ಮಾಡುವೆ

ಕೆ.ಆರ್.ನಗರ: ಕಳೆದ 1 ವರ್ಷದಿಂದ ಚುನಾವಣೆ ನಡೆಯದೆ ನೆನೆಗುದಿಗೆ ಬಿದ್ದಿರುವ ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ ನಡೆಸುವಂತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಹಕಾರ ಸಚಿವರು ಸೇರಿದಂತೆ ಸಂಬಂಧಿತ ಎಲ್ಲರಿಗೂ ಮನವಿ ಸಲ್ಲಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

71ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಮಾತನಾಡಿದ ಅವರು, ಸಹಕಾರ ಸಂಘಗಳ ಆಡಳಿತ ಮಂಡಳಿಯಲ್ಲಿ ಚುನಾಯಿತ ಸದಸ್ಯರು ಇರದಿದ್ದರೆ ಸಮರ್ಪಕವಾಗಿ ಆಡಳಿತ ನಡೆಯುವುದಿಲ್ಲ. ಆದ್ದರಿಂದ ಶೀಘ್ರ ಬ್ಯಾಂಕ್ ಚುನಾವಣೆ ನಡೆಸುವಂತೆ ಕೋರುತ್ತೇನೆ ಎಂದರು.

ಸಹಕಾರ ಸಂಘಗಳ ಸದಸ್ಯರಾಗುವವರು ಸಕ್ರಿಯರಾಗಿ ಆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು. ವಿವಿಧ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಿಂದ ಸಾಲ ಪಡೆಯುವವರು ಸಕಾಲದಲ್ಲಿ ಮರುಪಾವತಿ ಮಾಡಿ ಇತರ ರೈತರು ಸಾಲ ಪಡೆಯಲು ಅನುಕೂಲ ಮಾಡುವುದರ ಜೊತೆಗೆ ಈ ವಿಚಾರದಲ್ಲಿ ಇತರರಲ್ಲಿಯೂ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘಕ್ಕೆ ಜಗದೀಶ್ ಅಧ್ಯಕ್ಷ



ಹೆಚ್.ಡಿ.ಕೋಟೆ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಜಗದೀಶ್ ಆಯ್ಕೆಯಾಗಿದ್ದಾರೆ.

ಹೆಚ್.ಡಿ.ಕೋಟೆ, ನ.16– ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಶಾಖೆ ನೂತನ ಅಧ್ಯಕ್ಷರಾಗಿ ಸಿ.ಎಸ್.ಜಗದೀಶ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸಿ.ಎಸ್.ಜಗದೀಶ್ ಹಾಗೂ ಯಶ್ವಂತ್ ಕುಮಾರ್ ನಾಮಪತ್ರ ಸಲ್ಲಿಸಿದ್ದರು. ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಿ.ಎಸ್.ಜಗದೀಶ್ 19 ಮತ ಪಡೆದು ಅಧ್ಯಕ್ಷರಾದರೇ, ಪ್ರತಿಸ್ಪರ್ಧಿ ಯಶ್ವಂತ್ ಕುಮಾರ್ 14 ಮತ ಪಡೆದು ಪರಾಭವಗೊಂಡರು. ತಲಾ 17 ಮತಗಳನ್ನು ಪಡೆದ ಬಿ.ಎನ್.ಮಂಜುನಾಥ್ ರಾಜ್ಯ ಪರಿಷತ್ ಸದಸ್ಯ, ಬಿ.ವಿ.ರವಿ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಜಗದೀಶ್ ಮಾತನಾಡಿ, ತಾಲೂಕಿನಲ್ಲಿ ನೌಕರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ. ಸಂಘದ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿ, ಎಲ್ಲರ ಸಹಕಾರದಿಂದ ಉತ್ತಮ ಕೆಲಸ ಮಾಡಲು ಮುಂದಾಗುತ್ತೇನೆ ಎಂದ ಅವರು ಚುನಾವಣೆಯಲ್ಲಿ ಗೆಲುವಿಗೆ ಕಾರಣರಾದ ಎಲ್ಲರಿಗೂ ಧನ್ಯವಾದ ತಿಳಿಸಿದರು.

ಚುನಾವಣಾಧಿಕಾರಿಯಾಗಿ ಕೆ.ಆರ್.ರಾಜು ಕಾರ್ಯ ನಿರ್ವಹಿಸಿದರು. ಈ ವೇಳೆ ಡಾ.ಸೋಮಣ್ಣ, ಎಂ.ಚಂದ್ರಕುಮಾರ್, ಎಂ.ಎಸ್. ನಾಗರಾಜ ನಾಯಕ, ಸುರೇಶ್, ಮಧು, ಸಂತೋಷ್, ಮಹದೇವ, ಶಂಕರ, ಶಿವಕುಮಾರ್, ಸಿದ್ದೇಗೌಡ, ಗಣೇಶ, ಸತೀಶ್, ಜಾವಿದ್, ಪ್ರಕಾಶ್ ಇತರರಿದ್ದರು.

ನಾಳೆ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವ

ಮೈಸೂರು, ನ.16–ಮೈಸೂರಿನ ಹೆಬ್ಬಾಳು ಒಂದನೇ ಹಂತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಸೇವಾ ಸಮಿತಿ ವತಿಯಿಂದ ಕಾರ್ತಿಕ ಮಾಸದ ಅಂಗವಾಗಿ ನ.18ರಂದು ಸಂಜೆ 6 ಗಂಟೆಗೆ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವ ಏರ್ಪಡಿಸಲಾಗಿದೆ. ಹೆಬ್ಬಾಳ್‌ನ ಪ್ರಮುಖ ಬೀದಿಗಳಲ್ಲಿ ಕಂಡಾಯ ಮೆರವಣಿಗೆ ನಡೆಯಲಿದ್ದು, ನಂತರ ಪ್ರಸಾದ ವಿನಿಯೋಗ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರಿ ನೌಕರರ ಸಂಘಕ್ಕೆ ಶಿವಶಂಕರಮೂರ್ತಿ ಅಧ್ಯಕ್ಷ

ಖಜಾಂಚಿ ಹೆಚ್.ನಾಗರಾಜು, ರಾಜ್ಯ ಪರಿಷತ್ ಸದಸ್ಯರಾಗಿ ನಾಗರಾಜಮೂರ್ತಿ ಆಯ್ಕೆ



ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಎಂ.ವಿ.ಶಿವಶಂಕರಮೂರ್ತಿ ಮೂರನೇ ಬಾರಿಗೆ ಆಯ್ಕೆಗೊಂಡರು.

ತಿ.ನರಸೀಪುರ, ನ.16– ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾಗಿ ಎಂ.ವಿ.ಶಿವಶಂಕರಮೂರ್ತಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ಪಟ್ಟಣದ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಅಧ್ಯಕ್ಷ, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯ ಆಯ್ಕೆಗೆ ಚುನಾವಣೆ ನಡೆಯಿತು. ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ನಡೆದ ಮತದಾನ ಪ್ರಕ್ರಿಯೆಯಲ್ಲಿ ಸಂಘದ 36 ನಿರ್ದೇಶಕರು ಹಕ್ಕು ಚಲಾಯಿಸಿದರು.

ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಂ.ವಿ.ಶಿವಶಂಕರಮೂರ್ತಿ 25 ಮತ ಪಡೆದು ಪ್ರಚಂಡ ಗೆಲುವು ಸಾಧಿಸಿದರೆ, ಪ್ರತಿಸ್ಪರ್ಧಿ ಬಿ.ಪುಟ್ಟರಾಜು 9 ಮತ ಪಡೆದು ಪರಾಭವಗೊಂಡರು. ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿದ ಹೆಚ್.ನಾಗರಾಜು 26 ಮತ ಪಡೆದು ಆಯ್ಕೆಯಾದರೇ, ಪ್ರತಿಸ್ಪರ್ಧಿ ಪರಶಿವ 8 ಮತ ಪಡೆದು ಸೋಲು ಅನುಭವಿಸಿದರು. ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿದ್ದ ನಾಗರಾಜಮೂರ್ತಿ 25 ಮತ ಪಡೆದು ಆಯ್ಕೆಯಾದರೇ, ಪ್ರತಿಸ್ಪರ್ಧಿ ಗೋವಿಂದ 9 ಮತ ಪಡೆದು ಸೋಲು ಒಪ್ಪಿಕೊಂಡರು. ಚುನಾವಣಾಧಿಕಾರಿಯಾಗಿ ಶಿಕ್ಷಕ ಸಿದ್ದಪ್ಪಾಜಿ ಕಾರ್ಯ ನಿರ್ವಹಿಸಿದರು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ, ಕಚೇರಿ ಮುಂಭಾಗ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಲಾಯಿತು.

ನೂತನ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ ಮಾತನಾಡಿ, ಹಲವು ಒತ್ತಡಗಳ ನಡುವೆಯೂ ನಿರ್ದೇಶಕರು ಹಾಗೂ ಅಧ್ಯಕ್ಷರ ಆಯ್ಕೆಯ 2 ಚುನಾವಣೆಯಲ್ಲೂ ನೌಕರ ಬಂಧುಗಳು ಕೈ ಹಿಡಿದು ಅಧಿಕಾರ ನೀಡುವುದಕ್ಕೆ ಎಲ್ಲರಿಗೂ ಕೃತಜ್ಞನಾಗಿರುತ್ತೇನೆ. ತಾಲೂಕಿನಲ್ಲಿ ಸರ್ಕಾರಿ ನೌಕರರ ಹಿತ ಕಾಪಾಡಲು ಹಾಗೂ ಸಂಘದ ಮೂಲಕ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತೇನೆ ಎಂದರು.

ಈ ವೇಳೆ ನಿಕಟಪೂರ್ವ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ನೌಕರರ ಸಂಘದ ನಿರ್ದೇಶಕರಾದ ಎ.ಗಜೇಂದ್ರ ಎಸ್.ನಾಗೇಶ, ಎನ್.ರೇವಣ್ಣ ಜಿ.ಸಿದ್ದ ಮಲ್ಲಪ್ಪ, ಎಂ.ಶಿವಸ್ವಾಮಿ, ರುದ್ರೇಶ್, ಎಂ.ಎಸ್.ಆನಂದ್, ಸಿ.ಮಂಜುನಾಥ್, ಹೆಚ್.ಸಿ.ಕೆಂಡಗಣ್ಣಸ್ವಾಮಿ, ಕೆನಂದೀಶ್ ಕುಮಾರ್, ಮಹೇಶ್, ಎಂ.ಈಶ್ವರ, ಎಂ.ನಾಗು, ಎನ್.ಸರಸ್ವತಿ, ಪುಟ್ಟಸ್ವಾಮಿ, ನೇತ್ರ ಪರೀಕ್ಷಕ ಆರ್.ಉಮೇಶ್ ಕುಮಾರ್ ಇತರರಿದ್ದರು.

ನೀರಿನ ದರ ಕಡಿಮೆ ಮಾಡಲು ಜಿಲ್ಲಾಧಿಕಾರಿಗೆ ಮನವಿ



ಸುದ್ದಿಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿದರು.

ನಂಜನಗೂಡು, ನ.16– ನಗರಸಭೆ ವ್ಯಾಪ್ತಿಯ ವಾರ್ಡ್‌ಗಳ ನಿವಾಸಿಗಳಿಗೆ ಅಧಿಕ ಮೊತ್ತದ ನೀರಿನ ಬಿಲ್ ಬಂದಿರುವ ಬಗ್ಗೆ ಹೆಚ್ಚಿನ ದೂರುಗಳು ಬಂದಿದ್ದು, ನಗರಸಭೆ ಸಾಮಾನ್ಯ ಸಭೆಯಲ್ಲಿ ನೀರಿನ ದರ ಕಡಿಮೆ ಮಾಡುವಂತೆ ನಿರ್ಣಯ ಕೈಗೊಂಡು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀರು ಸರಬರಾಜಿನ ಮೀಟರ್ ದೋಷದಿಂದಾಗಿ ಹೆಚ್ಚಿನ ಬಿಲ್ ಬಂದಿದೆ. ಸಾರ್ವಜನಿಕರು ದೂರು ನೀಡಿದರೆ ಮೀಟರ್ ದೋಷ ಸರಿಪಡಿಸಿ, ಬಳಕೆಗೆ ತಕ್ಕಂತೆ ಬಿಲ್ ನೀಡಲು ಕ್ರಮ ವಹಿಸುತ್ತೇವೆ. ನಗರಸಭೆಯಲ್ಲಿ ತುರ್ತು ಸಭೆ ಕರೆದು ನೀರಿನ ದರ ನಿಗದಿ ಮಾಡುವ ಮೂಕ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಈ ಹಿಂದೆ ಬಿಜೆಪಿ ಅಧಿಕಾವಧಿಯಲ್ಲಿ ಕುಡಿಯುವ ನೀರಿನ ದರ ಇಳಿಸುವಂತೆ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದ್ದ ವೇಳೆ ಶಾಸಕರಾಗಿದ್ದ ಹರ್ಷವರ್ಧನ್ 10 ಕೋಟಿ ಸಾಲ ಪಡೆದು ನಿರಂತರ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಲಾಗಿದ್ದು, ದರ ಇಳಿಕೆ ಸಾಧ್ಯವಿಲ್ಲ ಎಂದು ಹೇಳಿದ್ದರು. ಈಗ ಅವರೇ ನೀರಿನ ದರ ಇಳಿಸುವಂತೆ ಪ್ರತಿಭಟನೆ ನಡೆಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಎಂ ಶಂಕರ್ ಮಾತನಾಡಿ, ಮಾಜಿ ಶಾಸಕ ಬಿ.ಹರ್ಷವರ್ಧನ್ ಅವಧಿಯಲ್ಲಿ ನಗರಸಭೆ ವ್ಯಾಪ್ತಿಯ ಬಡಾವಣೆ ನಿವಾಸಿಗಳಿಗೆ 20 ಸಾವಿರದಿಂದ ಲಕ್ಷದವರೆಗೆ ನೀರಿನ ಬಿಲ್ ಬಂದಿದೆ ಎಂದು ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದ್ದರು. ಆದರೆ ಅವರದೇ ಸರ್ಕಾರವಿದ್ದರೂ, ಸಮಸ್ಯೆ ಪರಿಹರಿಸಲು ಮುಂದಾಗಲಿಲ್ಲ. ಅಲ್ಲದೇ ಅವೈಜ್ಞಾನಿಕ ಕಾಮಗಾರಿ ನಡೆಯುತ್ತಿರುವ ಬಗ್ಗೆ ದಾಖಲೆ ಸಮೇತ ಪ್ರತಿಭಟಿಸಿದರೂ ಯಾವುದೇ ಕ್ರಮ ವಹಿಸಲಿಲ್ಲ. ಅವರ ಅವಧಿಯಲ್ಲಿ ಭ್ರಷ್ಟಾಚಾರವು ಯಥೇಚ್ಛವಾಗಿತ್ತು ಎಂದರು.

ನಗರಸಭೆ ಸದಸ್ಯೆ ಗಾಯಿತ್ರಿ ಮೋಹನ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಸದಸ್ಯರಾದ ಗಾಯತ್ರಿ, ಪ್ರದೀಪ್, ಗಂಗಾಧರ್, ಯೋಗೇಶ್ ಉಪಸ್ಥಿತರಿದ್ದರು.

ರಾವಂದೂರಿನಲ್ಲಿ ಕಣ್ಣಿನ ತಪಾಸಣಾ ಶಿಬಿರ



ಕಂಪಲಾಪುರ, ನ.16– ಸಾರ್ವಜನಿಕರು ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ಹೆಚ್ಚು ಅನಾರೋಗ್ಯ ಕಾಡಲು ಕಾರಣವಾಗುತ್ತಿದೆ ಎಂದು ರಾವಂದೂರು ಮಾನಸ ಸಾಂಸ್ಕೃತಿಕ ಸೇವಾ ಸಂಸ್ಥೆ ಅಧ್ಯಕ್ಷ ಆರ್.ಎಸ್.ಚಿಕ್ಕವೀರಪ್ಪ ತಿಳಿಸಿದರು.

ಮಾನಸ ಸಾಂಸ್ಕೃತಿಕ ಸೇವಾ ಸಂಸ್ಥೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಜನರು ದೈನಂದಿನ ಕೆಲಸಗಳ ಒತ್ತಡದಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇದರಿಂದ ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿದೆ. ಜೊತೆಗೆ ಟಿವಿ, ಮೊಬೈಲ್ ಅನ್ನು ಹೆಚ್ಚು ನೋಡುವುದರಿಂದ ಕಣ್ಣಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಆರೋಗ್ಯವೇ ಭಾಗ್ಯ ಎಂದು ತಿಳಿದು ಮುಂಜಾಗ್ರತೆ ವಹಿಸುವುದು ಮುಖ್ಯ ಎಂದರು.

ಶಿಬಿರದಲ್ಲಿ 150ಕ್ಕೂ ಹೆಚ್ಚು ಜನರು ತಪಾಸಣೆಗೆ ಒಳಗಾಗಿ ಅದರಲ್ಲಿ 62 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಮಾನಸ ಸೇವಾ ಸಂಸ್ಥೆ ಸದಸ್ಯ ಕುಮಾರ್ ವಿಜಯ್, ಬಿಜೆಪಿ ಮುಖಂಡ ಆರ್.ಟಿ.ಸತೀಶ್, ಸುರೇಶ್, ಹೆಚ್.ಎಸ್.ಸ್ವಾಮಿ, ಆರ್.ಎಸ್.ವಿಜಯ್ ಕುಮಾರ್, ಮಹೇಶ್, ವಿಕ್ರಂರಾಜ್, ರಮೇಶ್ ಮೂರ್ತಿ, ವಿಜೇಂದ್ರ ಜಯಂತ್, ವೈದ್ಯಾಧಿಕಾರಿ ಡಾ.ಕೃಪೇಶ್, ಆರೋಗ್ಯ ನಿರೀಕ್ಷಕ ಶಿವನಂಜಯ್ಯ, ಪ್ರದೀಪ್ ಕುಮಾರ್, ಅರವಿಂದ ಆಸ್ಪತ್ರೆ ವ್ಯವಸ್ಥಾಪಕ ವಿಜಯ್ ಕುಮಾರ್ ಸೇರಿದಂತೆ ಆಶಾ ಕಾರ್ಯಕರ್ತೆಯರು, ಆಸ್ಪತ್ರೆ ಸಿಬ್ಬಂದಿ ಸೇವಾಸಂಸ್ಥೆ ಸದಸ್ಯರು ಹಾಜರಿದ್ದರು.

ರಕ್ತದಾನದಿಂದ ಆರೋಗ್ಯ ವೃದ್ಧಿ: ಡಾ.ಕೆ.ಪಿ.ಪ್ರಸನ್ನ



ಹುಣಸೂರು, ನ.16– ವರ್ಷಕ್ಕೆ 2 ಬಾರಿ ರಕ್ತದಾನ ಮಾಡುವುದರಿಂದ ಮನುಷ್ಯನ ಆರೋಗ್ಯ ವೃದ್ಧಿಯಾಗಲಿದೆ. ಅಲ್ಲದೇ ನಿತ್ಯ ಲವಲವಿಕೆಯಿಂದ ಇರಲು ಸಾಧ್ಯವಾಗಲಿದೆ ಎಂದು ರೋಟರಿ ಅಧ್ಯಕ್ಷ ಡಾ.ಕೆ.ಪಿ.ಪ್ರಸನ್ನ ತಿಳಿಸಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು, ಆಶ್ರಯ ಹಸ್ತ ಟ್ರಸ್ಟ್ ಬೆಂಗಳೂರು, ರಕ್ತನಿಧಿ ಕೇಂದ್ರ ಕೆ.ಆರ್.ಆಸ್ಪತ್ರೆ ಮೈಸೂರು, ರೋಟರಿ ಕ್ಲಬ್ ಹುಣಸೂರು, ಇನ್ನರ್‌ವೀಲ್ಡ್ ಹುಣಸೂರು, ಜ್ಞಾನ ಚಿಗುರು ಸಂಸ್ಥೆ ಹಾಗೂ ಇನ್ನಿತರೆ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಗರದ ರೋಟರಿ ಭವನದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಶಿಬಿರಾರ್ಥಿಗಳು ಉಚಿತವಾಗಿ ನೀಡುವ ರಕ್ತ ಹಲವು ನಿರ್ಗತಿಕರ ಬದುಕಿಗೆ ಆಸರೆಯಾಗಲಿದೆ. ಇಂತಹ ಸೇವೆಯಲ್ಲಿ ತೊಡಗಿರುವ ಸ್ವಾಮಿ ವಿವೇಕಾನಂದ ಯೂತ್ ಸೇವೆ ಶ್ಲಾಘನೀಯ ಎಂದರು.

ಇದೇ ವೇಳೆ 31 ಮಂದಿ ರಕ್ತದಾನ ಮಾಡಿದರು. ಸಹಾಯಕ ಗವರ್ನರ್ ಆರ್. ಆನಂದ್, ಡಾ.ಅಭಿಷೇಕ್, ಇನ್ನರ್ ವೀಲ್ಡ್ ಸಂಸ್ಥೆಯ ಸ್ಮಿತಾ, ಕೆ.ಆರ್ ಆಸ್ಪತ್ರೆ ರಕ್ತ ನಿಧಿ ಕೇಂದ್ರದ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ರಘು, ವಿವೇಕಾನಂದ ಯೂತ್‌ನ ಶಿವಲಿಂಗ, ರಾಜೇಶ್, ಚಿಗುರು ಸಂಪನ್ಮೂಲ ಶಂಕರ್, ಆರೋಗ್ಯ ಇಲಾಖೆ ರಾಜೇಶ್ವರಿ ಇದ್ದರು.

ಪವಾಡ ಬಸವೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ



ಬೆಟ್ಟದಪುರದ ಪವಾಡ ಬಸವೇಶ್ವರ ದೇವಾಲಯದಲ್ಲಿ ಕಾರ್ತಿಕ ಮಾಸದ ಹುಣ್ಣಿಮೆ ಅಂಗವಾಗಿ ಅರ್ಚಕ ಸುಬ್ಬಣ್ಣ ನೇತೃತ್ವದಲ್ಲಿ ವಿಶೇಷ ಪೂಜೆ ನಡೆಯಿತು. ಈ ವೇಳೆ ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ತೋಟಪಶೆಟ್ಟಿ, ನಂದೀಶ್, ಪವಾಡ ಬಸವೇಶ್ವರ ಹಾಗೂ ವೀರಶೈವ ಲಿಂಗಾಯತ ಸಮಾಜದವರು ಸೇರಿದಂತೆ ಇನ್ನಿತರರಿದ್ದರು.

ಭಾರತೀಯ ಕಿಸಾನ್ ಸಂಘಕ್ಕೆ ಶಿವಕುಮಾರ್ ಅಧ್ಯಕ್ಷ



ಭಾರತೀಯ ಕಿಸಾನ್ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ಆಯ್ಕೆಯಾಗಿದ್ದಾರೆ

ತಿ.ನರಸೀಪುರ, ನ.16– ಭಾರತೀಯ ಕಿಸಾನ್ ಸಂಘದ ತಾಲೂಕು ಅಧ್ಯಕ್ಷರಾಗಿ ನಾಗಲಗೆರೆ ಶಿವಕುಮಾರ್ ಆಯ್ಕೆಯಾಗಿದ್ದಾರೆ.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಅಧ್ಯಕ್ಷತೆಯಲ್ಲಿ, ಪ್ರಧಾನ ಕಾರ್ಯದರ್ಶಿ ರವಿ, ಬೆನಕನಹಳ್ಳಿ ರಾಜಶೇಖರಮೂರ್ತಿ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರ್ವಾನುಮತದಿಂದ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ನನ್ನನ್ನು ಅಧ್ಯಕ್ಷನಾಗಿ ಮಾಡಿ ದೊಡ್ಡ ಜವಾಬ್ದಾರಿ ನೀಡಿದ್ದೀರಿ. ಹೀಗಾಗಿ ಮುಂದೆ ಎದುರಾಗುವ ಸಮಸ್ಯೆಗಳ ವಿರುದ್ಧ ಹೋರಾಡಿ ಬಗೆಹರಿಸುತ್ತೇನೆ ಎಂದರು.

ಈ ವೇಳೆ ಉಪಾಧ್ಯಕ್ಷ ತಡಿಮಾಲಂಗಿ ಪ್ರಭುಸ್ವಾಮಿ, ಬೆನಕನಹಳ್ಳಿ ಪರಮೇಶ್, ಮರಿಸ್ವಾಮಿ, ಕಾರ್ಯದರ್ಶಿ ಪ್ರಭಾಕರ, ಸಹ ಕಾರ್ಯದರ್ಶಿ ಮೋಹನ್ ಕುಮಾರ್, ಮಾದೇವಸ್ವಾಮಿ ಉಕ್ಕಲಗೆರೆ ಶಿವಣ್ಣ, ಕೃಷ್ಣಮೂರ್ತಿ, ಮಹೇಶ್, ತಾಲೂಕು ಕಾರ್ಯಕಾರಿ ಸಮಿತಿ ವೀರಭದ್ರ ಶೆಟ್ಟಿ, ಕುಮಾರ, ಶಿವಮಲ್ಲು, ದಿನೇಶ್, ನಾರಾಯಣ, ಮಹೇಶ್, ಮದನ್, ಸಂಕೇತ್, ಲಿಂಗರಾಜು, ಶಂಭು, ಉಮೇಶ್, ನಾಗರಾಜು ಹಾಜರಿದ್ದರು.

ರೈತರು ಕೃಷಿ ಯಂತ್ರೋಪಕರಣ ಸದ್ಬಳಕೆ ಮಾಡಿಕೊಳ್ಳಿ

ಶಾಸಕ ದರ್ಶನ್ ಸಲಹೆ



ಕಾರ್ಯಕ್ರಮದಲ್ಲಿ ಫಲಾನುಭವಿಗೆ ಶಾಸಕ ದರ್ಶನ್ ಯಂತ್ರೋಪಕರಣ ವಿತರಿಸಿದರು.

ನಂಜನಗೂಡು, ನ.16– ಕೃಷಿಕರಿಗೆ ಬದುಕು ಕಟ್ಟಿಕೊಡುವ ಸಲುವಾಗಿ ಸರ್ಕಾರ ಕೃಷಿ ಇಲಾಖೆಯಿಂದ ಶೇ.50 ರಷ್ಟು ಸಬ್ಸಿಡಿಯೊಂದಿಗೆ 1.20 ಕೋಟಿ ರೂ. ವೆಚ್ಚದಲ್ಲಿ 132 ರೈತರಿಗೆ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದ್ದು, ರೈತರು ಇದರ ಸದುಪಯೋಗ ಪಡೆದು ಆರ್ಥಿಕವಾಗಿ ಮುಂದೆ ಬರಬೇಕು ಎಂದು ಶಾಸಕ ದರ್ಶನ್ ಸಲಹೆ ನೀಡಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಕೃಷಿ ಇಲಾಖೆ ವತಿಯಿಂದ ನಡೆದ 2024– 25ನೇ ಸಾಲಿನ ಕೃಷಿ ಯಂತ್ರೋಪಕರಣಗಳ ವಿತರಣಾ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಯಂತ್ರೋಪಕರಣ ವಿತರಿಸಿ ಅವರು ಮಾತನಾಡಿದರು.

ಕೃಷಿ ಯಂತ್ರೋಪಕರಣಗಳ ಬಳಕೆಯಲ್ಲಿ ಭಾರತ ಹಿಂದಿದೆ. ವಿದೇಶಗಳಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆಯ ಜೊತೆಗೆ ಜಿಪಿಎಸ್ ಅಳವಡಿಸಿ ಯಂತ್ರ ಸ್ವಯಂ ಕಾರ್ಯ ನಿರ್ವಹಿಸುವಂತೆ ಆಧುನಿಕ ತಂತ್ರಜ್ಞಾನ ಬಳಸಲಾಗುತ್ತಿದೆ. ರೈತರನ್ನು ಉತ್ತೇಜಿಸುವ ಸಲುವಾಗಿ ಸರ್ಕಾರ ಕೃಷಿ ಇಲಾಖೆಯಿಂದ 30 ಕೋಟಿ ವೆಚ್ಚದಲ್ಲಿ ಜಿಲ್ಲೆಯ 8,400 ರೈತರಿಗೆ ಯಂತ್ರೋಪಕರಣ ವಿತರಿಸಿದೆ. ರೈತರು ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದರು.

ತಾಲೂಕಿನಲ್ಲಿ 25 ಪವರ್ ಟಿಲ್ಲರ್, 19 ಚಾಪ್ ಕಟ್ಟರ್, 11 ಬ್ರಷ್ ಕಟ್ಟರ್, 11 ಪವರ್ ವೀಡರ್, 6 ರೋಟವೇಟರ್, 5 ಡೀಸೆಲ್ ಮೋಟರ್, 2 ಡೀಲರ್, 1 ಲೆವೆಲರ್, 1 ಡಿಗ್ಗರ್, 1 ಟೇಬಲ್ ಟಾಪ್ ಆಯಿಲ್ ಮಿಲ್ಲು ಸೇರಿದಂತೆ 82 ಮಂದಿಗೆ ಯಂತ್ರೋಪಕರಣ ವಿತರಣೆ ಮಾಡಲಾಗಿದೆ. ಅಲ್ಲದೇ ತಾಲೂಕಿನಲ್ಲಿ ಕಡಿಮೆ ನೀರಿನಲ್ಲಿ ಅಧಿಕ ಇಳುವರಿ ಪಡೆಯಬಹುದಾದ ತುಂತುರು ನೀರಾವರಿ ಯೋಜನೆ ಉತ್ತೇಜಿಸಲು ಶೇ.90 ರಷ್ಟು ಸಹಾಯಧನ ನೀಡಿ 50 ತುಂತುರು ನೀರಾವರಿ ಘಟಕಗಳನ್ನು ವಿತರಿಸಲಾಗಿದೆ. ಯೋಜನೆಯಲ್ಲಿ ಫಲಾನುಭವಿ ರೈತರಿಗೆ ಒಟ್ಟು 49 ಲಕ್ಷ ಸರ್ಕಾರದ ಸಹಾಯ ದೊರೆತಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ನಗರಸಭಾ ಸದಸ್ಯರಾದ ಗಾಯತ್ರಿ, ಕೆ.ಎಂ.ಬಸವರಾಜು, ಮುಖಂಡರಾದ ದೊರೆಸ್ವಾಮಿ ನಾಯಕ, ರಾಜೇಶ್, ನಾಗರಾಜಯ್ಯ, ನಾಗರಾಜು, ಕೃಷಿ ಜಂಟಿ ನಿರ್ದೇಶಕ ರವಿ, ಜಿಲ್ಲಾ ನಿರ್ದೇಶಕ ಧನಂಜಯ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಸ್.ರವಿ, ಕೃಷಿ ಅಧಿಕಾರಿಗಳಾದ ನಾಗೇಶ್ ಸೇರಿದಂತೆ ಇತರರಿದ್ದರು.

ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರೆ ಯಶಸ್ಸಿಗೆ ಸಹಕರಿಸಿ

ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಮನವಿ



ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಮಾತನಾಡಿದರು.

ಸರಗೂರು, ನ.16– ತಾಲೂಕಿನ ಶ್ರೀಕ್ಷೇತ್ರ ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರೆ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು ಎಂದು ಶಾಸಕ ಅನಿಲ್ ಮನವಿ ಮಾಡಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಶ್ರೀಕ್ಷೇತ್ರ ಬೇಲದಕುಪ್ಪೆ ಮಹದೇಶ್ವರ ಜಾತ್ರೆ ಹಿನ್ನೆಲೆಯಲ್ಲಿ ಹೆಡಿಯಾಲ ಉಪವಲಯ ಕಚೇರಿ ಹೊರಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವವನ್ನು ಅಚ್ಚುಕಟ್ಟಾಗಿ ನಡೆಸಬೇಕು. ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಜೊತೆಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಾತ್ರೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್, ಅಂಗಡಿ ಮುಂಗಟ್ಟು, ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು ಸರಬರಾಜು, ಅನ್ನ ದಾಸೋಹ ಸೇರಿದಂತೆ ಇನ್ನಿತರ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ತಹಸೀಲ್ದಾರ್ ಮೋಹನ್‌ಕುಮಾರಿ ಮಾತನಾಡಿ, ನ.23ರಿಂದ 26ರವರೆಗೆ ಜಾತ್ರೆ ನಡೆಯಲಿದ್ದು, ಹಲವು ಮುಖಂಡರು ಜಾತ್ರೆ ಸಂಬಂಧ ಸಲಹೆ ಸೂಚನೆ ನೀಡಿದ್ದೀರಿ. ಹೀಗಾಗಿ ಜಾತ್ರೆ ನಡೆಸಲು ತಮ್ಮೆಲ್ಲರ ಸಹಕಾರ ಅಗತ್ಯ ಎಂದು ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಮೋಹನ್ ಕುಮಾರಿ, ತಾಪಂ ಇಓ ಪ್ರೇಮ್ ಕುಮಾರ್, ಎಸಿಎಫ್ ಸತೀಶ್, ಸಿಪಿಐ ಲಕ್ಷ್ಮೀಕಾಂತ್, ಧಾರ್ಮಿಕ ದತ್ತಿ ಇಲಾಖೆ ಇಓಗಳಾದ ರಘು, ಪಾರುಪತ್ತೇದಾರ್ ರಾಕೇಶ್, ಮಹದೇವಸ್ವಾಮಿ, ಚುಚ್ಚನಕಟ್ಟೆ ಶ್ರೀರಾಮ ದೇವಾಲಯದ ಪ್ರಧಾನ ಅರ್ಚಕ ವಾಸುದೇವ್, ಆರ್‌ಎಫ್‌ಓ ವಿವೇಕ್, ಅಮೃತ, ಕುಡಿಯುವ ನೀರು ನೈರ್ಮಲ್ಯ ಇಲಾಖೆ ಎಇಇ ಗೋವಿಂದ ನಾಯಕ, ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಎನ್.ಮಹದೇವ ಪ್ರಸಾದ್, ಪಿಡಿಓಗಳಾದ ಚಿನ್ನಸ್ವಾಮಿ, ಪರಮೇಶ್, ಕಂದಾಯ ಇಲಾಖೆಯ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಚಿಕ್ಕವೀರನಾಯಕ, ನಾಗರಾಜು, ಹಿರಿಯ ಮುಖಂಡರಾದ ರಾಮಲಿಂಗೇಗೌಡರು, ಮಹದೇವಪ್ಪ, ಶಂಭುಲಿಂಗನಾಯಕ, ಲಿಂಗರಾಜು, ಗ್ರಾಪಂ ಸದಸ್ಯರಾದ ಪ್ರಕಾಶ್‌ಚಂದ್ರು, ರಮೇಶ್, ಶಿವಕುಮಾರ್, ಚಿಕ್ಕಕ್ಯಾತ, ಪ್ರಕಾಶ್, ಪುಟ್ಟಸ್ವಾಮಿ, ಮುಖಂಡರಾದ ಭವಾನೀಶ್, ಬಸವಣ್ಣ, ಶಿವಪ್ಪ, ನಾಗೇಂದ್ರ ಕುಮಾರ, ನಿಂಗರಾಜು, ಪ್ರಕಾಶ್, ಶಿವರಾಜು, ಮಹೇಶ, ಮಂಜು, ನಿಜಗುಣ, ಮಹದೇವಸ್ವಾಮಿ, ಕೂಸಪ್ಪ, ಲಿಂಗರಾಜು, ಸಾರ್ವಜನಿಕರು ಗ್ರಾಮಸ್ಥರು ಇದ್ದರು.

ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಿಕೊಂಡರೆ ನಾನು ಹೊಣೆಗಾರನಲ್ಲ...

ಜೆಡಿಎಸ್ ನಾಯಕರ ಅನುಮಾನಕ್ಕೆ ಹಿರಿಯ ನಾಯಕ ಜಿ.ಟಿ.ದೇವೇಗೌಡರ ಸ್ಪಷ್ಟನೆ



ಮಂಗಳೂರು, ನ.16– ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡರೆ ನಾನು ಹೊಣೆಗಾರನಲ್ಲ. ಪ್ರಚಾರಕ್ಕೆ ಯಾರೂ ಆಹ್ವಾನಿಸದ ಕಾರಣ ನಾನು ಚನ್ನಪಟ್ಟಣ ಕ್ಷೇತ್ರದಲ್ಲಿ ಪ್ರಚಾರಕ್ಕೆ ಹೋಗಲಿಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಪುನರ್ ಸ್ಪಷ್ಟಪಡಿಸಿದ್ದಾರೆ.

ಮಂಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಚಾಮುಂಡಿಬೆಟ್ಟದಲ್ಲಿ ನಾನೇನು ತಪ್ಪು ಮಾತನಾಡಿದ್ದೇನೆ?. ಕಾಂಗ್ರೆಸ್ ನಾಯಕರೆಲ್ಲಾ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆ ಕೇಳುತ್ತಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿಯವರು ಸಿದ್ದರಾಮಯ್ಯನವರ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ. ಇವರಿಬ್ಬರು ಮಾತ್ರವಲ್ಲದೆ ವಿಪಕ್ಷ ನಾಯಕ ಅಶೋಕ್ ವಿರುದ್ಧವೂ ಎಫ್ಐಆರ್ ಆಗಿದೆ, ಅವರನ್ನೂ ಬಂಧಿಸಬೇಕು ಎನ್ನುತ್ತಾರೆ. ಹಾಗೆಯೇ ಅನೇಕ ಶಾಸಕರು, ಕೇಂದ್ರ ಹಾಗೂ ರಾಜ್ಯದ ಹಲವು ಸಚಿವರ ವಿರುದ್ಧ ಎಫ್ಐಆರ್ ಆಗಿದೆ. ಎಫ್ಐಆರ್ ದಾಖಲಾದ ಮಾತ್ರಕ್ಕೆ ಅವರು ತಪ್ಪಿತಸ್ಥರು ಎಂದಾಗುವುದಿಲ್ಲ. ಹಾಗಾಗಿ ರಾಜೀನಾಮೆ ನೀಡುವ ಅಗತ್ಯವಿಲ್ಲ. ಒಂದು ವೇಳೆ ಎಫ್ಐಆರ್ ಆದವರೆಲ್ಲಾ ರಾಜೀನಾಮೆ ನೀಡಬೇಕೆಂದಾದರೆ ಎಲ್ಲರೂ ಅದನ್ನೇ ಪಾಲಿಸಬೇಕಾಗುತ್ತದೆ ಎಂದು ಹೇಳಿದೆ. ಆ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡರೆ ನಾನೇನು ಮಾಡಲಿ ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದರು.

ನಾನು ಕೋರ್ ಕಮಿಟಿ ಅಧ್ಯಕ್ಷನಾಗಿ ಪ್ರವಾಸದಲ್ಲಿರುವಾಗಲೇ, ಕುಮಾರಸ್ವಾಮಿ ಅವರೇ ಕೋರ್ ಕಮಿಟಿ ಸಭೆ ನಡೆಸಿ, ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಿದರು. ಬಳಿಕ ವಿರೋಧ ಪಕ್ಷದ ನಾಯಕ ಸುರೇಶ್ ಬಾಬು, ನಿಖಿಲ್ ಕುಮಾರಸ್ವಾಮಿ ಸದಸ್ಯತ್ವ ನೋಂದಣಿಗೆ ಮೈಸೂರಿಗೆ ಬಂದಿದ್ದರು. ನನಗೆ ನಿಖಿಲ್ ಕರೆ ಮಾಡಿ, ನೀವು ಸಭೆಗೆ ಬರಬೇಕು ಎಂದಿದ್ದಕ್ಕೆ ನಾನು ಸಭೆಗೆ ಹೋಗಿದ್ದೆ. ಸಭೆಯಲ್ಲಿ ಸಾ.ರಾ.ಮಹೇಶ್ ಮಾತನಾಡಿ, ಇನ್ನು ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ ಪ್ರಶ್ನೆ ಇಲ್ಲ. ಇನ್ನು ಮುಂದೆ ನಾನೇ ನಿಮಗೆಲ್ಲಾ ಬಿ–ಫಾರಂ ನೀಡುವುದು ಎಂದರು. ನಂತರ ನಿಖಿಲ್ ಕುಮಾರಸ್ವಾಮಿ ಭೇಟಿಯಾಗಿ, ಸಾ.ರಾ. ಮಹೇಶ್ ಅವರು ಸ್ವಲ್ಪ ದುಡುಕಿ ಮಾತನಾಡಿದ್ದಾರೆ, ದಯವಿಟ್ಟು ಕ್ಷಮಿಸಿ ಎಂದರು.

ನಂತರದಲ್ಲಿ ಉಪಚುನಾವಣೆಯ 40 ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಕೋರ್ ಕಮಿಟಿ ಅಧ್ಯಕ್ಷನಾದ ನನ್ನ ಹೆಸರನ್ನೇ ಕೈಬಿಡಲಾಯಿತು. ಅಭ್ಯರ್ಥಿ ನಿಖಿಲ್, ದೇವೇಗೌಡರು, ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ ಅಥವಾ ಬೇರೆ ಯಾವ ಸ್ಥಳೀಯ ಮುಖಂಡರೂ ಪ್ರಚಾರಕ್ಕೆ ನನ್ನ ಬನ್ನಿ ಅನ್ನಲಿಲ್ಲ. ಆದ್ದರಿಂದ ನಾನು ಪ್ರಚಾರಕ್ಕೆ ಹೋಗಲಿಲ್ಲ. ನಾನು ಅಲ್ಲಿಗೆ ಹೋಗದೆ ಇರುವುದರಿಂದ ಅಲ್ಲಿನ ಫಲಿತಾಂಶ ಏನಾಗಬಹುದು ಎಂಬುದರ ಮಾಹಿತಿ ನನಗೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಡಾ ಹಗರಣ : ನಿಯಮಾನುಸಾರ ಇರುವುದನ್ನು ಅಕ್ರಮ ಎನ್ನುವುದು ಸರಿಯಲ್ಲ

ಮಂಗಳೂರು, ನ.16– ಮುಡಾದಿಂದ ನಿಯಮಬಾಹಿರವಾಗಿ ಯಾರೇ ನಿವೇಶನ ಪಡೆದಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಿ. ಆದರೆ ನಿಯಮಾನುಸಾರ ಪಡೆದಿರುವ ನಿವೇಶನಗಳನ್ನೂ ಅಕ್ರಮ ಎನ್ನುವುದು ಸರಿಯಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಹಗರಣ ಸಂಬಂಧ ಪ್ರತಿಕ್ರಿಯಿಸಿದ ಅವರು, ದೂರುದಾರ ಸ್ನೇಹಮಯಿ ಕೃಷ್ಣ ತುಂಬಾ ಬುದ್ಧಿವಂತ ಹಾಗೂ ಶಕ್ತಿವಂತ. ಆದರೆ ಎಲ್ಲವನ್ನೂ ಒಂದೇ ದೃಷ್ಟಿಯಿಂದ ನೋಡಿ, ಜನರಿಗೆ ತಪ್ಪು ಮಾಹಿತಿ ನೀಡಬಾರದು ಎಂದರು.

ಮುಡಾ, ರೈತರ ಜಮೀನನ್ನು ನಿಯಮಾನುಸಾರ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡದೆಯೇ ಅಲ್ಲಿ ಬಡಾವಣೆ ನಿರ್ಮಿಸಿದ್ದರೆ, ಅವರಿಗೆ ಸುಪ್ರೀಂಕೋರ್ಟ್ ಆದೇಶದನ್ವಯ ಮೂರು ಪಟ್ಟು ಪರಿಹಾರ ನೀಡಬೇಕು. ಇಲ್ಲವೇ 50:50ರ ನಿಯಮಾನುಸಾರ ನಿವೇಶನಗಳನ್ನು ಕೊಡಬೇಕು. ಇಲ್ಲವೇ ಆತನ ಜಮೀನನ್ನು ವಾಪಸ್ ನೀಡಬೇಕು. ಸ್ವಾಧೀನಪಡಿಸಿಕೊಳ್ಳದೇ ಬಡಾವಣೆ ನಿರ್ಮಾಣಕ್ಕೆ ಭೂಮಿ ಬಳಸಿಕೊಂಡರೆ ಅದಕ್ಕೆ ಸೂಕ್ತ ಪರಿಹಾರ ಕಲ್ಪಿಸಬೇಕು, ಇಲ್ಲ ಭೂಮಿ ವಾಪಸ್ಸು ನೀಡಬೇಕು. ಅದು ಸಾಧ್ಯ ಇಲ್ಲ ಅನ್ನೋ ಕಾರಣಕ್ಕೆ 50:50 ಅನುಪಾತ ಸರ್ಕಾರದ ತೀರ್ಮಾನವಾಗಿದ್ದು, ಇದು ಕಾನೂನುಬದ್ಧವಾಗಿದೆ. ಬಿಡಿಎ, ಹೌಸಿಂಗ್ ಬೋರ್ಡ್ ಅಥವಾ ಯಾವುದೇ ಪ್ರಾಧಿಕಾರಗಳ ಮೂಲಕವೂ ರೈತರಿಂದ ನೇರವಾಗಿ ಖರೀದಿ ಮಾಡಲು ಸಾಧ್ಯವಾಗದ ಕಾರಣದಿಂದಲೇ 50:50 ಜಾರಿಯಲ್ಲಿದೆ ಎಂದು ತಿಳಿಸಿದರು.

ಸ್ನೇಹಮಯಿ ಕೃಷ್ಣ ಅವರು ಮುಡಾದಲ್ಲಿ ಹಲವು ದಾಖಲೆಗಳಿಲ್ಲ ಎಂದಿದ್ದಾರೆ. ಆದರೆ ಈ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ನೀಡಬೇಕು. 4(1) ಹಾಗೂ 6(1) ಆಗಿದ್ದರೆ ಮುಡಾದಲ್ಲಿ ದಾಖಲೆ ಇರುತ್ತವೆ. ಆದರೆ ನಿಯಮಾನುಸಾರ ಭೂಮಿ ಸ್ವಾಧೀನಪಡಿಸಿಕೊಳ್ಳದೆ, ಅತಿಕ್ರಮಿಸಿಕೊಂಡಿರುವ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲ. ಏಕೆಂದರೆ ಅವುಗಳನ್ನು ನೇರವಾಗಿ ಕ್ರಯ ಮಾಡಿಕೊಂಡು 50:50 ಅನುಪಾತದಡಿ ನಿವೇಶನ ನೀಡಲಾಗಿರುತ್ತದೆ. ಪರಿಹಾರವನ್ನು ಪಡೆದೂ ಮತ್ತೆ 50:50ರ ಅನುಪಾತದಡಿ ನಿವೇಶನ ಪಡೆದಿದ್ದರೆ ಅದು ಕಾನೂನು ಬಾಹಿರವಾಗುತ್ತದೆ. ಅಂತಹವರು ನನ್ನ ಸಂಬಂಧಿಕರೇ ಆಗಿರಲಿ, ಮತ್ಯಾರೇ ಇರಲಿ ಅವರಿಗೆ ಶಿಕ್ಷೆಯಾಗಲಿ ಎಂದು ಹೇಳಿದರು.

ಸ್ನೇಹಮಯಿ ಕೃಷ್ಣ ಗಡಿಪಾರಿಗೆ ಪೊಲೀಸರಿಗೆ ಕಾಂಗ್ರೆಸ್ ದೂರು

ಗಡಿಪಾರು ಮಾಡದಿದ್ದರೆ ಇಂದು ಲಕ್ಷ್ಮಿಪುರಂ ಠಾಣೆ ಮುಂದೆ ಧರಣಿ ಎಚ್ಚರಿಕೆ

ಮೈಸೂರು, ನ.16(ಎಂಟಿವೈ)– ಬ್ಲಾಕ್ ಮೇಲ್ ಮಾಡುವುದನ್ನೂ ಕಾಯಕವಾಗಿಸಿಕೊಂಡಿರುವ ಸ್ನೇಹ ಮಯಿ ಕೃಷ್ಣ ಅವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ, ಗಡಿಪಾರು ಮಾಡದಿದ್ದರೆ ನ.17ರಂದು ಬೆಳಗ್ಗೆ 10 ಗಂಟೆಯಿಂದ ಲಕ್ಷ್ಮಿಪುರಂ ಪೊಲೀಸ್ ಠಾಣೆ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳು ವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ಶನಿವಾರ ಸ್ನೇಹಮಯಿ ಕೃಷ್ಣ ವಿರುದ್ಧ ಗೂಂಡ ಕಾಯ್ದೆಯಡಿ ಬಂಧಿಸಿ, ಗಡಿಪಾರು ಮಾಡಬೇಕು ಎಂದು ದೂರು ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆಸ್ತಿ ವಿವಾದವನ್ನೇ ಹುಡುಕುವ ಮೂಲಕ ದುರ್ಬಲರ ವಿರುದ್ಧ ದಬ್ಬಾಳಿಕೆ ಮಾಡುತ್ತಾ ಬಂದಿದ್ದ ಸ್ನೇಹಮಯಿ ಕೃಷ್ಣ, ಇದೀಗ ಪ್ರಭಾವಿಗಳು ಹಾಗೂ ಅಧಿಕಾರಿಗಳನ್ನು ಬ್ಲಾಕ್ ಮೇಲ್ ಮಾಡಲಾರಂಭಿಸಿದ್ದಾನೆ. ಅಲ್ಲದೆ, ಜು.16ರಂದು ಇನ್ಸ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯಲ್ಲಿ ರುವ ಕಚೇರಿಯಲ್ಲಿದ್ದಾಗ ಸ್ನೇಹಮಯಿ ಕೃಷ್ಣನ ಇಬ್ಬರು ಸಹಚರರು ನನಗೆ ಜೀವ ಬೆದರಿಕೆ ಹಾಕಿದ್ದಾರೆ. ಈತನ ಮೇಲೆ ಮೈಸೂರು ನಗರ ಒಂದರಲ್ಲೇ 17 ಪ್ರಕರಣ ದಾಖಲಾಗಿದ್ದು, ರಾಜ್ಯದ ಇತರೆಡೆಗಳಲ್ಲೂ ಪ್ರಕರಣಗಳು



ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಪಕ್ಷದ ಮುಖಂಡರು ಶನಿವಾರ ಲಕ್ಷ್ಮೀಪುರಂ ಠಾಣೆಗೆ ದೂರು ನೀಡಿದರು.

ದಾಖಲಾಗಿವೆ. ಈತ ಒಬ್ಬ ರೌಡಿ ಶೀಟರ್, ಸಿಎಂ ಸಿದ್ಧರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಪಡೆದಿದ್ದ ಮುಡಾ ಸೈಟ್ ವಿಚಾರಕ್ಕೆ ಸಂಬಂಧಿಸಿದಂತೆ ಆತನ ಸಹಚರರನ್ನು ಕಳುಹಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ. ಅದಕ್ಕೆ ಒಪ್ಪದಿದ್ದಾಗ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ತನಿಖಾ ಸಂಸ್ಥೆ ಗಳಿಗೆ ದೂರು ನೀಡಿದ್ದಾನೆ ಎಂದು ಆರೋಪಿಸಿದರು.

ಕೆಲ ಇಲಾಖೆಗಳ ನಕಲಿ ಸೀಲ್‌ಗಳನ್ನು ಇಟ್ಟುಕೊಂಡು ಹಾಗೂ ಆರ್‌ಟಿಐ ಮಾಹಿತಿ ಸೀಲ್‌ಗಳನ್ನು ನಕಲಿಯಾಗಿ ಮಾಡಿಸಿಕೊಂಡು ದಾಖಲೆಗಳನ್ನು ತಿರುಚಿ ಮತ್ತು ಕೆಲ ಅಕ್ಷರಗಳಿಗೆ ವೈಟ್‌ನರ್‌ನ್ನು ಹಾಕುತ್ತಿರುವುದು ಕಂಡು ಬಂದಿರುತ್ತದೆ. ಇವನ ವಿರುದ್ಧ ಸುಮಾರು 17 ಕ್ರಿಮಿನಲ್ ಪ್ರಕರಣಗಳು 10 ವರ್ಷದಿಂದ ಇದ್ದರೂ ಪೊಲೀಸ್ ಇಲಾಖೆ ಸೆಕ್ಯೂರಿಟಿ ಕೇಸ್‌ನ್ನು 6 ತಿಂಗಳಿಗೊಮ್ಮೆ ಹಾಕಬೇಕಾಗಿರುವ ನಿಯಮವಿದ್ದು ಹಾಕಿರುವುದಿಲ್ಲ. ಇವನು ಒಬ್ಬ ರೌಡಿಶೀಟರ್ ಆಗಿದ್ದು ನಗರದ ಗಣ್ಯ ವ್ಯಕ್ತಿಗಳನ್ನು ನಿರಂತರವಾಗಿ ಬ್ಲಾಕ್ ಮೇಲ್ ಮಾಡಿಕೊಂಡು ಬರುತ್ತಿದ್ದರೂ ಪೊಲೀಸ್ ಇಲಾಖೆ ಜಾಣ ಕುರುಡು ಪ್ರದರ್ಶಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಇದಲ್ಲದೆ ನ.15 ರಂದು ಸ್ನೇಹಮಯಿ ಕೃಷ್ಣರವರ ಫೇಸ್‌ಬುಕ್ ಖಾತೆಯಲ್ಲಿ ನನ್ನ ವಿರುದ್ಧ ಇಲ್ಲ–ಸಲ್ಲದ ಆರೋಪಗಳನ್ನು ಮಾಡಿರುತ್ತಾನೆ. ಇವನಿಂದ ನನ್ನ ಜೀವಕ್ಕೆ ಬೆದರಿಕೆ ಇದೆ ಎಂದ ಅವರು, ಸ್ನೇಹಮಯಿ ಕೃಷ್ಣನ ವಿರುದ್ಧ ಗೂಂಡಾ ಕಾಯ್ದೆ ದಾಖಲಿಸಿ, ಬಂಧಿಸಬೇಕು ಹಾಗೂ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಈತನ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ನ.17 ರ ರವಿವಾರ ಬೆಳಿಗ್ಗೆ 10 ಗಂಟೆ ನಂತರ ಲಕ್ಷ್ಮಿಪುರಂ ಪೊಲೀಸ್ ಠಾಣೆ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ನಡೆಸಲಾ ಗುವುದು. ಈ ಧರಣಿ ಕಾಂಗ್ರೆಸ್ ಪಕ್ಷದ ವತಿಯಿಂದ ಮಾಡುತ್ತಿಲ್ಲ. ಮೈಸೂರು ನಗರದ ನಾಗರೀಕರ ಹಿತದೃಷ್ಟಿ ಯಿಂದ ಈ ಧರಣಿ ನಡೆಸುತ್ತಿದ್ದು, ಸ್ನೇಹಮಯಿ ಕೃಷ್ಣನಿಂದ ಅನ್ಯಾಯಕ್ಕೊಳಗಾಗಿರುವವರು, ನೊಂದವರು ಮೈಸೂರಿನ ನಾಗರೀಕರು ಭಾಗವಹಿಸಬಹುದು ಎಂದು ಮನವಿ ಮಾಡಿದರು. ಇದೇ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಧ್ಯಮ ವಕ್ತಾರ ಮಹೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗ್ರಾಮ ಪಂಚಾಯಿತಿ ಉಪ ಚುನಾವಣೆ: ಸಂತೆ ಜಾತ್ರೆಗಳ ನಿಷೇಧ

ಮೈಸೂರು, ನ.16–ಗ್ರಾಮ ಪಂಚಾಯಿತಿ ಉಪ ಚುನಾವಣೆ–2024 ರ ಸಂಬಂಧ ಮತದಾನದ ಕಾರ್ಯವನ್ನು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಎಲ್ಲಾ ವಿಧದ ಸಂತೆ, ಜಾತ್ರೆಗಳನ್ನು ನಿಷೇಧಿಸಲಾಗಿದೆ.

ಮೈಸೂರು ತಾಲೂಕಿನ 24–ಜಯಪುರ, 18–ಸೋಮೇಶ್ವರಪುರ, 15–ವರುಣ, ಟಿ.ನರಸೀಪುರ ತಾಲೂಕಿನ 24–ಟಿ.ದೊಡ್ಡಪುರ, 27–ಕೊತ್ತೇಗಾಲ, 23–ಕಲಿಯೂರು, ಹುಣಸೂರು ತಾಲೂಕಿನ 17–ಬಿಳಿಗೆರೆ, 5–ಮುಳ್ಳೂರು, 32–ಉಮ್ಮತ್ತೂರು, ಸಾಲಿಗ್ರಾಮ ತಾಲೂಕಿನ 30–ಹಳಿಯೂರು, 5–ಲಕ್ಷ್ಮಿಪುರ, ಪಿರಿಯಾಪಟ್ಟಣ ತಾಲೂಕಿನ 20–ಮಾಲಂಗಿ, 9–ಬೆಟ್ಟದಪುರ, 19–ಪಂಚವಳ್ಳಿ, ಸರಗೂರು ತಾಲೂಕಿನ 5–ಮುಳ್ಳೂರು, 12–ಬಿ ಮಟಕೆರೆ, ನಂಜನಗೂಡು ತಾಲೂಕಿನ 15–ಕಾರ್ಯ, ಹುಳಿಮಾವು ಹಾಗೂ ಕುರಿಹುಂಡಿ ಗ್ರಾಮ ಪಂಚಾಯಿತಿಗಳಲ್ಲಿ ನವೆಂಬರ್ 23 ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಎಲ್ಲಾ ವಿಧದ ಸಂತೆ ಜಾತ್ರೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಜಿ. ಲಕ್ಷ್ಮಿಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳೂರಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ



ಮಂಗಳೂರಿನಲ್ಲಿ ಶನಿವಾರ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ಲಕ್ಷ್ಮಣ ಸವದಿ, ಶಾಸಕರು, ಮಹಾಮಂಡಳದ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡರು, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಭರತ್ ಶೆಟ್ಟಿ, ಯಶಪಾಲ್ ಸುವರ್ಣ, ಮಾರಾಟ ಮಹಾಮಂಡಳದ ಅಧ್ಯಕ್ಷ ರಾಜೇಂದ್ರಕುಮಾರ್, ಮಹಾಮಂಡಳದ ನಿರ್ದೇಶಕ ಜಯಕರ ಶೆಟ್ಟಿ ಇಂದ್ರಾಳಿ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪ್ರಸಾದ್ ಕೌಶಲ್ ಶೆಟ್ಟಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರು, ನಿರ್ದೇಶಕರು, ಯೂನಿಯನ್ ಉಪಾಧ್ಯಕ್ಷರು, ನಿರ್ದೇಶಕರು, ಮಾರಾಟ ಮಹಾಮಂಡಳದ ನಿರ್ದೇಶಕರು, ಅಧಿಕಾರಿಗಳು, ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

ಇಂದು ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಮೈಸೂರು, ನ.16–ಹಿಮಾಲಯ ಪ್ರತಿಷ್ಠಾನದಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನೀಡಲಾಗುವ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿಯನ್ನು ನ.17 ರಂದು ಸಂಜೆ 5 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಭವನದಲ್ಲಿ ಪ್ರದಾನ ಮಾಡಲಾಗುವುದು.

ಹಿರಿಯ ವಿದ್ವಾಂಸರಾದ ಡಾ.ಸಿ.ಪಿ.ಕೆ. ಕಾರ್ಯಕ್ರಮ ಉದ್ಘಾಟಿಸಲಿದ್ದು, ಶ್ರೀ ವಿದ್ಯಾರಣ್ಯರ ಭಾವಚಿತ್ರಕ್ಕೆ ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್. ಸಂದೇಶ್‌ಕುಮಾರ್ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಟಿ.ಎಸ್. ಶ್ರೀವತ್ಸ ಹಿಮಾಲಯ ದರ್ಶನಂ ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ. ಶಾಸಕ ಸಿ.ಎನ್.ಮಂಜೇಗೌಡ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಸಮಾಜ ಸೇವಕರಾದ ಡಾ.ಕೆ.ರಘುರಾಂ ವಾಜಪೇಯಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ರಾಜಶೇಖರ ಮೆಡಿಕಲ್ ಫೌಂಡೇಷನ್‌ನ ನಿರ್ದೇಶಕ ಡಾ.ಹೆಚ್.ಬಿ.ರಾಜಶೇಖರ್, ಹಿರಿಯ ಸಮಾಜ ಸೇವಕಿ ಡಾ.ಎ.ಪುಷ್ಪಾ ಐಯ್ಯಂಗಾರ್ ಭಾಗವಹಿಸಲಿದ್ದಾರೆ.

ಇದೇ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 12 ಮಂದಿ ಸಾಧಕರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಬಸವಾದಿ ಶರಣರ ವಚನಗಳು ಸರ್ವ ಕಾಲಕ್ಕೂ ಅನ್ವಯ

ಶ್ರೀ ಸಿದ್ದಮಲ್ಲ ಸ್ವಾಮೀಜಿ ಅಭಿಮತ

ಮೈಸೂರು, ನ.16(ಎಂಟಿವೈ)– 12 ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳು ಸರ್ವಕಾಲಕ್ಕೂ ಅನ್ವಯವಾಗಲಿದ್ದು, ಮಹತ್ವದ ಸಂದೇಶ ನೀಡುವ ವಚನಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಸುಖ ಶಾಂತಿ ನೆಲೆಸುತ್ತದೆ ಎಂದು ಮೈಸೂರಿನ ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗೌರಿಶಂಕರನಗರದಲ್ಲಿರುವ ಪಂಚಗವಿ ಮಠದ ಮುಂಭಾಗದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ ಶನಿವಾರ ನಡೆದ 'ಲಿಂಗಾಯತ ಧರ್ಮದ ವಚನಾಧಾರಿತ ನಿಜಾಚರಣೆಯ ಕಮ್ಮಟ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಚನಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಶರಣರು ನೀಡಿದ್ದ ಹೇಳಿಕೆಯಂತೆ ಎರಡೆಂಬತ್ತು ಕೋಟಿ ವಚನಗಳಿದ್ದವು ಎಂದು ತಿಳಿದು ಬರುತ್ತದೆ. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಹಲವು ವಚನಗಳನ್ನು ಸೈನಿಕರು ಸುಟ್ಟು ಹಾಕಿದ್ದಾರೆ. ಇಂತಹ ಸಂದರ್ಭದಲ್ಲಿ ವಚನಗಳ ಸಂರಕ್ಷಣೆ ಅಗತ್ಯ. ಆದರೆ, ಸರ್ಕಾರ ಮುದ್ರಿಸಿದ ವಚನಗಳು ಕೇವಲ 2 ಪುಸ್ತಕಗಳಿಗೆ ಸೀಮಿತವಾಗಿದೆ. ಇಂದು ಲಿಂಗವಂತರು ವಚನಗಳನ್ನು ಮರೆಯುತ್ತಿದ್ದಾರೆ. ಇದರಿಂದ ವಚನದ ಕೊಂಡಿ ಕಳಚಿ ಬೀಳುವಂತಾಗಿದೆ ಎಂದು ವಿಷಾದಿಸಿದರು.



ಮೈಸೂರಿನ ಗೌರಿಶಂಕರನಗರದಲ್ಲಿರುವ ಪಂಚಗವಿ ಮಠದ ಮುಂಭಾಗದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ ಶನಿವಾರ ನಡೆದ 'ಲಿಂಗಾಯತ ಧರ್ಮದ ವಚನಾಧಾರಿತ ನಿಜಾಚರಣೆಯ ಕಮ್ಮಟ'ದಲ್ಲಿ ನೀಲಕಂಠಸ್ವಾಮಿ ಮಠ ಶ್ರೀ ಸಿದ್ದಮಲ್ಲ ಸ್ವಾಮೀಜಿ ಮಾತನಾಡುತ್ತಿರುವುದು.

ಜೀವನವನ್ನು ಸರಿದಾರಿಯತ್ತ ಕೊಂಡೊಯ್ಯುವ ಶಕ್ತಿಯುಳ್ಳ, ಮಹತ್ತರ ಸಂದೇಶವನ್ನು ಒಳಗೊಂಡಿರುವ ವಚನಗಳನ್ನು ನಾವೆಲ್ಲರೂ ಮತ್ತೆ ಮನನ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. 12ನೇ ಶತಮಾನವದಲ್ಲಿಯೇ ಬಸವಣ್ಣನವರು ಕೊಟ್ಟ ಸಪ್ತ ಸೂತ್ರಗಳು ಇಂದಿಗೂ ಪ್ರಸ್ತುತವಾಗಿದ್ದು, ಅವುಗಳನ್ನು ನಾವು ಅಳವಡಿಸಿಕೊಳ್ಳಬೇಕು. ಶರಣರ ನೈಜ ವಚನಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಮಹಿಳೆಯರಿಗೆ, ಪುರುಷರಿಗೆ ಸಮಾನತೆ ಕಲ್ಪಿಸಿದರು. ಇದಕ್ಕೆ ನಾವು ಅಭಾರಿಯಾಗಿರಬೇಕು ಎಂದರು.

ಈ ಹಿಂದೆ ಭಾರತದಲ್ಲಿ ವೈಷ್ಣವ ಮತ್ತು ಶೈವ ಧರ್ಮವಿತ್ತು. ವಿಷ್ಣುವನ್ನು ಪೂಜಿಸುವ ವೈಷ್ಣವರು, ಶಿವನನ್ನು ಪೂಜಿಸುವವರನ್ನು ಶೈವರೆಂದು ಕರೆಯಲಾಯಿತು. ಶೈವರಲ್ಲಿ ವೀರಶೈವ ಎಂಬ ಪದ ಹುಟ್ಟಿಕೊಂಡಿತು. ಈ ರೀತಿ ಹುಟ್ಟಿದ ವೀರಶೈವ ಎಷ್ಟೇ ಪ್ರಯತ್ನಪಟ್ಟರೂ ಸ್ವತಂತ್ರ ಧರ್ಮವಾಗಲಿಲ್ಲ. ಅವರು ಬುದ್ಧಿವಂತರಾಗಿದ್ದರೆ ಲಿಂಗಾಯತ ಧರ್ಮಕ್ಕಾದರೂ ಪ್ರೋತ್ಸಾಹ ನೀಡಬಹುದಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಅಷ್ಟಾವರಣ ಹಾಗೂ ಪಂಚಾಚಾರಗಳ ಸ್ಥೂಲ ಪರಿಚಯ ಮತ್ತು ಷಟ್‌ಸ್ಥಳ ಸಿದ್ಧಾಂತ' ಕುರಿತು ಪಿ.ರುದ್ರಪ್ಪ, 'ಲಿಂಗಾಯತ ಧರ್ಮದ ಆಚರಣೆಗಳು ಹಾಗೂ ಸಂಸ್ಕಾರ, ಅಂತ್ಯಸಂಸ್ಕಾರ ಮತ್ತು ಸ್ಮರಣೋತ್ಸವ' ಕುರಿತು ಎಂ.ಎಂ.ಸಂಗೊಳ್ಳಿ ಹಾಗೂ 'ಕಲ್ಯಾಣ ಮಹೋತ್ಸವದ ಚಿಂತನ ಹಾಗೂ ಕಾರ್ಯವಿಧಾನ, ಇತರೆ ಆಚರಣೆ ಮತ್ತು ಸಂಸ್ಕಾರ' ಕುರಿತು ಎಸ್.ಎನ್.ಅರಭಾವಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಮಹದೇವಪ್ಪ ಕಾರ್ಯದರ್ಶಿ ಬಿ.ಎಂ. ಮರಪ್ಪ ಇತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಂಗುವಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಂಗುವಾ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಮರನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ತಾರಕೇಶ್ವರ(ಕ)+ ಯಲಾಕುನ್ನಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಮೈಸೂರು,ನ16(ಪಿಎಂ)– ಹಿಮಾಲಯ ಪ್ರತಿಷ್ಠಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿ ಆಶ್ರಯದಲ್ಲಿ ನ.17ರಂದು ಕನ್ನಡ ರಾಜ್ಯೋತ್ಸವ ಪ್ರಯುಕ್ತ ಹಲವು ಸಾಧಕರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಭವನದಲ್ಲಿ ಅಂದು ಸಂಜೆ 5ಕ್ಕೆ ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಲಿದ್ದಾರೆ. ಶ್ರೀ ವಿದ್ಯಾರಣ್ಯರ ಭಾವಚಿತ್ರಕ್ಕೆ ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್.ಸಂದೇಶ್‌ಕುಮಾರ್ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಹಿಮಾಲಯ ದರ್ಶನಂ ಕಿರುಹೊತ್ತಿಗೆಯನ್ನು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಲಿದ್ದಾರೆ.

ಶಾಸಕ ಸಿ.ಎನ್.ಮಂಜೇಗೌಡ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ರಾಜಶೇಖರ್ ಮೆಡಿಕಲ್ ಫೌಂಡೇಷನ್‌ನ ನಿರ್ದೇಶಕ ಡಾ.ಹೆಚ್.ಬಿ.ರಾಜಶೇಖರ್, ಹಿರಿಯ ಸಮಾಜ ಸೇವಕಿ ಡಾ.ಎ.ಪುಷ್ಪಾ ಐಯ್ಯಂಗಾರ್ ಭಾಗವಹಿಸಲಿದ್ದಾರೆ.

ಇದೇ ಸಂದರ್ಭ ಮೋಹನ್ ವೆರ್ಣೇಕರ್ (ಕಲೆ), ಡಾ.ಅರಕಲಗೂಡು ನೀಲಕಂಠ ಮೂರ್ತಿ (ಕಾವ್ಯ), ಎಂ.ಎಸ್.ರಾಮನಾಥ ಗುಪ್ತ (ಉದ್ಯಮ), ಅಡ್ಡಂಡ ಸಿ.ಕಾರ್ಯಪ್ಪ (ರಂಗಭೂಮಿ), ನೀಲಕಂಠನಹಳ್ಳಿ ತಮ್ಮಣ್ಣಗೌಡ (ಸಾಹಿತ್ಯ), ಡಾ.ಸಿ.ರೇಮೇಶ್ ಶೆಟ್ಟಿ (ಯೋಗ), ಡಾ.ಹನುಮಂತಾಚಾರ್ ಜೋಷಿ (ಶಿಕ್ಷಣ), ಮಾಲತಿ ಕೃಷ್ಣಪ್ರಸಾದ್ (ಮುಕ್ತಕ ಸಾಹಿತ್ಯ), ಎಸ್.ಉಮೇಶ್ (ಅನುವಾದ ಸಾಹಿತ್ಯ), ಎಂ.ಪಿ. ವಿಜಯಕುಮಾರ್ (ವಿದ್ವತ್), ಎಂ.ಎಸ್. ನಾಗೇಶ್ (ಸಮಾಜ ಸೇವೆ) ಮತ್ತು ಡಾ.ನಾರಾಯಣ ಹೆಗಡೆ (ವೈದ್ಯಕೀಯ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮೈಸೂರಲ್ಲಿ ಸಂಗೀತ ಸಂಜೆ

ಮೈಸೂರು, ನ.16(ಜಿಎ)–ಮೈಸೂರಿನ ಸಿಎಚ್‌ವೈಕೆ ಸ್ಟುಡಿಯೊ ವತಿಯಿಂದ ನ.18ರಂದು ಸಂಜೆ 5 ಗಂಟೆಗೆ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಸಂಗೀತ ರಸ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸ್ಟುಡಿಯೊ ಮಾಲೀಕ ಎಲ್.ಚಂದ್ರಶೇಖರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಕನ್ನಡದ ಹಳೆಯ ಚಲನಚಿತ್ರ ಗೀತೆಗಳನ್ನು ಹಾಡಲಾಗುತ್ತದೆ. ಅತಿಥಿಗಳಾಗಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಕಾರ್ಯದರ್ಶಿ ಸುಧೀರ್, ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್, ಪ್ರಮುಖ ರಾದ ಉಮೇಶ್, ಡಾ.ಶುಶ್ರುತ್ ಗೌಡ, ಶಂಕರ್, ಮೈಸೂರು ಮೋಹನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಗಾಯಕರಾದ ಲಕ್ಷ್ಮಿ ದಿನೇಶ್, ಪುಷ್ಪಲತಾ, ಜಾಯ್ಸ್ ವೈಶಾಖ್, ಪಾವನ, ಸುರೇಶ್, ಪ್ರಮಥ ಮಂಜುನಾಥ್, ಪರಮೇಶ್ ಹಾಡುವರು. ವಾದ್ಯವೃಂದದಲ್ಲಿ ಬಸವರಾಜ್, ವಿನಯ್, ಮೆಥ್ಯಾಸ್, ವಿನ್ಸೆಂಟ್, ಕುಮ್ಮಿ, ಪ್ರದೀಪ್, ಕಿರಣ್, ರಘುನಾಥ್ ಅವರುಗಳು ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು.

ಮಹಾನಗರಗಳಲ್ಲಿ ಮಹಿಳೆಯರು ಅಡುಗೆ ಮನೆಗೆ ಹೋಗುವುದನ್ನೇ ಮರೆತ್ತಿದ್ದಾರೆ

ಶ್ರೀ ವಿನಯ್ ಗುರೂಜಿ ವಿಷಾದ



ಮೈಸೂರು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಹಿರಿಯ ಸಹಕಾರಿಗಳು, ಜನಪ್ರತಿನಿಧಿಗಳು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.



ಅವಧೂತ ಶ್ರೀ ವಿನಯ ಗುರೂಜಿ

ಮೈಸೂರು, ನ.16(ಎಸ್‌ಪಿಎನ್)– ಬೆಂಗಳೂರು ಮಹಾನಗರ ಸೇರಿದಂತೆ ದೇಶದ ಇತರೆ ಮಹಾನಗರಗಳಲ್ಲಿ ಬಹುತೇಕ ಮಹಿಳೆಯರು ಅಡುಗೆ ಮನೆಗೆ ಹೋಗುವುದನ್ನೇ ಮರೆತಿದ್ದಾರೆ. ಇದರಿಂದ ಕುಟುಂಬದ ಎಲ್ಲಾ ಸದಸ್ಯರಲ್ಲೂ ಬಗೆಬಗೆಯ ರೋಗ–ರುಜಿನಗಳು ಕಾಣಿಸಿಕೊಳ್ಳುತ್ತಿವೆ ಎಂದು ಚಿಕ್ಕಮಗಳೂರು ಜಿಲ್ಲೆ ಗೌರಿಗದ್ದೆಯ ಅವಧೂತ ಶ್ರೀ ವಿನಯ ಗುರೂಜಿ ಆತಂಕ ವ್ಯಕ್ತಪಡಿಸಿದರು.

ಮೈಸೂರು ಯಾದವಗಿರಿಯ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಸಹಕಾರ ಸಪ್ತಾಹ ಪ್ರಯುಕ್ತ ಹಿರಿಯ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಮ್ಮ ಮನೆಯ ಗೃಹಿಣಿ ಶಕ್ತಿ ದೇವತೆ ಇದ್ದಂತೆ. ಆಕೆ ಸ್ವಲ್ಪ ಯಾಮಾರಿದರೂ ಮನೆ ಸದಸ್ಯರೆಲ್ಲಾ ವಿವಿಧ ರೋಗಗಳಿಗೆ ತುತ್ತಾಗುತ್ತಾರೆ. ಹಾಗಾಗಿ ಮಹಿಳೆಯರು ಸಾಧ್ಯವಾದಷ್ಟು ಮನೆಯ ಸದಸ್ಯರಿಗೆ ತಾವೇ ತಯಾರಿಸಿದ ಊಟ–ತಿಂಡಿ ಕೊಡಲು ಪ್ರಯತ್ನಿಸಿ ಎಂದು ಸಲಹೆ ನೀಡಿದರು.

ಮನೆಯಲ್ಲಿ ಊಟ ಇಲ್ಲದಿದ್ದರೆ, ಹೋಟೆಲ್‌ಗೆ ಬರುತ್ತಾರೆ. ಆಗ ಅವರಿಗೆ ರುಚಿರುಚಿಯಾದ ಊಟ ನೀಡುವುದು ಹೋಟೆಲ್ ಮಾಲೀಕರ ಜವಾಬ್ದಾರಿ. ಹೋಟೆಲ್ ನಿರ್ವಹಣೆಯನ್ನು ನಾನು ಉದ್ಯಮ ಎಂದು ಕರೆಯುವುದಿಲ್ಲ. ಅದನ್ನು ಜನಸೇವೆ ಎಂದು ಕರೆಯಲು ಇಷ್ಟಪಡುತ್ತೇನೆ ಎಂದರಲ್ಲದೆ, ಹೋಟೆಲ್ ಮಾಲೀಕರು ಹಣ ಹೆಚ್ಚಿಗೆ ಪಡೆದರೂ ಪರವಾಗಿಲ್ಲ. ಆರೋಗ್ಯಕ್ಕೆ ಹಿತಕರವಾದ ಆಹಾರ ಕೊಡಿ, ಕೊಬ್ಬು ಮಿಶ್ರಿತ ಎಣ್ಣೆ ಹಾಕುವುದನ್ನು ಕಡಿಮೆ ಮಾಡಿ ಎಂದು ಮನವಿ ಮಾಡಿದರು.

'2047 ವಿಕಸಿತ ಭಾರತ'ಕ್ಕೆ ಮುನ್ನುಡಿಯಾಗಲಿ: ಸಾಂಸ್ಕೃತಿಕ ನಗರಿ ಮೈಸೂರು ಕೂಲ್ ಸಿಟಿ. ಇಲ್ಲಿ ಟ್ರಾಫಿಕ್ ಫ್ರೀ ರಸ್ತೆಗಳನ್ನು ಕಾಣಬಹುದು. ಮಂಗಳೂರು ಸ್ವಲ್ಪ ಬಿಸಿಗಾಳಿ ಬೀಸುವ ಪ್ರದೇಶ. ಬೆಂಗಳೂರು ಟ್ರಾಫಿಕ್ ಸಮಸ್ಯೆಯಿಂದ ಕೂಡಿದೆ ಎಂದ ಅವರು, ಪ್ರಧಾನಿ ಮೋದಿ ಅವರು 2047ಕ್ಕೆ ವಿಕಸಿತ ಭಾರತ ಆಗಬೇಕು ಎಂದು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಮೈಸೂರು ಹೋಟೆಲ್ ಮಾಲೀಕರ ಕೊಡುಗೆಯೂ ಸೇರಬೇಕು. ಮೈಸೂರಿನ ಖ್ಯಾತ ಯೋಗಪಟು ಕೆ.ಪಟ್ಟಾಭಿ ಜೋಯಿಸ್ ಮೈಸೂರಿನ ಯೋಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗೊಳ್ಳುವಲ್ಲಿ ಅವರ ಕಾಣಿಕೆಯೂ ಇದೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಇಲ್ಲಿನ ಯೋಗಕೇಂದ್ರಗಳು ಶ್ರಮಿಸಲಿ ಎಂದು ಆಶಿಸಿದರು.

ಎಂಎಲ್‌ಸಿ ಎ.ಎಚ್.ವಿಶ್ವನಾಥ್ ಮಾತನಾಡಿ, ಮನುಷ್ಯ ಏಕಾಂಗಿಯಾಗಿ ಏನನ್ನೂ ಸಾಧಿಸಲು ಆಗಲ್ಲ. ಸಾಂಘಿಕ ಸಹಕಾರದ ವ್ಯವಸ್ಥೆಯಿಂದ ಮತ್ತೊಬ್ಬರ ಸ್ನೇಹದ ಮೂಲಕ ಸಾಧನೆ ಮಾಡಬೇಕಿದೆ. ಪ್ರತಿಯೊಬ್ಬರನ್ನೂ ಒಳಗೊಳ್ಳುವಂತೆ ಮಾಡುವುದು ಮಾತೃಹೃದಯ ಎಂದರು. ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನನ್ನ ಪದವಿ ಮುಗಿದ ನಂತರ ನಾನು ಕೂಡ ಹೋಟೆಲ್‌ನಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದೇನೆ ಎಂದರು.

32 ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ 32 ಸಾಧಕರನ್ನು ಸನ್ಮಾನಿಸಲಾಯಿತು. ಸಹಕಾರ ಕ್ಷೇತ್ರದಿಂದ ಹಿರಿಯ ಸಹಕಾರಿಗಳಾದ ರಾಮಚಂದ್ರೇಗೌಡ, ಡಿ.ವಿ. ಜೋಷಿ ಅವರನ್ನು ಸನ್ಮಾನಿಸಲಾಯಿತು.

ಹೋಟೆಲ್ ಉದ್ಯಮದಿಂದ ಕೋರಂ ಮತ್ತು ಗುಪ್ತ ಹೋಟೆಲ್‌ನ ಗೋಪಿನಾಥ್ ಗುಪ್ತ, ದರ್ಶನ್ ಪ್ಯಾಲೇಸ್‌ನ ವಿ.ಧರ್ಮಪ್ರಕಾಶ್, ಹೋಟೆಲ್ ಗುರುಪ್ರಸಾದ್‌ನ ಕೃಷ್ಣಮೂರ್ತಿ, ಹೇಮಂತ್ ಹೋಟೆಲ್‌ನ ರಾಮಣ್ಣ, ವೈಶಾಖ್ ಇಂಟರ್‌ನ್ಯಾಷನಲ್‌ನ ಅಶೋಕ ಗೋವಿಂದೇಗೌಡ, ಹೆರಿಟೇಜ್‌ನ ಶೆಲ್ಟರ್‌ನ ಗ್ರೇಷಿಯಸ್ ರೋಡ್ರಿಗಸ್ ಹಾಗೂ ಯುವ ಹೋಟೆಲ್ ಉದ್ಯಮಿಗಳಾದ ವಿಶಾಖ್ ಭಟ್, ಸುದೀಪ್, ರವಿನಂದನ್ ಶೆಟ್ಟಿ, ಕಿರಣ್ ಎ ತಂತ್ರಿ, ತ್ರಿ ವಿಕ್ರಮ, ದಿವಾಕರ್ ನಾಯಕ್ ಅವರನ್ನು ಸನ್ಮಾನಿಸಲಾಯಿತು.

ರಾಜಕೀಯ ಕ್ಷೇತ್ರದಿಂದ ಬಿ.ಸಿದ್ದರಾಜು, ಮಾ.ವಿ.ರಾಮಪ್ರಸಾದ್, ಯಶಸ್ವಿ ಸೋಮಶೇಖರ್ ಹಾಗೂ ಡ್ರೋನ್ ಸ್ಪೆಷಾಲಿಸ್ಟ್ ಜಿ.ಎಸ್. ಸುಮೋಘ್, **ವೈದ್ಯಕೀಯ ಕ್ಷೇತ್ರದಿಂದ** ಡಾ.ಬಿ.ಎಸ್. ಮೈತ್ರಿ, ಲೆಕ್ಕ ಪರಿಶೋಧಕರಾದ ಅರ್ಜುನ್ ಕೆ.ರಾವ್. ಕೆ ಗಿರೀಶ್, ಎನ್. ಆಶ್ವಿನಿ ಅವರನ್ನು ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಾದ ಸಿಂಚನ ಎ.ಶೆಟ್ಟಿ, ವಿಖ್ಯಾತ ಪುರಾಣಿಕ್, ಬಿ. ಚೇತನಾ, ಅನನ್ಯ ಹೆಗಡೆ, ಲಾವಣ್ಯ ಹಾಗೂ ಕನ್ನಡದಲ್ಲಿ 125 ಅಂಕ ಪಡೆದ ವಿದ್ಯಾರ್ಥಿಗಳಾದ ಸಿ. ಭಾನುಪ್ರಕಾಶ್, ಚಂದನ್ ಕುಮಾರ್, ಅನನ್ಯ ಅವರನ್ನು ಗೌರವಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರದ ಸಂಘದ ನಾರಾಯಣ ವಿ.ಹೆಗಡೆ, ಆರ್.ಮಂಜುನಾಥ್, ಹೋಟೆಲ್ ಮಾಲೀಕರ ಧರ್ಮದತ್ತಿ ಸಂಘದ ಅಧ್ಯಕ್ಷ ರವಿಶಾಸ್ತ್ರಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘದ ಉಪಾಧ್ಯಕ್ಷ ಎಂ.ಆನಂದ ಸೆಟ್ಟಿ, ನಿರ್ದೇಶಕರಾದ ಸುಬ್ರಹ್ಮಣ್ಯ ಆರ್ .ತಂತ್ರಿ, ಪಿ.ನಾರಾಯಣ ಕುಂದರ್, ಎಂ.ರಘುವೀರ್ ಪುರಾಣಿಕ್, ಕೆ.ಸಿ.ವಿಶ್ವಾನಂದ ಭಟ್, ಹೇಮಂತ್ ಕುಮಾರ, ಎಂ.ಎಸ್.ಜಯಪ್ರಕಾಸ್, ಸುಮಿತ್ರ ಅನಂತ ತಂತ್ರಿ, ಸುಲೋಚನ ಚಂದ್ರಶೇಖರ್ ಶೆಟ್ಟಿ ಉಪಸ್ಥಿತರಿದ್ದರು.

2024ರ ಅತಿದೊಡ್ಡ ಬಾಕ್ಸಿಂಗ್‌ನಲ್ಲಿ ಮೈಕ್ ಟೈಸನ್ ಸೋಲಿಸಿ 338 ಕೋಟಿ ಗೆದ್ದ ಜೇಕ್ ಪೌಲ್



ವಾಷಿಂಗ್ಟನ್, ನ.16– 2024ರ ಬಾಕ್ಸಿಂಗ್ ಜಗತ್ತಿನ ಅತೀ ದೊಡ್ಡ ಮ್ಯಾಚ್ ಎಂದೇ ಕರೆಯಲಾಗುತ್ತಿದ್ದ ಬಾಕ್ಸಿಂಗ್ ದಂತಕಥೆ ಮೈಕ್ ಟೈಸನ್ ಮತ್ತು ಜೇಕ್ ಪೌಲ್ ನಡುವಿನ ಹೈವೋಲ್ಟೇಜ್ ಪಂದ್ಯದ ಅನಿರೀಕ್ಷಿತ ಫಲಿತಾಂಶದಲ್ಲಿ ಜೇಕ್ ಪೌಲ್ ಭರ್ಜರಿ ಗೆಲುವು ಸಾಧಿಸಿದ್ದಾರೆ.

20 ವರ್ಷಗಳ ಬಳಿಕ ಮತ್ತೆ ಬಾಕ್ಸಿಂಗ್ ರಿಂಗ್ ಬಂದ ಮೈಕ್ ಟೈಸನ್ ವಿರುದ್ಧ ತೊಡೆ ತಟ್ಟಿ ನಿಂತಿದ್ದ ಜೇಕ್ ಪೌಲ್ ಕೊನೆಗೂ ಗೆದ್ದು ಬೀಗಿದ್ದಾರೆ. 58 ವರ್ಷದ ಟೈಸನ್ ವಿರುದ್ಧ ಸೆಣಸಿದ್ದ ಪೌಲ್ ಭರ್ಜರಿ ಹೋರಾಟ ನೀಡಿ 79–73 ಅಂಕಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.

58 ವರ್ಷದ ಮೈಕ್ ಟೈಸನ್ ನಿಧಾನಗತಿ ಆಟದಿಂದ ಯೂಟ್ಯೂಬರ್ ಬಾಕ್ಸರ್ ಜೇಕ್ ಪೌಲ್ ಗೆದ್ದಿದ್ದಾರೆ. ಮೊದಲ ಎರಡು ಸುತ್ತಿನಲ್ಲಿ ಟೈಸನ್ ಟಫ್ ಫೈಟ್ ಗೆದ್ದಿದ್ದರು. ಆದರೆ ಬಳಿಕ ಜೇಕ್ ಬಲವಾದ ಪಂಚ್‌ಗಳ ಮೂಲಕ ಅಂಕಗಳಿಕೆ ಮಾಡಿಕೊಂಡರು. ಇದೀಗ ಬಹು ನಿರೀಕ್ಷಿತ ಫೈಟ್‌ನಲ್ಲಿ ಜೇಕ್ ಪೌಲ್ ಸರ್ವಾನುಮತದಿಂದ ಟೈಸನ್ ವಿರುದ್ಧ ಗೆದ್ದು ಬೀಗಿದ್ದಾರೆ. ಪಂದ್ಯದ ಮುಕ್ತಾಯದ ನಿಮಿಷಗಳಲ್ಲಿ ಪೌಲ್ ಮೈಕ್ ಟೈಸನ್‌ಗೆ ನಮಸ್ಕರಿಸಿದರು.

ಪಂದ್ಯಕ್ಕೂ ಮೊದಲೇ ಕಪಾಲ ಮೋಕ್ಷ ಮಾಡಿದ್ದ ಟೈಸನ್: 58 ವರ್ಷದ ಮಾಜಿ ವಿಶ್ವ ಹೆವಿವೇಯ್ಟ್ ಚಾಂಪಿಯನ್ ಮೈಕ್ ಟೈಸನ್ ಮರಳುತ್ತಿದ್ದಾರೆ ಎಂದಾಗಲೇ ವ್ಯಾಪಕ ಸುದ್ದಿಯಾಗಿತ್ತು. ಅವರ ವಿರುದ್ಧ ಯಾರು ಸೆಣಸುತ್ತಿದ್ದಾರೆ ಎಂದು ಅಭಿಮಾನಿಗಳು ಕುತೂಹಲದಿಂದಿದ್ದರು. ಬಳಿಕ ಟೈಸನ್‌ಗೆ 27 ವರ್ಷದ ಯುವ ಬಾಕ್ಸರ್ ಹಾಗೂ ಯೂಟ್ಯೂಬರ್ ಸವಾಲೆಸೆದಿದ್ದಾನೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತ್ತು.

ಇನ್ನು ತೂಕ ಪರೀಕ್ಷೆ ವೇಳೆ ಟೈಸನ್ ಕಾಲು ತುಳಿದಿದ್ದ ಪೌಲ್ ಕೆನ್ನೆಗೆ ಎಲ್ಲರ ಮುಂದೆಯೇ ಬಾರಿಸಿದ್ದರು. ನಗುತ್ತಲೇ ಸುಮ್ಮನಾಗಿದ್ದ ಜೇಕ್ ಈಗ ಸೋಲಿಸಿ ಸೇಡು ತೀರಿಸಿಕೊಂಡಿದ್ದಾರೆ. 2003ರಲ್ಲಿ ಮೈಕ್ ಟೈಸನ್ ಕೊನೆಯದಾಗಿ ಪಂದ್ಯವನ್ನು ಗೆದ್ದಿದ್ದರು. 2004 ಮತ್ತು 2005ರಲ್ಲಿ ಸೋಲನನುಭವಿಸಿದ ಬಳಿಕ ಬಾಕ್ಸಿಂಗ್‌ನಿಂದ ದೂರ ಉಳಿದಿದ್ದರು. ಈ ಪಂದ್ಯ ಘೋಷಣೆಯಾದಾಗಿನಿಂದಲೂ ಮೈಕ್ ಟೈಸನ್ ಮತ್ತು ಜೇಕ್ ಪೌಲ್ ನಡುವೆ ಸಂಘರ್ಷಗಳು ನಡೆಯುತ್ತಲೇ ಇತ್ತು.

338 ಕೋಟಿ ಗೆದ್ದ ಜೇಕ್ ಪೌಲ್: ಇನ್ನು ಈ ಬಹು ನಿರೀಕ್ಷಿತ ಪಂದ್ಯದಲ್ಲಿ ಜಯಭೇರಿ ಭಾರಿಸಿದ ಜೇಕ್ ಪೌಲ್ ಬರೊಬ್ಬರಿ 338 ಕೋಟಿ ರೂ ($40 million) ಮೊತ್ತದ ಬಹುಮಾನ ಸ್ವೀಕರಿಸಿದ್ದು, ಟೈಸನ್ ಕೂಡ 150 ಕೋಟಿ ರೂ ($20 million) ಸ್ವೀಕರಿಸಿದ್ದಾರೆ ಎಂದು ಫೋರ್ಬ್ಸ್ ವರದಿ ಮಾಡಿದೆ.





ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ ಮೈಸೂರು ನಗರ, ಕುವೆಂಪು ನಗರ, ಬಿ.ಇ.ಎಮ್.ಎಲ್ ಲೇಔಟ್, ಶ್ರೀರಾಂಪುರ, 2ನೇ ಹಂತ, 17ನೇ ಬ್ಲಾಕ್, ಮನೆ ನಂಬರ್ 32 ರ ನಿವಾಸಿಯಾದ ಶ್ರೀಮತಿ ಅಪೂರ್ವ ಎನ್.ಜೈನ್ ಬಿನ್ ಶ್ರೀ ಕೆ.ಬಿ. ನಾಭಿರಾಜ್ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಭಾಗಾಂಶ ಋಣ, ಭಾದ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮದರಗಳ್ಳಿ ಗ್ರಾಮದ ಸರ್ವೆ ನಂ. 9/1 ರಲ್ಲಿನ ಹನ್ನೆರಡು ಗುಂಟೆ (0.12.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ.
ಪೂರ್ವಕ್ಕೆ:– ಸರ್ವೆ ನಂ. 8/2 ರ ಜಮೀನು
ಪಶ್ಚಿಮಕ್ಕೆ:– ಉಂಡಬತ್ತಿ ಕೆರೆ ; ಉತ್ತರಕ್ಕೆ:– ಸರ್ವೆ ನಂ. 9/2, 3, 4, 5 ರ ಜಮೀನು ;
ದಕ್ಷಿಣಕ್ಕೆ: ಸರ್ವೆ ನಂ. 13, 14, 15 ರ ಜಮೀನು

Sd/- M.N. Prakash Kalappa
KAR-1996-2000
Advocate & Legal Consultant
#2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004.
Mob: 9343112535. Email: mnprakashkalappa@gmail.com
ಮೈಸೂರು, 15/11/2024

ಕನ್ನಡ ಅನುಷ್ಠಾನ ವರ್ಷ – 2009

ನಗರಸಭಾ ಕಾರ್ಯಾಲಯ, ಹುಣಸೂರು

ಮೈಸೂರು ಜಿಲ್ಲೆ – 571105
E-mail : itstaff_ulb_hunsur@yahoo.co.in ಫೋನ್: 08222-252048

ನಂ.ಹುನಕಾ/ ಆರೋಗ್ಯ ಶಾಖೆ /ಸಿ.ಆರ್– /2024–25 ದಿನಾಂಕ:16.11.2024

ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಈಗಾಗಲೇ ಹುಣಸೂರು ನಗರವ್ಯಾಪ್ತಿಯ ಎಲ್ಲಾ 31 ವಾರ್ಡ್‌ಗಳನ್ನು ಬಯಲು ಶೌಚಮುಕ್ತ (ODF) ವಾರ್ಡ್‌ಗಳೆಂದು ಘೋಷಿಸಿ ಪರಮಾಣೀಕರಿಸಲಾಗಿರುತ್ತದೆ. ಅದರಂತೆ ಬಯಲು ಶೌಚಮುಕ್ತ +(ODF+) ನಗರಕ್ಕಾಗಿ ನಿಗಧಿಪಡಿಸಿದ ಮಾನದಂಡಗಳನ್ನು ಅನುಸರಿಸಿ ಕ್ರಮವಹಿಸಲಾಗಿದ್ದು ಎಲ್ಲಾ 31 ವಾರ್ಡ್‌ಗಳು ಬಯಲು ಶೌಚಮುಕ್ತ +(ODF+) ವಾರ್ಡ್‌ಗಳೆಂದು ಘೋಷಿಸಬೇಕಿದ್ದು ಸಾರ್ವಜನಿಕರು, ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಈ ಕುರಿತು ತಮ್ಮ ಸಲಹೆಗಳನ್ನು ನಗರಸಭೆಗೆ ಲಿಖಿತ ರೂಪದಲ್ಲಿ ಸಲ್ಲಿಸುವುದು.

ಹುಣಸೂರು ನಗರಸಭೆಯು ಈಗಾಗಲೇ ಬಯಲು ಶೌಚಮುಕ್ತ (ODF) ಎಂದು ಪ್ರಮಾಣಿಕೃತ ನಗರವಾಗಿದ್ದು, ಸಾರ್ವಜನಿಕರು ಎಲ್ಲೆಂದರಲ್ಲಿ ಹಾಗೂ ತೆರೆದ ಪ್ರದೇಶದಲ್ಲಿ ಶೌಚ/ಮೂತ್ರ ವಿಸರ್ಜನೆ ಮಾಡುವುದು ಕಡ್ಡಾಯವಾಗಿ ನಿಷೇಧಿಸಿದೆ. ಕಂಡುಬಂದಲ್ಲಿ ಅಂತವರಿಗೆ ನಗರಸಭೆ ವತಿಯಿಂದ ಸೂಕ್ತ ದಂಡ ವಿಧಿಸಲಾಗುವುದು.

ಸಹಿ/–	ಸಹಿ/–
ಅಧ್ಯಕ್ಷರು	ಪೌರಾಯುಕ್ತರು
ನಗರಸಭೆ ಹುಣಸೂರು	ನಗರಸಭೆ ಹುಣಸೂರು



ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,

ಆಕುಕ ಇಂಜಿನಿಯರಿಂಗ್ ವಿಭಾಗ,

ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(E-mail: khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–13–2ನೇ ಕರೆ/2024–25 ದಿನಾಂಕ: 14.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಮೈಸೂರು ನಗರದಲ್ಲಿ Providing One Laboratory and Theatre Classroom to Government Ayurveda research centre KRS Road Mysuru ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. (ತಲಾ ಅಂದಾಜು ಮೊತ್ತ ರೂ.10.00 ಲಕ್ಷಗಳು).

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 25.11.2024 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 26.11.2024 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDMYS-811/KSMCA-552/2024-25

PUBLIC NOTICE

NOTICE IS HEREBY GIVEN that my client intends to purchase the industrial land situated at Hebbalu Village and Metagalli Village, Kasaba Hobli, from its land owner Schedule property as mentioned in below.

Sl.No.	Plot No.	ACRE	NAME OF THE LAND OWNER
1.	44 and 47	04-97 (20,117 Square Meters)	M/s Baliga Investments Private Limited represented by Managing Director Mr. M. Yogesh Dange and Director Mr. M. Manjunath Nayak.

The Owner has represented that it is the absolute owner and are in possession of the Schedule property and the Schedule Property is free from any kind of encumbrance, suits, and proceedings under any statute. Any person / persons asserting any right, title, interest, claim or demand whatsoever in the Schedule Property or any part thereof, by way of sale, exchange, mortgage, charge, lease, gift, inheritance, bequest, possession, lis pendences, maintenance, easement, memorandum of understanding, agreement, power of attorney, option, right of first refusal, pre-emption or otherwise whatsoever is hereby required to notify the same in writing to the undersigned within a period of **Ten (10) days** from the date of issuance of this notice with all documentary proof thereof failing which my client will treat the title of the schedule property as clear and marketable and will proceed to purchase the schedule property.

SCHEDULE PROPERTY

All that the piece and parcel of the Industrial Land bearing Plot No-44 and 47, in Belagola Industrial Area, Situated in Survey No-55 and 69 of Hebbalu Village and Survey No-22 of Metagalli Village, Kasaba Hobli, Mysuru Taluk and District, within the jurisdiction of Hootgalli Municipal Council, Property bearing No-1472758460, Ward No-33, (old No-984), Plot No-44 and 47, bounded on the: - East by: 80 Feet K R S Road, West by: Pipe Line Road, North by: Plot No-45 and 48, South by: Plot No-42 and 43.

H. L. Law Associates
Mallikarjuna .N.L., M.B.A., L.L.B
Advocate, Office address: # No. 652, 9th Cross, Near S B I, Aravindanagara, 1st Stage, Mysuru. Mob: 98446 76013